ರಂಜನೆ ಬೋಧನೆ ಪ್ರಚೋದನೆ


ಲಂಕೇಶ್

ಫೆಬ್ರವರಿ 20, 2013 ಪುಟ 20 ರೂ. 14/-


ಅಶೀಷ್ ನಂದಿ ಮತ್ತು ಭ್ರಷ್ಟಾಚಾರ



ನಾವಣಾ ಸಮೀಕ್ಷೆ
ಗುರಿದ ಕನಸು




ಸೀರೆಯಾಟ



ಸಂದರ್ಶನ

'ಲಿಂಗಾಯತರ ಹೆಸರಲ್ಲಿ RSS ಲೂಟಿ'

ಳುಬಿದ್ದ ಶೋ ಆಶ್ರಮ




ಕೈತಪ್ಪಿದ ಗೋಕರ್ಣ





ಬಾಗಲಕೋಟೆ ಮಟಾಷ್ ರಾಜಕೀಯ

ಳಗಾವಿ ಜೈಲಲ್ಲಿ ಗಾಂಜಾ ಹಬ್ಬ




ಪಾರ್ವತೀಶ ಬಿಡಿ ಚಿತ್ರಗಳು

ಟಿಪ್ಪು ವಿಶ್ವವಿದ್ಯಾಲಯದ ವಿರುದ್ಧ ಪುರೋಹಿತರ ಗುಂಪು ಗದ್ದಲ ನಡೆಸುತ್ತಿರುವ ಈ ಸಂದರ್ಭದಲ್ಲೇ ಟಿಪ್ಪು ಹತ್ಯೆಯಾದ ದಿನ ಶ್ರೀರಂಗಪಟ್ಟಣದಲ್ಲಿ ಏನಾಯಿತೆಂಬುದರ ಚಿತ್ರಣ ಇಲ್ಲಿದೆ. ಅಂದು ಟಿಪ್ಪು ವಿರುದ್ಧ ಬ್ರಿಟಿಷ್‌ರೊಂದಿಗೆ ಸೇರಿ ಪಿತೂರಿ ನಡೆಸಿದವರ ಪರಂಪರೆಗೆ ಸಂಘ ಪರಿವಾರದವರೂ ಸೇರುತ್ತಾರೆ. ಟಿಪ್ಪು ನಾಯಕತ್ವದಲ್ಲಿ ಅಂದಿನ ಮೈಸೂರು ರಾಜ್ಯ ತನ್ನ ವಾಣಿಜ್ಯ, ಕೃಷಿ, ಸೈನಿಕ ಶಕ್ತಿಯಲ್ಲಿ ಎಂತಹ ಸಾಧನೆಯ ಹಾದಿಯಲ್ಲಿತ್ತೆಂಬುದಕ್ಕೆ ಆತನ ಖಜಾನೆಯಲ್ಲಿದ್ದ ಸಂಪತ್ತಿನ ಮೌಲ್ಯವೂ ಸಾಕ್ಷಿಯಾಗುವಂತಿದೆ.

ಟಿಪ್ಪು ಮಡಿದ ಆ ದಿನ...

ಮೇ 4, 1799 ಟಿಪ್ಪು ಮಡಿದ ದಿನ.

ಅವತ್ತಿನ ಮಧ್ಯಾಹ್ನ ಶ್ರೀರಂಗಪಟ್ಟಣದ ಕೋಟೆಯೊಳಗೆ ನಡೆದ ಘಟನೆಗಳನ್ನು, ಅಂದರೆ ಟಿಪ್ಪು ಬದುಕಿನ ಕೊನೆಯ ನಿಮಿಷಗಳನ್ನು ಅನೇಕ ಇತಿಹಾಸಕಾರರು ದಾಖಲಿಸಿದ್ದಾರೆ. ಓರ್ವ ಅಪ್ರತಿಮ ಯೋಧ, ವಿದ್ವಾಂಸ, ಸುಧಾರಣಾವಾದಿ ರಾಜನೀತಿಜ್ಞನಾಗಿ ಪರಿಪೂರ್ಣ ವ್ಯಕ್ತಿ ಎನಿಸಿಕೊಂಡಿದ್ದ ಟಿಪ್ಪು ಯುದ್ಧಭೂಮಿಯಲ್ಲಿ ಗಾಯಗೊಂಡು ಬಿದ್ದಿದ್ದಾಗ ಬ್ರಿಟಿಷರ ಈಸ್ಟ್ ಇಂಡಿಯಾ ಕಂಪನಿಯ ಸಾಧಾರಣ ಸೈನಿಕನೊಬ್ಬನ ಕಣ್ಣಿಗೆ ಬಿದ್ದ. ಆತ ಅತೀ ಸಮೀಪದಿಂದ ಟಿಪ್ಪು ಹಣೆಗೆ ಗುರಿಯಿಟ್ಟು ತನ್ನ ಬಂದೂಕಿನಿಂದ ಗುಂಡು ಹಾರಿಸಿದಾಗ ಟಿಪ್ಪು ಸ್ಥಳದಲ್ಲಿಯೇ ಮಡಿದ. ತಾನು ಯಾರನ್ನು ಕೊಂದೆ ಎಂಬ ಅರಿವು ಆ



ಟಿಪ್ಪೂ ಶವದ ಬಳಿ ಬ್ರಿಟಿಷರು

ಸಿಪಾಯಿಗಿರಲಿಲ್ಲ. ಟಿಪ್ಪುವನ್ನು ಕೊಂದ ಆ ಸೈನಿಕ ಯಾರೆಂಬುದನ್ನು ಕಂಪನಿಯ ಮಿಲಿಟರಿ ಅಧಿಕಾರಿಗಳು ಮುಂದೆಂದೂ ಬಹಿರಂಗಪಡಿಸಲಿಲ್ಲ. ಹತ್ಯೆ ನಡೆಸಿದ ಸಿಪಾಯಿ ಮಾತ್ರ ಮಡಿದ ಟಿಪ್ಪು ಕೈಲಿದ್ದ ರತ್ನಖಚಿತ ಖಡ್ಗವನ್ನು ದೋಚಿಕೊಂಡು ಅಲ್ಲಿಂದ ಕಾಲ್ತೆಗೆದಿದ್ದ. 18ನೇ ಶತಮಾನದ ಏಷ್ಯಾದ ಅತ್ಯಂತ ಸಂಪದ್ಭರಿತವಾಗಿದ್ದ ಮೈಸೂರು ರಾಜ್ಯದ ಲೂಟಿ ಬಹುಶಃ ಹೀಗೆ ಶುರುವಾಯಿತೆಂದು ಹೇಳಬಹುದು. ಟಿಪ್ಪು ಮೃತ ದೇಹದ ಸುತ್ತಮುತ್ತಲೂ ಮೈಸೂರು ಸೇನೆಯ ಅನೇಕ ಸೇನಾಧಿಕಾರಿಗಳ, ಸಿಪಾಯಿಗಳ ಮೃತ ದೇಹಗಳು ಬಿದ್ದಿದ್ದವು. ಸ್ವಾತಂತ್ರ್ಯ ಘನತೆಗಾಗಿ ಮತ್ತು ಪರಾಧೀನರಾಗಲು ನಿರಾಕರಿಸಿ ಜೀವ ತೆತ್ತಿದ್ದರವರು.

1799ರ ಮೇ 4ರಿಂದ ಮೇ 6ರ ವರೆಗೆ ರಾಜಧಾನಿ ಶ್ರೀರಂಗಪಟ್ಟಣದಲ್ಲಿ ಕಂಪನಿಯ ಸೈನಿಕರು ನಡೆಸಿದ ಲೂಟಿ, ಹತ್ಯೆ, ಆಸ್ತಿಪಾಸ್ತಿ ನಾಶಗಳ ಬಗ್ಗೆ ಅಪಾರ ದಾಖಲೆಗಳಿವೆ. 18ನೇ ಶತಮಾನದ ಯುದ್ಧದ ನಿಯಮಗಳಿಗೆ ಇದೇನು ವ್ಯತಿರಿಕ್ತವಾಗಿರಲಿಲ್ಲ. ಹೈದರ್ ಅಲಿ ತನ್ನ ಮಿಲಿಟರಿ ಕಾರ್ಯಾಚರಣೆಗಳನ್ನು ನಡೆಸುತ್ತಿದ್ದಾಗಲೂ ಅವನ ಸೇನೆಗೂ ಗೆದ್ದ ಪ್ರಾಂತ್ಯ ಅಥವಾ ಕೋಟೆಯೊಳಗೆ ಲೂಟಿ, ಆಸ್ತಿಪಾಸ್ತಿಗಳ ನಾಶ ಮಾಡುವ ಪ್ರವೃತ್ತಿಯಿತ್ತು. ಆದರೆ, ಬಹುಬೇಗನೆ ಇಂಥ ಪ್ರವೃತ್ತಿಯಿಂದಾಗುವ ಹಾನಿಯನ್ನು ಅರಿತ ಹೈದರ್ ತನ್ನ ವಿಜಯಿ ಸೇನೆ ಲೂಟಿಯಲ್ಲಿ ತೊಡಗದಂತೆ ಕಠಿಣ ನಿಯಮಗಳನ್ನು ಜಾರಿಮಾಡಿದ್ದ.

ಟಿಪ್ಪು ಮಡಿದ ಮಾರನೇ ದಿನ, ಅಂದರೆ ಮೇ 5ರಂದು ಶ್ರೀರಂಗಪಟ್ಟಣದ ಗವರ್ನರ್ ಜನರಲ್ ಆಗಿ ಅಧಿಕಾರ ವಹಿಸಿಕೊಂಡ ಲಾರ್ಡ್ ವೆಲ್ಲೆಸ್ಲಿ ಮದ್ರಾಸಿನ ಗವರ್ನರ್ ಜನರಲ್ ಆಗಿದ್ದ ತನ್ನ ಸೋದರ ಲಾರ್ಡ್ ಮೌರಿಂಗ್ಟನ್ ವೆಲ್ಲೆಸ್ಲಿಗೆ ಮೇ 8ರಂದು ಒಂದು ಪತ್ರ ಬರೆಯುತ್ತಾ ಹೀಗೆ ವಿವರಿಸಿದ್ದ.

"ಮೇ 4ರಂದು ರಾತ್ರಿ ಶ್ರೀರಂಗಪಟ್ಟಣದಲ್ಲಿ ನಡೆದ ಘೋರ ಕೃತ್ಯಗಳು ಬಹುಶಃ ಮತ್ತೆಂದೂ ನಡೆಯಲಾರವು. ಪಟ್ಟಣದಲ್ಲಿ ಕಂಪೆನಿ ಸೈನಿಕರ ದಾಳಿಯಿಂದ ಪಾರಾದ ಒಂದೇ ಒಂದು ಮನೆಯೂ ಇಲ್ಲ, ಕಂಪನಿ ಸೈನಿಕರು ಟಿಪ್ಪು ಖಜಾನೆಯಿಂದ ಲೂಟಿ ಮಾಡಿರುವ ಅಪಾರ ಬೆಲೆಯ ಆಭರಣಗಳು, ಚಿನ್ನದ ಗಟ್ಟಿಗಳನ್ನು ಬಜಾರಿನಲ್ಲಿ ಮನಬಂದ ಬೆಲೆಗೆ ಮಾರುತ್ತಿದ್ದಾರೆ."

- ಭಯಭೀತರಾಗಿದ್ದ ನಾಗರಿಕರಿಗೆ ಬಂದೂಕು, ಕತ್ತಿಯ ಮೊನೆ ತೋರಿಸುತ್ತಾ ಬೆಲೆಬಾಳುವ ಪ್ರತಿಯೊಂದು ವಸ್ತುವನ್ನು ಕಂಪೆನಿಯ ಸೈನಿಕರು ದೋಚಿದರು. ಟಿಪ್ಪುವಿನ ಸೇನೆಯ ಹಾಗೂ ಆಡಳಿತದ ಉನ್ನತಾಧಿಕಾರಿಗಳ ಮನೆಗಳಿಗೆ ಕಂಪೆನಿ ಸೈನಿಕರು ನುಗ್ಗಿದಾಗ ಮಹಿಳೆಯರು ತಮ್ಮಲ್ಲಿದ್ದ ಬೆಲೆಬಾಳುವ ಆಭರಣ ಹಾಗೂ ವಸ್ತುಗಳನ್ನು ತಂದೊಪ್ಪಿಸಿ ಪ್ರಾಣ ಉಳಿಸಿಕೊಂಡರು. ಬ್ರಿಟಿಷ್ ಸೇನೆಯ ಗುಂಪೊಂದು ಟಿಪ್ಪುವಿನ ಅರಮನೆಗೆ ನುಗ್ಗಿ ಆತನ ಖಾಸಗಿ ತಿಜೋರಿಯನ್ನು ಲೂಟಿ ಮಾಡಿತು. ಸೈನಿಕರು ಅಲ್ಲಿದ್ದ ಚಿನ್ನದ ನಾಣ್ಯಗಳು, ಸ್ಟಾರ್ ಪಗೋಡಾಗಳು, ಆಭರಣಗಳನ್ನು ತಮ್ಮ ಮಿಲಿಟರಿ ಟೋಪಿಗಳಲ್ಲಿ, ಜೇಬುಗಳಲ್ಲಿ ಹಾಗೂ ಬ್ಯಾಗುಗಳೊಳಗೆ ತುಂಬಿಕೊಂಡು ಹೋದರು. ಇವರನ್ನು ನಿಯಂತ್ರಿಸಲು ಬಂದ ಸೇನೆಯ ಅಧಿಕಾರಿಗಳು ಲೂಟಿಯನ್ನು ನಿಲ್ಲಿಸುವಂತೆ ಆದೇಶ ನೀಡುತ್ತಲೇ ತಾವೂ ಕೈಗೆ ಸಿಕ್ಕಷ್ಟು ದೋಚುತ್ತಲೇ ಹೋದರು.

ಇವೆಲ್ಲಾ ವರದಿಗಳು ವೆಲ್ಲೆಸ್ಲಿಗೆ ತಲುಪಿದಾಗ ಆತ ತನ್ನ ಮೇಲಾಧಿಕಾರಿ ಸೋದರನಿಗೆ 'ಯುದ್ಧದಲ್ಲಿ ಗೆದ್ದ ಸೇನೆಗೆ ಅನ್ಯ ಕಾರ್ಯಗಳಿಲ್ಲದೆ ಹೋದರೆ ಅತ್ಯಂತ ಅಪಾಯಕಾರಿ' ಎಂದು ತುರ್ತು ಸಂದೇಶ ರವಾನಿಸಿ ಕೆಲವು ಕಠಿಣ ಕ್ರಮಗಳಿಗೆ ಆದೇಶಿಸಿದ. ಕೊನೆಗೆ ಕಂಪೆನಿಯು ವಿಜೇತ ಸೇನೆಯೊಳಗೆ ಶಿಸ್ತು ತರುವ ಸಲುವಾಗಿ ಲೂಟಿಯಲ್ಲಿ ತೊಡಗಿದ್ದವರ ಪೈಕಿ ಕೆಳಹಂತದ 19 ಸಿಪಾಯಿಗಳನ್ನು ಹಿಡಿಸಿ, ಮರಣದಂಡನೆ ಶಿಕ್ಷೆ ವಿಧಿಸಿ ಸಾರ್ವಜನಿಕ ಸ್ಥಳದಲ್ಲಿಯೇ ಕೊಲ್ಲಿಸುತ್ತಾನೆ.



ವೆಲ್ಲೆಸ್ಲಿ

ಬ್ರಿಟಿಷರ ಮಿಲಿಟರಿ ದಾಖಲೆಗಳಿಂದಲೇ ಈ ಲೂಟಿಯ ಅನೇಕ ವಿವರಗಳು ಸಿಗುತ್ತವೆ.

ನಾಲ್ಕನೇ ಆಂಗ್ಲೋ ಮೈಸೂರು ಯುದ್ಧದಲ್ಲಿ ಭಾಗವಹಿಸಿದ್ದ ಕರ್ನಲ್ ಬೈರಿ ಎಂಬಾತ ತನ್ನ "Dairy of an officer" ಎಂಬ ನೆನಪಿನ ಸಂಪುಟದಲ್ಲಿ ಬರೆಯುತ್ತಾ:

"74ನೇ ರೆಜಿಮೆಂಟಿನ ಸೈನಿಕನೊಬ್ಬ ಟಿಪ್ಪು ತಿಜೋರಿಯಿಂದ ದೋಚಿ ತಂದಿದ್ದ ವಜ್ರಖಚಿತ ತೋಳಬಂಧಿಯೊಂದನ್ನು ಸೇನೆಯ ವೈದ್ಯ ಡಾ. ಮಯನ್‌ಗೆ ಕೆಲವೇ ನೂರು ರೂಪಾಯಿಗಳಿಗೆ ಮಾರಿಕೊಂಡ. ವಾಸ್ತವವಾಗಿ ಅದರ ಬೆಲೆ 80 ಸಾವಿರ ಪೌಂಡುಗಳಿಗೂ ಹೆಚ್ಚಿತ್ತು' ಎಂದಿದ್ದಾನೆ.



ಕಂಪೆನಿಯ ಸೈನಿಕರು ತಾವು ದೋಚಿದ್ದ ಆಭರಣ, ಚಿನ್ನದ ನಾಣ್ಯಗಳನ್ನು ಹರಾಜು ಹಾಕುತ್ತಿದ್ದ ದೃಶ್ಯ ಶ್ರೀರಂಗಪಟ್ಟಣದ ಎಲ್ಲೆಲ್ಲೂ ಕಂಡುಬರುತ್ತಿತ್ತು. ಸಹಸ್ರಾರು ಪೌಂಡ್ ಬೆಲೆಯ ಅಮೂಲ್ಯ ವಸ್ತುಗಳನ್ನು ಸಣ್ಣಪುಟ್ಟ ಮೋಜು ಹಾಗೂ ಗುಟುಕು ಮದ್ಯಕ್ಕಾಗಿ ಮನಬಂದ ಬೆಲೆಗೆ ಸೈನಿಕರು ಮಾರಿಕೊಂಡರು. ಕೊನೆಗೆ ಈ ಲೂಟಿ, ಅರಾಜಕತೆಗಳು ತಹಬಂದಿಗೆ ಬಂದಕೂಡಲೇ 4ನೇ ಆಂಗ್ಲೋ ಮೈಸೂರು ಯುದ್ಧದ ಕಮಾಂಡರ್ ಇನ್ ಚೀಫ್ ಆಗಿದ್ದ ಜನರಲ್ ಹ್ಯಾರಿಸನು ಕಂಪೆನಿಯ ಸೇನೆಯ ಪ್ರತಿಯೊಬ್ಬರಿಗೂ ಅವರವರ ಯೋಗ್ಯತಾನುಸಾರ ಬಹುಮಾನ ನೀಡಬೇಕೆಂದು ಒತ್ತಾಯಿಸುತ್ತಾನೆ. ಅದಕ್ಕಾಗಿ ಬಹುಮಾನ ಸಮಿತಿಯೊಂದು (prize committee) ರಚನೆಯಾಗುತ್ತದೆ. ಹ್ಯಾರಿಸ್ ಇದರ ಅಧ್ಯಕ್ಷನಾಗಿಯೂ, ಜನರಲ್ ಫ್ಲಾಯ್ಡ್ ಬಹುಮಾನದ ಮೊತ್ತ ನಿರ್ಧರಿಸುವ ಅಧಿಕಾರಿಯಾಗಿಯೂ ನೇಮಕಗೊಳ್ಳುತ್ತಾರೆ. ಅವರ ಕೆಲಸಕ್ಕೆ ನೆರವಾಗಲು ಹಲವಾರು prize agentರನ್ನು ನೇಮಿಸಲಾಗುತ್ತದೆ. ಇವರು ತಮ್ಮ ಇಡೀ ಸೈನಿಕ ಶಿಬಿರವನ್ನು ಜಾಲಾಡಿ ಶೇ. 10ರ ಕಮಿಷನ್ ಆಧಾರದ ಮೇಲೆ ಲೂಟಿ ಮಾಡಿದ್ದ ವಸ್ತುಗಳನ್ನು ಮತ್ತೆ ವಶಪಡಿಸಿಕೊಳ್ಳುತ್ತಾರೆ. ಟಿಪ್ಪುವಿನ ಚಿನ್ನದ ಸಿಂಹಾಸನವನ್ನು ಮುರಿದು ಹಾಗೂ ಅಳಿದುಳಿದ ಸಂಪತ್ತನ್ನೆಲ್ಲಾ ಒಂದೆಡೆ ಶೇಖರಿಸಿ ಹರಾಜು ಮಾಡಿದಾಗ ಒಟ್ಟು 11.43 ಲಕ್ಷ ಪೌಂಡ್‌ನಷ್ಟು ಸಂಪತ್ತು ಸಂಗ್ರಹವಾಯಿತು. ಕೊನೆಗೆ ಇದನ್ನು ಕಂಪೆನಿ ಸೈನಿಕರಿಗೆ ಬಹುಮಾನದ ಮೊತ್ತವಾಗಿ ಹಂಚಲಾಯಿತು. ಕೆಲ ಹಿರಿಯ ಅಧಿಕಾರಿಗಳಿಗೆ ನಗದಿನ ಬದಲಾಗಿ ಬೆಲೆಬಾಳುವ ಆಭರಣಗಳನ್ನೇ ಹಂಚಲಾಯಿತು. ಜನರಲ್ ಜೇನ್ ಪೀಟರ್ ಎಂಬವರಿಗೆ ಗಜರತ್ನವೊಂದನ್ನು ನೀಡಲಾಯಿತು. ಆತ 1817ರಲ್ಲಿ ಅದನ್ನು ಬೇರೊಬ್ಬರಿಗೆ ಭಾರೀ ಬೆಲೆಗೆ ಮಾರಿಕೊಂಡ. ಜನರಲ್ ಹ್ಯಾರಿಸ್‌ಗೆ ಬಹುಮಾನವಾಗಿ ಒಟ್ಟು 1,42,902 ಪೌಂಡ್ ನಗದು ಮತ್ತು ಹತ್ತು ಸಾವಿರ ಪಗೋಡಾಗಳಷ್ಟು ಬೆಲೆಯ ಆಭರಣಗಳನ್ನು ಕಂಪೆನಿ ಮಂಜೂರು ಮಾಡಿತು. ಕರ್ನಲ್ ವೆಲ್ಲೆಸ್ಲಿ ನಾಲ್ಕು ಸಾವಿರ ಪೌಂಡ್ ಪಡೆದರೆ ಕೆಳಹಂತದ ಪ್ರತೀ ಸಿಪಾಯಿಗಳಿಗೂ ತಲಾ 5 ಪೌಂಡ್‌ಗಳ ಬಹುಮಾನ ನೀಡಲಾಯಿತು. ಟಿಪ್ಪು ವಿರುದ್ಧ ಬ್ರಿಟಿಷ್ ಸೇನೆಯೊಂದಿಗೆ ಕೈಜೋಡಿಸಿದ್ದ ಹೈದರಾಬಾದಿನ ನಿಜಾಮ್ ಸೇನೆಯ ಕಮ್ಯಾಂಡರ್ ಮೀರ್ ಆಲಂಗೆ ಒಂದು ಲಕ್ಷ ಪಗೋಡಾಗಳನ್ನು ಅವನ ಸೈನಿಕರಿಗೆ ಬಹುಮಾನವಾಗಿ ಹಂಚಲು ನೀಡಲಾಯಿತು.

>>> 5

ಮಹಿಂದ ರಾಜಪಕ್ಸೆ

'ಶ್ರೀಲಂಕಾದ ತಮಿಳರಿಗೆ ಸ್ವಾಯತ್ತತೆ ನೀಡುವ ಪ್ರಶ್ನೆಯೇ ಇಲ್ಲ' ಎಂದು ಅಧ್ಯಕ್ಷ ಮಹಿಂದ ರಾಜಪಕ್ಸೆ ಈಗ ಹೇಳಿದ್ದಾರೆ.

ಇದರರ್ಥ ಅಲ್ಲಿನ ತಮಿಳು ಜನಾಂಗೀಯರಿಗೆ ಸಮಾನತೆಯ ಹಾಗೂ ಬದುಕುವ ಅವಕಾಶವೂ ಇಲ್ಲ ಎಂಬುದೇ ಆಗಿದೆ. ಇದರ ಮುಂದುವರೆದ ಭಾಗವಾಗಿ ಶ್ರೀಲಂಕಾದಲ್ಲಿ ಇಂದಲ್ಲ ನಾಳೆ ಪುನಃ ಜನಾಂಗೀಯ ಸಶಸ್ತ್ರ ಹೋರಾಟ ತಲೆ ಎತ್ತಲಿದೆ ಎಂಬುದಾಗಿ ಅರ್ಥ ಮಾಡಿಕೊಳ್ಳಬೇಕಾಗಿ ಬರುತ್ತದೆ.

2009 ರ ಮೇ ತಿಂಗಳಲ್ಲಿ ತಮಿಳು ಹುಲಿಗಳ ಸಶಸ್ತ್ರ ಹೋರಾಟವನ್ನು ದಮನಿಸಿ, ನಂತರ ಸಾವಿರಾರು ಅಮಾಯಕ ಯುವಕರನ್ನು ನಿರ್ದಯೆಯಿಂದ ಕೊಲ್ಲಿಸಿದ ರಾಜಪಕ್ಸೆ ಅವತ್ತು ತಮಿಳರಿಗೆ ಸ್ವಾಯತ್ತತೆ, ಸಮಾನತೆ ಒದಗಿಸುವ ಮಾತಾಡಿದ್ದರು. ಈಗ ಅದೆಲ್ಲಾ ಸಾಧ್ಯವಿಲ್ಲ ಎನ್ನುತ್ತಿದ್ದಾರೆ.


ಇದು ಕೇವಲ ಲಂಕಾದ ಬಹುಸಂಖ್ಯಾತ ಸಿಂಹಳೀಯರ ಮನೋಭಾವವನ್ನು ಮಾತ್ರವಲ್ಲ, ಆ ಪುಟ್ಟ ದ್ವೀಪ ದೇಶವೂ ಹಾಗೂ ಅಲ್ಲಿನ ಪ್ರಜಾಪ್ರಭುತ್ವ ವ್ಯವಸ್ಥೆಯು ರಾಜಪಕ್ಸೆ ಕುಟುಂಬದ ಹಿಡಿತಕ್ಕೆ ಸಿಲುಕಿರುವ ಕೆಟ್ಟ ಪರಿಸ್ಥಿತಿಯ ಸೂಚನೆಯನ್ನೂ ನೀಡುತ್ತಿದೆ.

ಲಂಕಾದ ಸಂಸತ್‌ನಲ್ಲೀಗ ರಾಜಪಕ್ಸೆ ಕುಟುಂಬದ ಒಂಭತ್ತು ಮಂದಿ ಸದಸ್ಯರಿದ್ದಾರೆ. ಇವರ ಪೈಕಿ ಮಹಿಂದಾ ದೇಶದ ಅಧ್ಯಕ್ಷನಾಗಿದ್ದರೆ ಅವನ ಸೋದರ ಗೋಟಬಾಯಿ ರಾಜಪಕ್ಸೆ ದೇಶದ ರಕ್ಷಣಾ ಕಾರ್ಯದರ್ಶಿ, ಇನ್ನೊಬ್ಬ ಬಸಿಲ್ ರಾಜಪಕ್ಸೆ ಎಂಬುವನು ಅಧ್ಯಕ್ಷರ ಸಲಹೆಗಾರ ಮತ್ತು ಹಣಕಾಸು ಮಂತ್ರಿ, ನಿರುಪಮಾ ರಾಜಪಕ್ಸೆ ಎಂಬಾಕೆ ನೀರು ಸರಬರಾಜು ಸಚಿವೆ, ಶಮೀಂದ್ರ ರಾಜಪಕ್ಸೆ ವಾಯುಯಾನ, ಟೆಲಿಕಾಂ ಹಾಗೂ ಬಂದರು ಸಮಿತಿಗಳ ಮುಖ್ಯಸ್ಥೆ. ಪ್ರೀತಿ ರಾಜಪಕ್ಸೆಗೆ ಲಂಕಾದ ಸ್ಟಾಕ್ ಎಕ್ಸ್‌ಚೇಂಜ್‌ನ ಸದಸ್ಯತ್ವ! ಇದೇ ಕುಟುಂಬದ ಚಮಲ್ ರಾಜಪಕ್ಸೆ ಲಂಕಾ ಸಂಸತ್‌ನ ಸ್ಪೀಕರ್, ನಮಲ್ ರಾಜಪಕ್ಸೆ ಎಂಬುವನು ಸಂಸತ್ ಸದಸ್ಯ ಹಾಗೂ ಕ್ರೀಡಾ ವ್ಯವಹಾರಗಳ ಮುಖ್ಯಸ್ಥ!!




ಇವನ್ನೆಲ್ಲ ಒಟ್ಟಿಗೆ ಸೇರಿಸಿ ನೋಡಿದರೆ ಶ್ರೀಲಂಕಾ ದೇಶದ ಒಟ್ಟಾರೆ ವಾರ್ಷಿಕ ಬಜೆಟ್ ವ್ಯವಹಾರದ ಶೇ. 70 ರಷ್ಟನ್ನು ಈ ರಾಜಪಕ್ಸೆ ಕುಟುಂಬ ಈಗ ನಿಯಂತ್ರಿಸುತ್ತಿದೆ. ಅಲ್ಲಿ ಹೆಸರಿಗೆ ಪ್ರಜಾಪ್ರಭುತ್ವ ಎಂಬುದಿದ್ದರೂ ಸಂಸತ್ತು, ಸೇನೆ, ಆರ್ಥಿಕತೆ, ನ್ಯಾಯಾಂಗ, ಪೊಲೀಸು ಹೀಗೆ ಪ್ರತಿಯೊಂದೂ ಸೇರಿದಂತೆ ಇಡೀ ದೇಶವೇ ಈಗ ರಾಜಪಕ್ಸೆ ಕುಟುಂಬದ ಕೈಗೆ ಹೋಗಿದೆ. 1936 ರಿಂದಲೂ ರಾಜಕೀಯ ಅಧಿಕಾರದ ರುಚಿ ಕಂಡಿರುವ ರಾಜಪಕ್ಸೆ ಕುಟುಂಬಕ್ಕೆ ಪಾಳೆಗಾರಿಕೆಯ ಹಿನ್ನೆಲೆ ಇದೆ. ಅಂತವರಿಗೆ ಪ್ರಜಾಪ್ರಭುತ್ವದ ಮೌಲ್ಯಗಳು ಬೇಕಿರುವುದಿಲ್ಲ.

ಸ್ವಾತಂತ್ರ್ಯ ಬಂದಾಗಿನಿಂದಲೂ ಬಂಡಾರ ನಾಯಕೆ, ಸೇನಾ ನಾಯಕೆ, ರಾಜಪಕ್ಸೆ ಫ್ಯಾಮಿಲಿ ಪ್ರೈವೇಟ್ ಲಿಮಿಟೆಡ್‌ಗಳ ಹಿಡಿತದಲ್ಲೇ ಶ್ರೀಲಂಕಾ ಸಾಗಿ ಬಂದಿದೆ. 1980-90 ರ ದಶಕದಲ್ಲಿ ಸಿಂಹಳೀಯರು, ತಮಿಳು ಹಾಗೂ ಮುಸ್ಲಿಮರ ನಡುವೆ ಐಕ್ಯತೆ ಸಾಧಿಸಿ ಸಮಾಜವಾದಿ ಕ್ರಾಂತಿ ಸಾಧಿಸುವ ಒಂದು ಅಪರೂಪದ ಅವಕಾಶ ಇತ್ತು. ಆದರೆ ಅಲ್ಲಿನ ಮಾರ್ಕ್ಸಿಸ್ಟರಿಗೆ ತಮಿಳರ ಹೋರಾಟವು ಒಂದು ಸಂಕುಚಿತವಾದಿ ಜನಾಂಗೀಯ ಹೋರಾಟವಾಗಿಯು ಹಾಗೂ ತಮಿಳರಿಗೆ ಮಾರ್ಕ್ಸಿಸ್ಟರು ಸಿಂಹಳೀಯರ ದುರಭಿಮಾನಿ ಗುಂಪೆಂಬಂತೆ ಕಾಣಿಸಿ ಒಡಕು ಮುಂದುವರೆಯಲು ಅವಕಾಶ ನೀಡಿತು. ಇದನ್ನು ಬಳಸಿಕೊಂಡ ಸರ್ಕಾರ ಅಲ್ಲಿನ ದೊಡ್ಡ ಕ್ರಾಂತಿಕಾರಿ ನಾಯಕನಾಗಿದ್ದ ರೋಹನ ವಿಜೇವೀರನನ್ನು ಬಂಧಿಸಿ ನಂತರ ಸೆರೆಮನೆಯೊಳಗೇ ಕೊಲೆ ಮಾಡಿಸಿತು. ಇತ್ತ ತಮಿಳರಿಗೆ ಪ್ರಭಾಕರನ್ ನಾಯಕನಾದ.



ರೋಹನ ವಿಜೇವೀರ



'ಸೇತ್ತು ಮುಡಿ
ಇಲ್ಲೈ ಸತ್ತು ಮಡಿ'
(ಮಾಡಿ ಮುಗಿಸು ಇಲ್ಲಾ ಸತ್ತು ಬೀಳು)

-ಎಂಬ ಗಟ್ಟಿ ನಿರ್ಧಾರವನ್ನು ಪ್ರತಿಪಾದಿಸುತ್ತಿದ್ದ ಪ್ರಭಾಕರನ್ ಮತ್ತವರ ಜೊತೆಗಿದ್ದ ಸಾವಿರಾರು ಹೋರಾಟಗಾರರನ್ನು 2009 ರ ಕೊನೆಯ ಸುತ್ತಿನ ಯುದ್ಧದಲ್ಲಿ ರಾಜಪಕ್ಸೆ ಹೊಸಕಿ ಹಾಕಿದ.

ಈ ಅಮಾನುಷ ಹತ್ಯಾಕಾಂಡದ ಬಗ್ಗೆ ಈಗ ಜಿನೀವಾದಲ್ಲಿ ನಡೆಯಲಿರುವ ವಿಶ್ವಸಂಸ್ಥೆಯ ಮಾನವಹಕ್ಕುಗಳ ಸಮ್ಮೇಳನದಲ್ಲಿ ಅಮೆರಿಕಾ ಪ್ರಸ್ತಾಪಿಸಲು ಹೊರಟಿದೆ. ಸ್ವತಃ ಸಾಮೂಹಿಕ ನರಹತ್ಯೆಗಳ ಚಾಂಪಿಯನ್ ರಾಷ್ಟ್ರವಾಗಿರುವ ಅಮೆರಿಕಾ ಹೀಗೆ ಮಾಡಲು ಕಾರಣವೇನೆಂದರೆ ಶ್ರೀಲಂಕಾವು ಅಮೆರಿಕಾಗೆ ಬದಲಾಗಿ ಚೀನಾದೊಂದಿಗೆ ಹೆಚ್ಚು ಬಾಂಧವ್ಯ ಹೊಂದಿರುವುದೇ ಆಗಿದೆ.

ಮತ್ತೊಂದೆಡೆ [illegible] ಭಾರತ ಸರ್ಕಾರವು ಲಂಕಾ ಸರ್ಕಾರದ ಸಾಮೂಹಿಕ ಹತ್ಯೆ ಹಾಗೂ ಜನಾಂಗೀಯ ತಾರತಮ್ಯಗಳಿಗೆ ತನ್ನ ಮೌನ ಬೆಂಬಲ ನೀಡುತ್ತಲೇ ಇದೆ.

ಶ್ರೀಲಂಕಾದಲ್ಲೀಗ 'ಶಾಂತಿ' ನೆಲೆಸಿದೆ ಎನ್ನುತ್ತಿದ್ದಾನೆ ರಾಜಪಕ್ಸೆ. ಭಾರತ ಕೂಡ ಹೌದೆನ್ನುತ್ತಿದೆ. ಆದರೆ ದೌರ್ಜನ್ಯ ದಬ್ಬಾಳಿಕೆಯ ಮೂಲಕ ಸ್ಥಾಪಿತವಾಗುವ ಶಾಂತಿ ಹೆಚ್ಚುಕಾಲ ಬಾಳಿಕೆ ಬರುವುದಿಲ್ಲ. ಪುನಃ ಸಂಘಟಿತರಾಗಿ ಹೋರಾಟಕ್ಕಿಳಿಯುವುದು ಲಂಕಾ ತಮಿಳರಿಗೆ ಈಗ ಅನಿವಾರ್ಯವಾಗಬಹುದು.

...ಲೈಂಗಿಕ ದೌರ್ಜನ್ಯ ಕಾಯ್ದೆ ಮಹಿಳೆಯರನ್ನು ವಂಚಿಸಿರುವ ಕಾಂಗ್ರೆಸ್

...ಾಂಗ್ರೆಸ್ ನೇತೃತ್ವದ ಕೇಂದ್ರ ಯುಪಿಎ ಸರ್ಕಾರ ... ಎಲ್ಲಾ ಮಹಿಳೆಯರಿಗೆ ದೊಡ್ಡ ದ್ರೋಹ ...ದೆ. ಕಳೆದ ಡಿಸೆಂಬರ್ ತಿಂಗಳಲ್ಲಿ ದೆಹಲಿಯ ...ತಿಯ ಮೇಲೆ ಅಮಾನುಷವಾದ ಸಾಮೂಹಿಕ ...ಚಾರ ಮತ್ತು ಕೊಲೆ ಪ್ರಕರಣ ನಡೆದಾಗ ಈ ... ಪ್ರಜ್ಞಾವಂತ ಜನ ಆಕ್ರೋಶಗೊಂಡಿದ್ದರು. ... ಭಾಗಗಳಲ್ಲಿ ಪ್ರತಿಭಟನೆಗಳು ನಡೆದಿದ್ದವು. ...ಯಲ್ಲಂತೂ ಯುವಕ ಯುವತಿಯರು, ವೃದ್ಧರು, ...ು, ಎಲ್ಲ ವರ್ಗಗಳ ಜನ ಹಲವಾರು ದಿನಗಳ ...ಪ್ರತಿಭಟಿಸಿದ್ದರು. ಅಸಂಘಟಿತವಾಗಿ ಎಲ್ಲೆಡೆ ... ಜನರ ಇಂತಹ ಪ್ರತಿರೋಧವನ್ನು ಆರಂಭದಲ್ಲಿ ...ಸಲು ಪ್ರಯತ್ನಿಸಿದ ಸರ್ಕಾರ ಅದರಲ್ಲಿ ...ಗೊಂಡಿತಲ್ಲದೆ ಕೊನೆಗೂ ವಿಧಿ ಇಲ್ಲದೆ ...ತ್ತಿಕೊಂಡಿತ್ತು. ಇನ್ನು ಮುಂದೆ ಮಹಿಳೆಯರ ... ಸೂಕ್ತ ಕಾನೂನನ್ನು ತರುವುದಾಗಿ ...ಸೆಯನ್ನೂ ನೀಡಿತ್ತು.


...ದರೀಗ ಕೇಂದ್ರ ಸರ್ಕಾರ ಜನರ ಕಣ್ಣೊರೆಸುವ ...ಮಾಡಿದೆ. ಇದೇ ತಿಂಗಳ ಮೊದಲ ದಿನ ...ಳೆಯರ. ಮೇಲಿನ ಲೈಂಗಿಕ ಹಿಂಸೆ ಕುರಿತಂತೆ ...ವಾಜ್ಞೆಯೊಂದನ್ನು ಹೊರಡಿಸಿ ಅದಕ್ಕೆ ...ಪತಿಗಳ ಅನುಮೋದನೆಯನ್ನೂ ಪಡೆದಿದೆ. ಆದರೆ ...ಹೊಸ ಕಾನೂನುಗಳನ್ನು ಈಗಾಗಲೇ ದೇಶದ ... ಮಹಿಳಾ ಸಂಘಟನೆಗಳು ಮತ್ತು ನಾಗರಿಕ ...ಸ ವಿರೋಧಿಸಲಾರಂಭಿಸಿವೆ.

...ಲ್ಲರಿಗೂ ಗೊತ್ತಿರುವಂತೆ ಮಹಿಳೆಯರ ರಕ್ಷಣೆ ...ಂತೆ ಸಲಹೆಗಳನ್ನು ಕೊಡಲು ಸರ್ಕಾರವೇ ಮಾಜಿ ... ನ್ಯಾಯಮೂರ್ತಿ ವರ್ಮ ಅವರ ನೇತೃತ್ವದಲ್ಲಿ ... ಸಮಿತಿಯನ್ನು ರಚಿಸಿತ್ತು. ಆ ಸಮಿತಿ ಕೂಡ ...ನಿಗದಿಪಡಿಸಿದ್ದ ಸಮಯದಲ್ಲೇ ತನ್ನ ...ಮನ್ನೂ ಸರ್ಕಾರಕ್ಕೆ ಸಲ್ಲಿಸಿತ್ತು. ವರ್ಮಾ ...ಯ ಶಿಫಾರಸ್ಸುಗಳನ್ನು ಮಹಿಳಾ ಸಂಘಟನೆಗಳೂ ... ಸ್ವಾಗತಿಸಿದ್ದವು ಮತ್ತು ಅವುಗಳನ್ನು ಕಾನೂನಿನಲ್ಲಿ ...ಬೇಕೆಂದು ಒತ್ತಾಯಿಸಿದ್ದವು.

...ದರೆ ಸರ್ಕಾರ ಹೊಸ ಕಾನೂನನ್ನು ...ಸುವಾಗ ಜಸ್ಟೀಸ್ ವರ್ಮ ಸಮಿತಿಯ ...ಮ ಸಲಹೆಗಳನ್ನು ನಿರ್ಲಕ್ಷಿಸಿ, ಕೆಲವೇ ಕೆಲವು ...ಖ್ಯ ಮತ್ತು ಪರಿಣಾಮಕಾರಿಯಲ್ಲದ ಸಲಹೆಗಳನ್ನು ...ವಾಜ್ಞೆಯಲ್ಲಿ ಸೇರಿಸಿದೆ. ಆ ಮೂಲಕ ಸರ್ಕಾರ ...ಾಂತ್ರಿಕ ಪ್ರಕ್ರಿಯೆಯನ್ನು ...ಕುಗೊಳಿಸಿದೆಯಲ್ಲದೆ ಕಾನೂನಿನಲ್ಲಿ ಸೂಕ್ತ ...ಾವಣೆಯನ್ನು ಬಯಸಿದ್ದ ಎಲ್ಲರಿಗೂ ಮೋಸ ...ದೆ. ಇನ್ನೂ ಸರಿಯಾಗಿ ಹೇಳಬೇಕೆಂದರೆ ...ಯಲ್ಲಿ ಸತ್ತ ಯುವತಿಯ ನೆನಪಿನ ಮೇಲೆ ...ವೇ ಮತ್ತೊಮ್ಮೆ ದಾಳಿ ಮಾಡಿದೆ.

...ೂದಲನೆಯದಾಗಿ ಪ್ರಭುತ್ವದ ದಮನದ ...ಾಗಿ ಸಶಸ್ತ್ರ ಪಡೆಗಳು ಮಹಿಳೆಯರ ಮೇಲೆ ...ವ ಘೋರ ಲೈಂಗಿಕ ದಾಳಿಯನ್ನೂ ಶಿಕ್ಷೆಗೆ ...ಪಡಿಸಬೇಕೆಂದು ಜನ ಮಾತ್ರವಲ್ಲ ವರ್ಮ ...ಯೂ ಹೇಳಿತ್ತು. ಯಾಕೆಂದರೆ ಈಗ ಎಲ್ಲರೂ ...ೆ ಸಶಸ್ತ್ರ ಪಡೆಗಳ ವಿಶೇಷ ಅಧಿಕಾರ ಕಾಯಿದೆ ...ಎಸ್‌ಪಿಎ) ಅಡಿ ಈಶಾನ್ಯ ರಾಜ್ಯಗಳಲ್ಲಿ ಮತ್ತು ಕಾಶ್ಮೀರದಲ್ಲಿ ಸೈನಿಕರು ಮತ್ತು ಪೊಲೀಸರು ಮಹಿಳೆಯರ ಮೇಲೆ ನಡೆಸಿರುವ ಹಲವಾರು ಲೈಂಗಿಕ ದೌರ್ಜನ್ಯ ಪ್ರಕರಣಗಳು ಜಗಜ್ಜಾಹೀರಾಗಿವೆ. ಆದರೂ ಒಬ್ಬನೇ ಒಬ್ಬ ಸೈನಿಕನಾಗಲಿ, ಪೊಲೀಸಪ್ಪನಾಗಲಿ ವಿಚಾರಣೆಗೆ ಒಳಗಾಗಿಲ್ಲ. ಯಾಕೆಂದರೆ ಸದ್ಯದ ಕಾನೂನಿನಡಿ ಅದಕ್ಕೆ ಅವಕಾಶವಿಲ್ಲ.

ಎಎಫ್‌ಎಸ್‌ಪಿಎ ಕಾನೂನನ್ನು ರದ್ದುಗೊಳಿಸಬೇಕೆಂದು ಮಣಿಪುರದ ಹೋರಾಟಗಾರ್ತಿ ಇರೋಮ್ ಶರ್ಮಿಲಾ ಉಪವಾಸ ಪ್ರಾರಂಭಿಸಿ ಇಲ್ಲಿಗೆ ಹದಿಮೂರು ವರ್ಷಗಳೇ ಗತಿಸಿವೆ. ಹಾಗೆಯೇ ಮಣಿಪುರದ ಹತ್ತಾರು ತಾಯಂದಿರು ಇಂಫಾಲ್‌ನಲ್ಲಿರುವ ಸೇನೆಯ ಕಚೇರಿ ಮುಂದೆ ಅಸಹಾಯಕತೆಯಿಂದ ಬೆತ್ತಲಾಗಿ ಪ್ರತಿಭಟಿಸಿ ಒಂಭತ್ತು ವರ್ಷಗಳಾಗಿವೆ. ಈ ಮಧ್ಯೆ ಹಲವಾರು ಮಹಿಳಾ ಸಂಘಟನೆಗಳೂ ಎಎಫ್‌ಎಸ್‌ಪಿಎ ವಿರುದ್ಧ ದನಿ ಎತ್ತಿದ್ದಾರೆ. ವರ್ಮ ಸಮಿತಿ ಕೂಡ ಸಶಸ್ತ್ರ ಪಡೆಗಳ ಸದಸ್ಯರು ಮಹಿಳೆಯರ ಮೇಲೆ ನಡೆಸುವ ಲೈಂಗಿಕ ಹಿಂಸೆಯ ವಿಚಾರಣೆ ನಡೆಸಲು ಸರ್ಕಾರದ ಪೂರ್ವಾನುಮತಿ ಬೇಕಿಲ್ಲ ಎಂದು ಶಿಫಾರಸ್ಸು



ಮಾಡಿತ್ತು. ಇಷ್ಟೆಲ್ಲ ಹಿನ್ನೆಲೆ ಇದ್ದರೂ ಸರ್ಕಾರ ಹೊಸ ಕಾನೂನಿನಲ್ಲಿ ಸೇರಿಸಿಲ್ಲ.

ಸುಗ್ರೀವಾಜ್ಞೆಯು ಸಶಸ್ತ್ರ ಪಡೆಗಳ ಇಂತಹ ಕೃತ್ಯವನ್ನು ಹೀನಾಯ ಹಿಂಸೆಯೆಂದು ಪರಿಗಣಿಸಿದ್ದರೂ ಅದರ ವಿಚಾರಣೆಗೆ ಸರ್ಕಾರದ ಪೂರ್ವಾನುಮತಿ ಬೇಕೆಂಬುದನ್ನು ರದ್ದುಗೊಳಿಸಿಲ್ಲ. ಹಾಗೆಯೇ ವರ್ಮಾ ಸಮಿತಿ ಶಿಫಾರಸ್ಸು ಮಾಡಿದಂತೆ ಕೆಳಗಿನವರು ಒಂದು ಗುಂಪಾಗಿ ಮಾಡಿದ ತಪ್ಪಿಗೆ ಮೇಲಧಿಕಾರಿಯ ಹೊಣೆಗಾರಿಕೆಯ ತತ್ವವನ್ನು ಸಹ ಸರ್ಕಾರ ಕೈಬಿಟ್ಟಿದೆ. ಇದು ಈಶಾನ್ಯ ಮತ್ತು ಕಾಶ್ಮೀರದ ಮಹಿಳೆಯರಿಗೆ ಸರ್ಕಾರ ಮಾಡಿದ ಅನ್ಯಾಯವಲ್ಲದೆ ಇನ್ನೇನು.

ಹೊಸ ಕಾನೂನಿನಲ್ಲಿ ವೈವಾಹಿಕ ಚೌಕಟ್ಟಿನಲ್ಲಿ ನಡೆಯುವ ಲೈಂಗಿಕ ಹಿಂಸೆಯನ್ನೂ ಸೇರಿಸಬೇಕೆಂದು ಒತ್ತಾಯಿಸಲಾಗಿತ್ತು. ಅಂದರೆ ಹೆಂಡತಿಯ ಸಮ್ಮತಿ ಇಲ್ಲದೆ ಆಕೆಯ ಮೇಲಾಗುವ ಲೈಂಗಿಕ ಕ್ರಿಯೆಯೂ ಅಪರಾಧ ಎಂದು ಪರಿಗಣಿಸಬೇಕು ಎಂಬುದು ಮಹಿಳಾ ಸಂಘಟನೆಗಳ ಆಶೆಯಾಗಿತ್ತು. ಆದರೆ ಸರ್ಕಾರ ಈ ಅಂಶವನ್ನು ಕಾನೂನಿನಲ್ಲಿ ಸೇರಿಸಿಲ್ಲ. ಅದರರ್ಥ ದಾಂಪತ್ಯ ಜೀವನದಲ್ಲಿ ಗಂಡನಿಂದ ಲೈಂಗಿಕ ಆಕ್ರಮಣಕ್ಕೆ ತುತ್ತಾಗುವ ಮಹಿಳೆಯರಿಗೆ ಯಾವುದೇ ಕಾನೂನಿನ ಬೆಂಬಲ ಇಲ್ಲದಂತಾಗಿದೆ. ಆ ಮೂಲಕ ಅಮಾಯಕ ಮಹಿಳೆಯರನ್ನು ತಬ್ಬಲಿ ಮಾಡಿದೆ ಕೇಂದ್ರ ಸರ್ಕಾರ.

ನಮ್ಮ ದೇಶದಲ್ಲಿ ಜಾತಿಯನ್ನೇ ಆಧಾರವಾಗಿಟ್ಟುಕೊಂಡು ಕೆಳಜಾತಿಯ ಮಹಿಳೆಯವರ ಮೇಲೆ ಮೇಲು ಜಾತಿಯ ಪುರುಷರು ನಡೆಸುವ ಲೈಂಗಿಕ ದಾಳಿಗಳು ಕಡಿಮೆ ಏನಲ್ಲ. ಆದರೆ ಸರ್ಕಾರ ಈ ಅಂಶವನ್ನೂ ನಿರ್ಲಕ್ಷಿಸಿದೆ.

ಅದೇರೀತಿ ಸಾರ್ವಜನಿಕ ಅಧಿಕಾರಿಯೊಬ್ಬ ಮಹಿಳೆಯ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದರೆ ಆತನ ವಿರುದ್ಧ ದೂರು ನೀಡಲು ಸರ್ಕಾರದ ಪೂರ್ವಾನುಮತಿಯನ್ನು ಈ ಹೊಸ ಕಾನೂನು ಕಡ್ಡಾಯ ಮಾಡಿದೆ. ಮೊದಲೇ ಸರ್ಕಾರ, ಅಧಿಕಾರಿ ಎಂದೆಲ್ಲ ಮಹಿಳೆಯರು ಹೆದರುವಾಗ ಇಂತಹ ಕಾನೂನು ಇದ್ದರೆ ತನ್ನ ಮೇಲೆ ಅತ್ಯಾಚಾರ ನಡೆಸಿದ ಅಧಿಕಾರಿಯ ವಿರುದ್ಧ ದೂರು ಕೊಡಲು ಎಲ್ಲಿಂದ ಧೈರ್ಯ ಪಡಬೇಕು. ಸರ್ಕಾರಕ್ಕೆ ನಿಜವಾಗಲೂ ಮಹಿಳೆಯರ ರಕ್ಷಣೆಗಿಂತ ಅಧಿಕಾರಿಗಳ ರಕ್ಷಣೆಯೇ ಮುಖ್ಯ ಎಂಬುದನ್ನು ಸಾಬೀತುಪಡಿಸುತ್ತದಲ್ಲವೇ?

ಈಗಿರುವ ಪದ್ಧತಿಯ ಪ್ರಕಾರ ಅತ್ಯಾಚಾರಕ್ಕೆ ಗುರಿಯಾದ ಮಹಿಳೆಯನ್ನು ವೈದ್ಯರು ದೈಹಿಕ ತಪಾಸಣೆಗೆ ಒಳಪಡಿಸಿದಾಗ 'ಎರಡು ಬೆರಳಿನ ಪರೀಕ್ಷೆ'ಯನ್ನು ನಡೆಸುತ್ತಾರೆ. ಇದು ಅವಮಾನಕಾರಿ

ಕಂಡಹಾಗೆ



editorlankesh@gmail.com • ಗೌರಿ ಲಂಕೇಶ್

ಮಾತ್ರವಲ್ಲ, ಮಹಿಳೆಯ ದೇಹದ ಮೇಲೆ ಮಾಡಲಾಗುವ ಅತಿಕ್ರಮಣ ಎಂದೇ ಈ ಪರೀಕ್ಷಾ ವಿಧಾನವನ್ನೂ ರದ್ದು ಪಡಿಸಬೇಕೆಂದು ಮಹಿಳಾ ಸಂಘಟನೆಗಳು ಒತ್ತಾಯಿಸಿದ್ದವು. ಆದರೆ ಹೊಸ ಕಾನೂನು ಈ ಪರೀಕ್ಷಾ ವಿಧಾನವನ್ನು ರದ್ದುಪಡಿಸಿಲ್ಲ.

ಇನ್ನೊಂದು ಆಘಾತಕಾರಿ ಅಂಶ ಯಾವುದೆಂದರೆ ತನ್ನ ಮೇಲೆ ಅತ್ಯಾಚಾರ ನಡೆದಿದೆ ಎಂದು ಸಾಬೀತುಪಡಿಸುವ ಹೊಣೆಯನ್ನು ಮಹಿಳೆಯ ಮೇಲೆ ಹೇರಲಾಗಿದೆಯೇ ಹೊರತು ತಾನು ಅತ್ಯಾಚಾರ ಎಸಗಿಲ್ಲ ಎಂದು ಸಾಬೀತುಪಡಿಸುವ ಹೊಣೆಯನ್ನು ಆರೋಪಿಯ ಮೇಲೆ ವಿಧಿಸಿಲ್ಲ. ಇದರ ಅರ್ಥ ಪೊಲೀಸ್ ಮತ್ತು ನ್ಯಾಯಾಲಯಗಳಲ್ಲಿ ಅತ್ಯಾಚಾರಕ್ಕೊಳಗಾದ ಮಹಿಳೆಯೇ ಅವಮಾನ ಎದುರಿಸುವ ಪರಿಸ್ಥಿತಿ ಬದಲಾಗಿಲ್ಲ.

1984ರಲ್ಲಿ ಇಂದಿರಾ ಗಾಂಧಿಯವರ ಹತ್ಯೆಯಾದ ನಂತರದಲ್ಲಿ ದೆಹಲಿಯಲ್ಲಿ ನಡೆದ ಕೋಮು ಗಲಭೆಗಳಲ್ಲಿ ಮತ್ತು 2002ರಲ್ಲಿ ಗುಜರಾತಿನಲ್ಲಿ ಅಲ್ಪಸಂಖ್ಯಾತ ಮೇಲಾದ ದಾಳಿಯಲ್ಲಿ ಮಹಿಳೆಯರ ಮೇಲೆ ಅತ್ಯಾಚಾರಗಳು ನಡೆದದ್ದು ಈಗ ಜನಜನಿತವಾಗಿವೆ. ಆದ್ದರಿಂದಲೇ ಧರ್ಮ, ಜಾತಿ ಮತ್ತು ಗಲಭೆಗಳಲ್ಲಿ ನಡೆಯುವ ದೌರ್ಜನ್ಯಗಳನ್ನೂ ಕಾನೂನಿನಲ್ಲಿ ಸೇರಿಸಬೇಕೆಂದು ಒತ್ತಾಯವಿತ್ತು. ಆದರೆ ಈ ಬೇಡಿಕೆಯನ್ನೂ ಸರ್ಕಾರ ನಿರ್ಲಕ್ಷಿಸಿದೆ.

ದೆಹಲಿಯ ಯುವತಿಯ ಪ್ರಕರಣದ ನಂತರ ಹಲವು ಕಡೆ ಅತ್ಯಾಚಾರಿಗಳಿಗೆ ಮರಣದಂಡನೆಯನ್ನು ವಿಧಿಸಬೇಕೆಂಬ ಕೂಗು ಕೇಳಿಬಂದಿತ್ತು. ಆದರೆ ಅದನ್ನು ಮಹಿಳಾ ಸಂಘಟನೆಗಳು ವಿರೋಧಿಸಿದ್ದವು. ಇದಕ್ಕೆ ಮುಖ್ಯ ಕಾರಣ ಅತ್ಯಾಚಾರ ಎಸಗಿದ ಆರೋಪಿ ತನ್ನ ಕೃತ್ಯದ ಸಾಕ್ಷಿಗಳನ್ನು ನಾಶಮಾಡುವ ನಿಟ್ಟಿನಲ್ಲಿ ಆ ಮಹಿಳೆಯನ್ನೇ ಕೊಂದು ಹಾಕುವ ಸಾಧ್ಯತೆ. ಹೊಸ ಕಾನೂನು ಮರಣದಂಡನೆಯನ್ನು ವಿಧಿಸುವ ಮೂಲಕ ಮಹಿಳೆಯರ ಪ್ರಾಣಕ್ಕೆ ಕುತ್ತುತಂದಿದೆ.

ಈ ಎಲ್ಲ ಕಾರಣಕ್ಕೆ ಕೇಂದ್ರ ಸರ್ಕಾರ ದೇಶದ ಮಹಿಳೆಯರಿಗೆ ದ್ರೋಹ ಬಗೆದಿದೆ ಎಂದರೆ ಅದು ಅತಿಶಯೋಕ್ತಿಯಲ್ಲ. •

ರಗಳೆ ರಾಘವನ ಜೋಳಿಗೆಯಿಂದ ಜಾರುತಿದೆ ಗೋಕರ್ಣ ದೇಗುಲ!!

ಗೋಕರ್ಣ ಮಹಾಬಲೇಶ್ವರನನ್ನು ನುಂಗಿ ನೊಣೆಯುವ ಸರ್ಕಾರಿ ಸ್ವಾಮೀಜಿ ಅರ್ಥಾತ್ ರಾಮಚಂದ್ರಾಪುರ ಮಠಾಧೀಶ ರಾಘವೇಶ್ವರ ಭಾರತಿಯ ರಗಳೆಗೆ ಈಗೊಂದು ವಿಲಕ್ಷಣ ಆಯಾಮ ಬಂದಿದೆ!



ಅಪಾರ ಆಸ್ತಿ-ಆದಾಯದ ಗೋಕರ್ಣ ದೇವಸ್ಥಾನವನ್ನು ಅಂದಿನ ಸಿಎಂ ಯಡ್ಡಿ ಮಹಾತ್ಮ ಅದ್ಯಾವ ಕೆಟ್ಟ ಗಳಿಗೆಯಲ್ಲಿ ರಾಘವನ ಜೋಳಿಗೆಗೆ ಹಾಕಿದ್ದರೋ ಏನೋ? ಈ ಸಿರಿವಂತ ದೇವರನ್ನು ದಕ್ಕಿಸಿಕೊಳ್ಳಲು ಅದೆಷ್ಟೇ ಅಕ್ರಮ-ಅನ್ಯಾಯ-ಅವಾಂತರ ಮಾಡಿದರೂ ರಾಘವನಿಗೆ ಅದು ಸಾಧ್ಯವೇ ಆಗುತ್ತಿಲ್ಲ, ಕೋರ್ಟು-ಕಚೇರಿ ವ್ಯಾಜ್ಯ, ಸಾರ್ವಜನಿಕ, ಕಾವಿ ವಲಯದ ಪ್ರತಿರೋಧದಿಂದ ಕಾನೂನು ಕುಣಿಕೆಗೆ ಸಿಲುಕಿ ಒದ್ದಾಡುತ್ತಿರುವ ರಾಘವ ಬಚಾವಾಗಲು ಹೊಸದೊಂದು ಹಿಕಮತ್ತಿಗೆ ಕೈಹಾಕಿದ್ದಾನೆ. ತಾಂತ್ರಿಕವಾಗಿ ಸದ್ರಿ ದೇಗುಲ ತನ್ನ ತಾಬಾ ಇಲ್ಲವೆಂದು ನ್ಯಾಯಾಲಯಕ್ಕೆ ತೋರಿಸಿ ಯಾಮಾರಿಸುವ ರಿನೋಟಿಫೈಡ್ ತಂತ್ರ-ಮಂತ್ರ ರಾಘವ ಮಾಡುತ್ತಿದ್ದಾನೆ!

ಯಡ್ಡಿ ತನ್ನ ಆಸ್ಥಾನ ಪುರೋಹಿತನಂತಿದ್ದ ರಾಘವನಿಗೆ ಮುಜರಾಯಿ ಇಲಾಖೆಯ ಗೋಕರ್ಣ ದೇವಸ್ಥಾನವನ್ನು ಆಗಸ್ಟ್ 14, 2008ರಂದು ಬಳುವಳಿಯಾಗಿ ಕೊಡುತ್ತಾರೆ. ಜನಾಭಿಪ್ರಾಯ ಬುಲ್ಡೋಜ್ ಮಾಡಿ ದಾದಾಗಿರಿಯಿಂದ ಸಿಎಂ ಯಡ್ಡಿ, ಆತನ ಮುಜರಾಯಿ ಮಂತ್ರಿ ಕೃಷ್ಣಯ್ಯ ಶೆಟ್ಟಿ, ಮುಜರಾಯಿ ಆಯುಕ್ತ ಕೆ. ಪ್ರಭಾಕರರಾವ್, ಮುಜರಾಯಿ ಕಾರ್ಯದರ್ಶಿ ನಾರಾಯಣಸ್ವಾಮಿ, ಕೇಸ್ ವರ್ಕರ್ ಶ್ರೀಕಂಠಬಾಬು ಮತ್ತು ಕುಮಟಾ ಎಸಿ ಚೌಗುಲೆ ಗೋಕರ್ಣ ದೇವಸ್ಥಾನವನ್ನು ಏಕಪಕ್ಷೀಯವಾಗಿ ರಾಘವನ ಮಠಕ್ಕೆ ಹಸ್ತಾಂತರಿಸುತ್ತಾರೆ. ಆಗ ಇಡೀ ರಾಜ್ಯದಲ್ಲಿ ಕೋಲಾಹಲವೇ ಆಗುತ್ತದೆ. ಗೋಕರ್ಣದಲ್ಲಂತೂ ಬ್ರಾಹ್ಮಣ ಬಳಗ ಎರಡಾಗಿ ಒಡೆದು ಘನಘೋರ ಕಾಳಗವೇ ಶುರುವಾಗುತ್ತದೆ. ರಾಘವ ಸರ್ಕಾರ ಯಂತ್ರವನ್ನು ಬಳಸಿ ಹಿಂಸಾಚಾರದಿಂದ ಎದುರಾಳಿಗಳ ಬಗ್ಗುಬಡಿಯಲು ಹವಣಿಸಿದರೆ, ವಿರೋಧಿ ತಂಡ ನ್ಯಾಯಾಲಯದಲ್ಲಿ ಕೇಸುಗಳ ಮೇಲೆ ಕೇಸು ಜಡಿಯುತ್ತದೆ. ಸಾರ್ವಜನಿಕ ದೇವಾಲಯವನ್ನು ಖಾಸಗಿ ಮಠಕ್ಕೆ ಕೊಡುವುದು ಕಾನೂನು ಬಾಹಿರವೆಂದು ವಾದ ಮಂಡಿಸುತ್ತದೆ.

ಮಹಾಬಲೇಶ್ವರನ ಸಂಪತ್ತಿನ ಮೇಲೆ ಕಣ್ಣಿಟ್ಟಿದ್ದ ರಾಘವನ ಗ್ಯಾಂಗ್ ಗೋಕರ್ಣ ದೇವಸ್ಥಾನವು ರಾಮಚಂದ್ರಾಪುರ ಮಠದ ಆಸ್ತಿಯೆಂದು ಹುಸಿವಾದ ಮಂಡಿಸುತ್ತದೆ. ದೇವಸ್ಥಾನದ ಇತಿಹಾಸ ಮತ್ತು ರಾಮಚಂದ್ರಾಪುರ ಮಠದ ಚರಿತ್ರೆ ಒಂದಕ್ಕೊಂದು ಹೊಂದಿಕೊಳ್ಳುವುದೇ ಇಲ್ಲ, ಆದರೂ ಸುಳ್ಳು ಸಾಧಿಸಿ ದೇವಾಲಯದ ಧನ-ಕನಕ-ಕೋಟ್ಯಂತರ ಆದಾಯ ಗುಳುಂ ಮಾಡುವ ದುರಾಸೆಯ ಹಠ ಮಠದ ಪೀಠಕ್ಕೆ! ಒಂದು ಹಂತದಲ್ಲಿ ಹೈಕೋರ್ಟ್ ನ್ಯಾಯಮೂರ್ತಿ ಗೋಪಾಲಗೌಡರ ವಿಭಾಗೀಯ ಪೀಠ ಮಹಾಬಲೇಶ್ವರ ದೇವಸ್ಥಾನ ಸಾರ್ವಜನಿಕರದ್ದು ಎಂದು ತೀರ್ಪು ಸಹ ಕೊಡುತ್ತದೆ. ಹಲವು ಬಾರಿ ರಾಘವನಿಗೆ ಕೋರ್ಟ್ ಕಪಾಳಮೋಕ್ಷ ಮಾಡುತ್ತದೆ. ಆದರೆ ನ್ಯಾಯ-ನೀತಿ-ಕೋರ್ಟ್ ಆದೇಶಗಳನ್ನೆಲ್ಲ ಪ್ರಜ್ಞಾಪೂರ್ವಕವಾಗಿ ಧಿಕ್ಕರಿಸುತ್ತ ದೇವಸ್ಥಾನವನ್ನು 'ಅನುಭೋಗಿ'ಸುತ್ತ ತೇಗುತ್ತಾನೆ ರಾಘವ ಮಾಣಿ!


ಆಗ ನ್ಯಾಯಾಂಗ ನಿಂದನೆ ಕೇಸುಗಳು ರಾಘವ ಪರಿವಾರದ ಮೇಲೆ ಬೀಳುತ್ತದೆ; ಜತೆಗೆ ರಾಘವನಿಗೆ ಗೋಕರ್ಣ ದೇವಸ್ಥಾನವನ್ನು ದಾನ ಮಾಡಿದ ಅಧಿಕಾರಿ ಗಣವೂ ಇಕ್ಕಟ್ಟಿಗೆ ಸಿಲುಕುತ್ತದೆ. ಚೆಡ್ಡಿ ಸರ್ಕಾರಕ್ಕೆ ಧರ್ಮಸಂಕಟ ಶುರುವಾಗುತ್ತದೆ. ಬಚಾವಾಗಲು ರಾಘವ ಮತ್ತು ಅಧಿಕಪ್ರಸಂಗಿ ಅಧಿಕಾರಿಗಳು ಕಸರತ್ತು ಶುರು ಹಚ್ಚಿಕೊಳ್ಳುತ್ತಾರೆ. ರಾಘವ ಒಂದು ರಿಟ್ ಅರ್ಜಿ (20961/2005) ಹೈಕೋರ್ಟ್‌ಗೆ ಸಲ್ಲಿಸುತ್ತಾನೆ. ಉತ್ತರ ಕನ್ನಡದ ಕೇವಲ ಹತ್ತೇ ಹತ್ತು ದೇವಸ್ಥಾನಗಳು ಮಾತ್ರ ತನ್ನ ಮಠದ ಸುಪರ್ದಿಯಲ್ಲಿದೆ ಎಂದು ಹೇಳುತ್ತಾನೆ. ಅದರಲ್ಲಿ ಜಬರ್ದಸ್ತ್ ಮಹಾಬಲೇಶ್ವರ ದೇವಸ್ಥಾನ ಇಲ್ಲವೆಂದು ರಾಘವನೇ ನ್ಯಾಯಾಲಯಕ್ಕೆ ತಿಳಿಸುತ್ತಾನೆ.

ಮಹಾಬಲೇಶ್ವರ ದೇವಸ್ಥಾನ ಮಠಕ್ಕೆ ಸೇರಿರುವುದರಿಂದ ಅದಕ್ಕೆ ಮುಜರಾಯಿ ಕಾನೂನು ಲಾಗೂ ಆಗುವುದಿಲ್ಲವೆಂದು ಅಫಿಡವಿಟ್ ಹಾಕುತ್ತಾನೆ. ಆದರೆ ಕೋರ್ಟ್ ಈ ವಾದವನ್ನು ಒಪ್ಪುವುದಿಲ್ಲ, ದೇವಾಲಯದ ಆಸ್ತಿ ಮಾರ್ಪಾಡು ಮಾಡಬಾರದೆಂದು ಹೈಕೋರ್ಟ್ ತಡೆಯಾಜ್ಞೆ ಕೊಡುತ್ತದೆ. ಇದ್ಯಾವುದೂ ಕೇರ್ ಮಾಡದ ರಾಘವ ದೇವಸ್ಥಾನದ ಆಸ್ತಿ ಮನಸೋ ಇಚ್ಛೆ ಬಳಸಿಕೊಂಡು ರಿನಿವೇಶನ್ ಮಾಡಿಕೊಳ್ಳುತ್ತಾನೆ. ಅತ್ತ ಮಹಾಬಲೇಶ್ವರ ದೇವಸ್ಥಾನವನ್ನು ರಾಮಚಂದ್ರಾಪುರ ಮಠಕ್ಕೆ ಹಸ್ತಾಂತರಿಸಿರುವುದನ್ನು ಪ್ರಶ್ನಿಸಿ ನ್ಯಾಯಾಲಯದಲ್ಲಿದ್ದ ಕೇಸಿನ ವಿಚಾರಣೆ ಅಂತಿಮ ಹಂತಕ್ಕೆ ಬರಲಾರಂಭಿಸುತ್ತದೆ. ಜತೆಗೆ ಬಾಲಚಂದ್ರ ದೀಕ್ಷಿತ್ ಎಂಬಾತ ತಾನು ವಂಶಪಾರಂಪರ್ಯವಾಗಿ ಗೋಕರ್ಣ ದೇವಾಲಯದ ಧರ್ಮದರ್ಶಿ. ಮುಜರಾಯಿ ಇಲಾಖೆ ದೇವಸ್ಥಾನ ವಶಪಡಿಸಿಕೊಳ್ಳದೆ ತನ್ನನ್ನು ಮ್ಯಾನೇಜಿಂಗ್ ಟ್ರಸ್ಟಿಯಾಗಿ ನೇಮಿಸಬೇಕೆಂದು ಹೈಕೋರ್ಟಿಗೆ ತಕರಾರು ಹಾಕಿರುತ್ತಾರೆ. ಆಗ ಯಥಾಸ್ಥಿತಿ ಕಾಪಾಡುವಂತೆ ನ್ಯಾಯಾಲಯ ಆದೇಶವೂ ಕೊಡುತ್ತದೆ.


ಈ 'ಸ್ಟೇಟಸ್ಕೋ' ಉಲ್ಲಂಘಿಸಿ ಯಡ್ಡಿ ಸರ್ಕಾರದ ಮುಜರಾಯಿ ಇಲಾಖೆಯ ಪಂಡಿತರು ರಾಘವೇಶನ ಮಠಕ್ಕೆ ಗೋಕರ್ಣ ದೇವಸ್ಥಾನದ ಕಬ್ಜಾ ಕೊಡುತ್ತಾರೆ. ಆಗ ಮತ್ತೆ ಬಾಲಚಂದ್ರ ದೀಕ್ಷಿತ್ ಎಂಬ ಪ್ರಚಂಡ ವಿ.ಡಿ. ದೀಕ್ಷಿತರ ಪುತ್ರರತ್ನ 'ಸ್ಟೇಟಸ್ಕೋ' ಕಡೆಗಣಿಸಿ ಹಸ್ತಾಂತರ ಮಾಡಿರುವುದನ್ನು ಪ್ರಶ್ನಿಸಿ ಕೇಸು (ಸಿಸಿ 2020/2009) ಹಾಕುತ್ತಾರೆ. ಈ ಕೇಸು ರಾಘವನಿಗೆ ಮಹಾಬಲೇಶ್ವರನನ್ನು ಎಲ್ಲಾ ನಿಯಮ-ಕಾನೂನು ಧಿಕ್ಕರಿಸಿ ಸಲೀಸಾಗಿ ಎತ್ತಿಕೊಟ್ಟಿರುವ ಎಂಡೋಮೆಂಟ್ ಇಲಾಖೆಯ ಕಮಿಷನರ್ ಪ್ರಭಾಕರರಾವ್, ಕಾರ್ಯದರ್ಶಿ ನಾರಾಯಣ ಸ್ವಾಮಿ, ಕೇಸ್ ವರ್ಕರ್ ಶ್ರೀಕಂಠಬಾಬು ಮತ್ತು ಕುಮಟಾದ ಉಪವಿಭಾಗೀಯ ಆಯುಕ್ತ ಚೌಗುಲೆಗೆ ನ್ಯಾಯಾಂಗನಿಂದನೆಯಾಗಿ ಸುತ್ತಿಕೊಂಡಿದೆ! ಅಲ್ಲಿಗೆ ರಂಗೀಲಾ ರಾಘವ ಮತ್ತವನ ಸ್ವಾಹಕ್ಕೆ ಸಹಕರಿಸಿದ ಕರ್ಮಗೇಡಿ ಅಧಿಕಾರಿ ಪಡೆ ಒಂದಲ್ಲ ಒಂದು ಬಗೆಯಲ್ಲಿ ಕಾನೂನಿನ ಅಡಕತ್ತರಿಯಲ್ಲಿ ಸಿಕ್ಕಿಬಿದ್ದಂತಾಗುತ್ತದೆ.

ಆಗ ಶುರುವಾಗುತ್ತದೆ ಹಣವಂತ ಮಹಾಬಲೇಶ್ವರನನ್ನು ಮೋಸ-ವಂಚನೆಯಿಂದ ಸ್ವಾಧೀನ ಪಡೆದ ರಾಘವ ಮತ್ತು ಹಸ್ತಾಂತರ ಮಾಡಿದ ಮುಜರಾಯಿ-ಕಂದಾಯ ಅಧಿಕಾರಿ ಪರಿವಾರಕ್ಕೆ ಪೀಕಲಾಟ!! ನ್ಯಾಯಾಂಗ ನಿಂದನೆಯಿಂದ ಬಚಾವಾಗಲು ಸ್ವಾಮಿ-ಅಧಿಕಾರಿ ಗ್ಯಾಂಗ್ ದಾರಿ ಹುಡುಕಲಾ ರಂಭಿಸುತ್ತದೆ. ಒಂದು ಕಡೆ ಮಹಾಬಲೇಶ್ವರ ದೇವಸ್ಥಾನ ತನ್ನದಲ್ಲ ಎಂದು ಅಫಿಡವಿಟ್ ಕೊಡುವ ರಾಘವ ಮತ್ತೊಂದು ಕೇಸಲ್ಲಿ ಗೋಕರ್ಣ ಮಹಾಬಲೇಶ್ವರ ತನ್ನ ಹೈಗರ ಮಠದ ಆಸ್ತಿ ಎಂದು ವಿತಂಡವಾದ ಮಂಡಿಸುತ್ತಾನೆ. ಹಸ್ತಾಂತರ ಪ್ರಶ್ನಿಸಿ ಹಾಕಿರುವ ಕೇಸ್ ಅಂತಿಮ ಹಂತಕ್ಕೆ ಬಂದಿರುವ ಈ 'ಸಂಕ್ರಮಣ' ಕಾಲದಲ್ಲಿ ರಾಘವನ 'ಎಡಬಿಡಂಗಿತನ' ನಿರ್ಣಾಯಕವಾಗುವ ಸಾಧ್ಯತೆಯೇ ಹೆಚ್ಚು, ಜತೆಗೆ ನ್ಯಾಯಾಂಗನಿಂದನೆಗೆ ಜೈಲು ಸೇರುವ ಭಯದಲ್ಲಿ ಅಧಿಕಾರಿಗಳಿದ್ದಾರೆ.

ಈ ಸಂಕಷ್ಟದಿಂದ ಪಾರಾಗಲು ರಾಘವ ಮತ್ತವನ ಅನುಯಾಯಿಗಳಾದ ಅಧಿಕಾರಿಗಳಿಗೆ ಕಂಡ ದಾರಿಯೇ 'ರಿನೋಟಿಫೈ' ಕಿತಾಪತಿ! ಗೋಕರ್ಣದ ಪ್ರಮುಖ ದೇವಾಲಯ ಮಹಾಬಲೇಶ್ವರ ದೇವಸ್ಥಾನವೂ ಸೇರಿದಂತೆ ರಾಜ್ಯದ ಹಲವು ದೇವಾಲಯಗಳನ್ನು ಡಿನೋಟಿಫೈ ಮೂಲಕ ಖಾಸಗಿಯವರ ಒಡೆತನಕ್ಕೆ ಒಪ್ಪಿಸಿದ್ದನ್ನು ರೀನೋಟಿಫೈ ಮಾಡಿ 29-9-2012ರಂದು ಬಿಜೆಪಿ ಸರ್ಕಾರ ಆದೇಶ ಹೊರಡಿಸಿದೆ. ರಾಜ್ಯಪತ್ರ (ಗೆಜೆಟ್)ನಲ್ಲಿ ದಾಖಲಾಗಿರುವ ಈ ರೀನೋಟಿಫಿಕೇಷನ್ ಪ್ರಕಾರ ರಾಘವನ ಮಠಕ್ಕೆ ಕೊಡಲಾಗಿದ್ದ ಗೋಕರ್ಣದ ಒಟ್ಟು 14 ದೇವಸ್ಥಾನಗಳನ್ನು ಮುಜರಾಯೀ ಇಲಾಖೆ ಮರಳಿ ವಶಪಡಿಸಿಕೊಂಡಿದೆ. ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆ ಮತ್ತು ಧರ್ಮದತ್ತಿ ಕಾಯಿದೆ 1997 (ಕರ್ನಾಟಕ ಆಕ್ಟ್ ನಂ: 33/2001) ಪ್ರಕಾರ ಸೆಕ್ಷನ್ 23ರ ಅಡಿಯಲ್ಲಿ 1-5-2003ಕ್ಕೆ ಪೂರ್ವಾನ್ವಯ ಆಗುವಂತೆ ಈಗಾಗಲೇ ಡಿನೋಟಿಫೈ ಮಾಡಿದ ಮುಜರಾಯಿ ಇಲಾಖೆಯ ದೇವಸ್ಥಾನಗಳನ್ನು ಪುನಃ ನೋಟಿಫೈ (ರೀನೋಟಿಫೈ) ಮಾಡಲಾಗಿದೆ ಎಂದು ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿದೆ.



ಇದು ತಾಂತ್ರಿಕವಾಗಿ ಹೈಕೋರ್ಟಿಗೇ ನಾಮ ತಿಕ್ಕುವ ಅನಾಹುತಕಾರಿ ತಂತ್ರಗಾರಿಕೆಯಷ್ಟೇ! ನ್ಯಾಯಾಂಗನಿಂದನೆಗೆ ಗುರಿಯಾಗಿ ಜೈಲಿನ ಕಂಬಿ ಎಣಿಸುವುದನ್ನು ತಪ್ಪಿಸಿಕೊಳ್ಳಲು ರಾಘವ ಮತ್ತು ಆರೋಪಿ ಅಧಿಕಾರಿ ಕೋಳಿ ಮಾಡಿರುವ ಮೋಸ!! ಇಂಥದೊಂದು ರೀನೋಟಿಫೈ ಆದೇಶ ಹೊರಬಂದು ಬರೋಬ್ಬರಿ ನಾಲ್ಕು ತಿಂಗಳಾದರೂ ಮುಜರಾಯಿ ಇಲಾಖೆಯ ಪ್ರಭೃತಿಗಳಾಗಲಿ, ಧರ್ಮಿಷ್ಠ ರಾಘವ ಸ್ವಾಮಿಯಾಗಲಿ ಏನೂ ಆಗದಂತೆ



ರಾಜ್ಯಪತ್ರದಲ್ಲಿ ನೋಟಿಫೈ (ರೀನೋಟಿಫೈ)

ಮುಗುಮ್ಮಾಗಿರುವುದೇ ರೀನೋಟಿಫಿಕೇಷನ್ ಎಂಬುದು ದೋಖಾ ಕಾರ್ಯಾಚರಣೆ ಎಂಬುದನ್ನು ಸಾಬೀತು ಪಡಿಸುವಂತಿದೆ! ಡಿನೋಟಿಫಿಕೇಷನ್ ಆದಾಗ ದೇವಾಲಯವನ್ನು ಅದೆಷ್ಟು ತರಾತುರಿಯಲ್ಲಿ ರಾತ್ರೋರಾತ್ರಿ ರಾಮಚಂದ್ರಾಪುರ ಮಠಕ್ಕೆ ಹಸ್ತಾಂತರಿಸಲಾಗಿತ್ತೋ ಅಷ್ಟೇ ರಹಸ್ಯವಾಗಿ ರೀನೋಟಿಫಿಕೇಷನ್ ಅನ್ನು ಹೂತು ಹಾಕಲಾಗಿದೆ! ಇವತ್ತಿಗೂ ಗೋಕರ್ಣದ ಕೋಟಿ-ಕೋಟಿ ಧನ-ಕನಕದ ಮಾಲಿಕ ಮಹಾಬಲೇಶ್ವರ ರಾಘವನ ಜೋಳಿಯಲ್ಲೇ ಇದ್ದಾನೆ.


ಆದರೆ ಒಂದಂತೂ ಖರೆ! ಗೋಕರ್ಣ ಮಹಾಬಲೇಶ್ವರ ರಾಘವನ ಜೋಳಿಗೆಯಿಂದ ನುಣುಚಿಕೊಂಡು ಹೊರಬರುತ್ತಿದ್ದಾನೆ. ಗುಲ್ಬರ್ಗಾ ಸಂಚಾರಿ ಪೀಠದಲ್ಲಿ ಗಾಣಗಾಪುರ ದೇವಸ್ಥಾನಕ್ಕೆ ಸಂಬಂಧಿಸಿದ ಕೇಸೊಂದು ವಿಚಾರಣೆ ನಡೆಯುತ್ತಿದ್ದಾಗ ಅಚಾನಕ್ ರೀನೋಟಿಫಿಕೇಷನ್ ಬೆಳಕಿಗೆ ಬಂದಿದೆ. ಆಗ ಗೋಕರ್ಣ ದೇವಸ್ಥಾನ ಹಸ್ತಾಂತರ ಪ್ರಶ್ನಿಸುವ ಕೇಸ್ ನಡೆಸುವ ವಕೀಲರೊಬ್ಬರ ಗಮನಕ್ಕೆ ಈ ರೀನೋಟಿಫೈ ಬಂದಿದೆ. ಇಲ್ಲದಿದ್ದರೆ ಬಿಜೆಪಿ ಭ್ರಷ್ಟರ ನಕಲಿ ರೀನೋಟಿಫಿಕೇಷನ್ ಎಂಬ ರಾಘವ ಮತ್ತು ಅಧಿಕಾರಿಗಳ ಜೈಲು ಊಟ ತಪ್ಪಿಸುವ ಪ್ರಹಸನ ಕಡತದಲ್ಲೇ ಸಮಾಧಿಯಾಗಿ ಹೋಗುತ್ತಿತ್ತು.

ಈಗ ಹಸ್ತಾಂತರ ವಿರೋಧಿಗಳು ರೀನೋಟಿಫಿಕೇಷನ್ ಪ್ರಕಾರ ಧರ್ಮದರ್ಶಿ ಮಂಡಳಿಗೆ ಗೋಕರ್ಣ ದೇವಾಲಯ ವಹಿಸುವಂತೆ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ಹೂಡಿದ್ದಾರೆ. ಮುಜರಾಯಿ ಇಲಾಖೆಯ ಅಧಿಕಾರಿಗಳು, ಕಾರವಾರದ ಜಿಲ್ಲಾಧಿಕಾರಿ, ಕುಮಟಾದ ಎಸಿಗಳು ಏಕೆ ಇನ್ನೂ ಮಲಗಿದ್ದಾರೆ? ರಾಘವನ ಪಾರುಪತ್ಯದಿಂದ ಗೋಕರ್ಣ ದೇಗುಲಕ್ಕೆ ರೀನೋಟಿಫಿಕೇಷನ್‌ನಿಂದಲೂ ಮುಕ್ತಿ ಇಲ್ಲವೆಂದರೆ ಏನು ಅರ್ಥ? ರಾಘವನ ಲೂಟಿಯಲ್ಲಿ ಚೆಡ್ಡಿ ಸರ್ಕಾರದ ಭಂಡರ ಪಾಲೆಷ್ಟು? ಡಿಸಿ-ಎಸಿ, ಎಂಡೋಮೆಂಟ್ ಇಲಾಖೆಯ ಅಧಿಕಾರಿಗಳಿಗೆಷ್ಟು ಪಾಲು? ಇಂಥದೊಂದು ಚರ್ಚೆಯೀಗ ಗೋಕರ್ಣದಲ್ಲಷ್ಟೇ ಅಲ್ಲ, ಕಾವಿ ಜೀವಿಗಳ ಪ್ರಪಂಚದಲ್ಲೂ ರಂಗು-ರಂಗಾಗಿ ನಡೆಯುತ್ತಿದೆ.

ಏನೇ ಆಗಲಿ, ರಗಳೆ ರಾಘ ಅಷ್ಟು ಸುಲಭಕ್ಕೆ ಮಹಾಬಲೇಶ್ವರ ಮತ್ತದರ ಸುತ್ತಮುತ್ತಲಿನ ದೇವಸ್ಥಾನಗಳನ್ನು ಕಬಳಿಸುವುದು ಸಾಧ್ಯವೇ ಇಲ್ಲ, ರೀನೋಟಿಫಿಕೇಷನ್ ಅಸ್ತ್ರವೇ ಈಗ ರಾಘವನ ಪಟಾಲಮ್‌ಗೆ ತಿರುಗುಬಾಣವಾಗಿ ಹೋಗಿದೆ. ಈಗ ಒಂದೋ ಅಧಿಕಾರಿಗಳು ರಾಘವನನ್ನು ಗೋಕರ್ಣ ದೇವಸ್ಥಾನದಿಂದ ಹೊರಗೆ ಹಾಕಬೇಕು; ಇಲ್ಲವೇ ಆತನ ಸಮೇತ ಜೈಲಿನ ಒಳಗೆ ಹೋಗಬೇಕು. ಪೊಲೀಸರ ಎಸ್ಕಾರ್ಟ್ ಒಡ್ಡೋಲಗದೊಂದಿಗೆ ಅಂಡಲೆಯುವ ನೈತಿಕ ಅಧಃಪತನ ಕಂಡಿರುವ ರಾಘವನ ಹುಚ್ಚಾಟಕ್ಕೆ ಕೊನೆ ಎಂದು? ಹಾಗಂತ ರಾಮಚಂದ್ರಾಪುರ ಮಠದ ಅನುಯಾಯಿಗಳಾದ ಹವ್ಯಕ-ಬ್ರಾಹ್ಮಣರೇ ಹಣೆ-ಹಣೆ ಚಚ್ಚಿಕೊಳ್ಳುತ್ತಿದ್ದಾರೆ!

● ನಹುಷ

ರಾಮದಾಸ್‌ನ ಸೀರೆ ಹಂಚಿಕೆ ಪುರಾಣ



ಈ ದೇಶದ ಚುನಾವಣಾ ಗಿಮಿಕ್‌ಗಳ ಬಗ್ಗೆ ಒಂದು ರ್ವೇ ನಡೆಸಿದ್ದೇ ಆದರೆ, ಅದರಲ್ಲಿ ನಮ್ಮ ಮೈಸೂರಿನ ಂತ್ರಿ ರಾಮದಾಸನಿಗೆ ಪ್ರಥಮ ಸ್ಥಾನ ಲಭಿಸುವುದರಲ್ಲಿ ಾವುದೇ ಅನುಮಾನವಿಲ್ಲ. ಜನರನ್ನು ಯಾಮಾರಿಸಲು ಪ್‌ರೇಟ್ ಗಿಮಿಕ್‌ಗಿಳಿದಿರುವ ರಾಮದಾಸ್ ತನ್ನ ವಿಶಿಷ್ಟ ಶಿಭೆಯನ್ನು ಪ್ರದರ್ಶನಕ್ಕಿಟ್ಟಿದ್ದಾರೆ. ಅವೆಲ್ಲಾ ಈಗ ಕ್ಷೇತ್ರದ ತದಾರರೆದುರು ಬಟಾಬಯಲಾಗಿ ನಿಂತಿವೆ.

ಮೈಸೂರಿನ ಕೃಷ್ಣರಾಜ ಕ್ಷೇತ್ರದಲ್ಲಿ ಸಕ್ರಿಯವಾಗಿರುವ 'ಆಸರೆ' ಎಂಬ ಸಂಸ್ಥೆಯೊಂದಿದೆ. ಈ ಸಂಸ್ಥೆ ಯಾರಿಗೆ ಆಸರೆಯಾಗಿದೆಯೋ ಬಿಟ್ಟಿದೆಯೋ ಗೊತ್ತಿಲ್ಲ, ಆದರೆ ಮತದಾರರಿಗೆ ಮುಖ ತೋರಿಸಲು ಈ ಬಾರಿ ರಾಮದಾಸ್‌ಗೆ ಈ ಸಂಸ್ಥೆಯೊಂದೇ ಆಸರೆ. ಇದು ಬೇರೆ ಯಾವುದೋ ಸಮಾಜಸೇವಾ ಸಂಸ್ಥೆ ಇರಬೇಕು ಎಂದುಕೊಳ್ಳಬೇಡಿ. ಇದು ಸ್ವತಃ ರಾಮದಾಸ ತನ್ನ ಬೆಂಬಲಿಗರೊಂದಿಗೆ ಸೇರಿ ಹುಟ್ಟುಹಾಕಿದ್ದ ಟ್ರಸ್ಟ್. ಇದಕ್ಕೆ ಮಾನ್ಯ ರಾಮದಾಸ್ ಅವರೇ ಅಧ್ಯಕ್ಷರು!


ಮೊನ್ನೆ ನಡೆದಿದ್ದಿಷ್ಟು. ಚುನಾವಣೆ ಹತ್ತಿರ ಬರುತ್ತಿರುವುದರಿಂದ ರಾಮದಾಸ್ ಕಡೆಯವರು ಕ್ಷೇತ್ರದ ಮತದಾರರಿಗೆ ಟೋಕನ್ ಹಂಚಿದ್ದರು. ಈ ಟೋಕನ್ ಕೊಟ್ಟರೆ ಮೈಸೂರಿನ ಕೆಲವು ಟೆಕ್ಸ್‌ಟೈಲ್ಸ್ ಮಳಿಗೆಗಳು ಸೀರೆ ವಿತರಿಸುವಂತೆ ವ್ಯವಸ್ಥೆ ಮಾಡಲಾಗಿತ್ತು. ಅಂದು ಮಧ್ಯಾಹ್ನದವರೆಗೆ ಟೋಕನ್ ಕೊಟ್ಟೋರಿಗೆಲ್ಲಾ ಸೀರೆ ಕೊಟ್ಟರು. ಅಷ್ಟರಲ್ಲಿ ಈ ಟೋಕನ್ ಮಸಲತ್ತನ್ನು ಚೆನ್ನಾಗಿ ಅರಿತಿದ್ದ ಕೆಲವು ಕಿಲಾಡಿಗಳು ನಕಲಿ ಟೋಕನ್ ಪ್ರಿಂಟ್ ಮಾಡಿಸಿ ಭರ್ಜರಿ ಸೀರೆ ಕಲೆಕ್ಷನ್ ಶುರು ಮಾಡಿಬಿಟ್ಟರಂತೆ. ಹೀಗಾಗಿ ಟೋಕನ್‌ಗೊಂದು ಸೀರೆ ಸ್ಕೀಮನ್ನು ಮಧ್ಯಾಹ್ನಕ್ಕೆ ಬರಕಾಸ್ತು ಮಾಡಬೇಕಾಗಿ ಬಂತು. ಚೋರ ಗುರುವಿಗೆ ಚಂಡಾಲ ಶಿಷ್ಯ ಎಂಬ ಗಾದೆ ಮಾತು ಸುಮ್ಮನೆ ಬಂದಿಲ್ಲ ಬಿಡಿ.

ರಾಮದಾಸ್ ಪಟಾಲಂ ತಮ್ಮ ಕಾರ್ಯಯೋಜನೆಯನ್ನು ಸ್ವಲ್ಪ ಮಾರ್ಪಾಡು ಮಾಡಿ 'ಆಸರೆ' ಹೆಸರಿನಲ್ಲಿ ಸೀರೆ, ಶಾಲು ಹಂಚಿಕೆ ಮಾಡುವ ದಂಧೆಗಿಳಿದರು. ಈ ಬಾರಿ ರಾಮದಾಸ್ ಪಟಾಲಂಗೆ ಇದ್ದಕ್ಕಿದ್ದಂತೆ ಹಿರಿಯ ನಾಗರಿಕರ ಬಗ್ಗೆ ಪ್ರೀತಿ ಉಕ್ಕಿಹರಿಯಲಾರಂಭಿಸಿತು. ಪರಿಣಾಮವಾಗಿ ನಗರದ ಸೂಯಿಜ್ ಫಾರಂ ರಸ್ತೆಯಲ್ಲಿರುವ ಕರುಮಾರಿಯಮ್ಮ ದೇವಸ್ಥಾನದ ಬಳಿ ಹಿರಿಯರಿಗೆ ಶಾಲು, ಮಹಿಳೆಯರಿಗೆ ಸೀರೆ ಹಾಗೂ ಆಟೋ ಚಾಲಕರಿಗೆ ಸಮವಸ್ತ್ರ ವಿತರಿಸುವ ಧರ್ಮಕಾರ್ಯ ಆಯೋಜನೆಯಾಗಿತ್ತು. ಇದಕ್ಕಾಗಿ ಸೀರೆ ಮತ್ತು ಶಾಲುಗಳನ್ನು ವಿಶೇಷವಾಗಿ ಪ್ಯಾಕ್ ಮಾಡಿಸಲಾಗಿತ್ತು. ಹೀಗೆ 'ಧರ್ಮ ಕಾರ್ಯ'ದ ಹೆಸರಿನಲ್ಲಿ ರಾಮದಾಸ್‌ನ ಬೇನಾಮಿ ಹಣ ಬೀದಿಯಲ್ಲಿ ಹೊಳೆಯಾಗಿ ಹರಿಯುತ್ತಿದ್ದುದನ್ನು ಕಾಂಗ್ರೆಸ್ ಕ್ಯಾಂಡಿಡೇಟ್ ಸೋಮಶೇಖರ್ ಬೆಂಬಲಿಗರ ಕಿವಿಗೆ ಬಿದ್ದು ಒಂದಷ್ಟು ಮಂದಿ ಅಲ್ಲಿ ಜಮಾಯಿಸಿದರು. ರಾಮದಾಸ್ ಪಟಾಲಂನ ಇಂಥಾ ಕುಕೃತ್ಯಗಳಿಂದ ರೋಸಿಹೋಗಿದ್ದ ಕೆಲವು ಪ್ರಜ್ಞಾವಂತರೂ ಜೊತೆಗೂಡಿ ಈ ಚುನಾವಣಾ ಗಿಮಿಕ್‌ಗೆ ಅಡ್ಡಿಪಡಿಸಿದರು.

ತೆರೆಮರೆಯಲ್ಲಿದ್ದುಕೊಂಡು ತಮ್ಮ ಪಟಾಲಂ ಮೂಲಕ ಈ ಹಂಚಿಕೆ ನಡೆಸುತ್ತಿದ್ದ ಬಿಜೆಪಿಯ ಪದಾಧಿಕಾರಿಗಳು ಕೂಡಲೇ ರಂಗಪ್ರವೇಶ ಮಾಡಿದರು. ಕಮಲ ಮತ್ತು ಕೈ ಪಾಳಯಗಳು ಕೈಕೈ ಮಿಲಾಯಿಸುವ ಹಂತ ತಲುಪಿ ಉದ್ವಿಗ್ನ ವಾತಾವರಣ ನಿರ್ಮಾಣವಾಯಿತು. ಸದ್ಯಕ್ಕೆ ಪೊಲೀಸರ ಮಧ್ಯಪ್ರವೇಶದಿಂದ ಮುಂದಿನ ಅನಾಹುತ ತಪ್ಪಿದಂತಾಗಿದೆ.

ಸ್ಥಳದಲ್ಲಿದ್ದ ಪತ್ರಕರ್ತರೊಬ್ಬರು ಶಾಲು ಪಡೆದುಕೊಂಡ ಒಬ್ಬ ಅಜ್ಜನನ್ನು ಮಾತಾಡಿಸಿದಾಗ ಅವರು ಹೇಳಿದ್ದಿಷ್ಟು. 'ಚಳಿಗಾಲದಲ್ಲಾದರೂ ಶಾಲು ಕೊಟ್ಟಿದ್ದರೆ ಉಪಯೋಗವಾಗುತ್ತಿತ್ತು; ಈಗ ಭರ ಬೇಸಿಗೆ ಶುರುವಾಗಿದೆ. ಏನ್ ಮಾಡೋದ್ ಸ್ವಾಮಿ, ಎಲೆಕ್ಷನ್ ಬೇಸಿಗೆಯಲ್ಲಿ ಬಂದಾಯ್ತಲ್ಲಾ?' ಅಂತಾ.

ಈ ಹಂಚಿಕೆ ಹಗರಣ ಬಯಲಾಗಿ ಮೈಸೂರಿನ ಪತ್ರಿಕೆಗಳಿಗೆ ನಿತ್ಯ ಆಹಾರವಾಗಿದ್ದನ್ನು ಕಂಡು ಕೆರಳಿದ ರಾಮದಾಸ್ ಇದಕ್ಕೆ ಅಡ್ಡಿಪಡಿಸಿದವರ ಮೇಲೆ ಕೇಸು



ಹಾಕಿಸಿ ಏದುಸಿರು ಬಿಡುತ್ತಿದ್ದಾರೆ. ಅದೂ ಸಹಾ ಕೊಲೆ ಬೆದರಿಕೆ ಕೇಸು! ಆಸರೆ ಫೌಂಡೇಷನ್ ವತಿಯಿಂದ ಹಿರಿಯ ನಾಗರಿಕರಿಗೆ ಗುರುತಿನ ಚೀಟಿ ಹಾಗೂ ಶಾಲು ವಿತರಣೆ ವೇಳೆ ಕಾಂಗ್ರೆಸ್ ಮುಖಂಡರು ಗುಂಪುಗಾರಿಕೆ, ಅಕ್ರಮಕೂಟ, ಶಾಂತಿಭಂಗ, ಅಕ್ರಮ ತಡೆ, ಅವಾಚ್ಯ ಶಬ್ದ ಬಳಕೆ ಮತ್ತು ಕೊಲೆ ಬೆದರಿಕೆ ಹಾಕಿದ್ದಾರೆಂದು ಆರೋಪಿಸಲಾಗಿದೆ. ಅದಕ್ಕೆ ಸಂಬಂಧಿಸಿದ ಸೆಕ್ಷನ್‌ಗಳಡಿ ವಿದ್ಯಾರಣ್ಯಪುರಂ ಪೊಲೀಸರು 15 ಮಂದಿಯ ಮೇಲೆ ಕೇಸು ಜಡಿದಿದ್ದಾರೆ.

'ಆಸರೆ' ಹೆಸರಿನಲ್ಲಿ ಹರಿಯುತ್ತಿರುವ ಬೇನಾಮಿ ಹಣದ ಮೂಲವನ್ನು ಪತ್ತೆ ಹಚ್ಚಲು ಮೈಸೂರು ಡಿಸಿ ಮನಸ್ಸು ಮಾಡಿ ಇಂಥಾ ಬೇನಾಮಿ ಗಿಮಿಕ್ಕುಗಳಿಗೆ ಕೂಡಲೇ ಕಡಿವಾಣ ಹಾಕಬೇಕಾದ ತುರ್ತು ಇದೆ. ಯಾಕೆಂದರೆ ಈತನ ಗಿಮಿಕ್ಕು ಕೇವಲ ಹಂಚಿಕೆ ಕಾರ್ಯಕ್ಕಷ್ಟೆ ಸೀಮಿತವಾಗಿಲ್ಲ. ತನ್ನ ನೀಚ ಸ್ವಾರ್ಥಕ್ಕಾಗಿ ಜನರ ದೈನಂದಿನ ಬದುಕನ್ನು ಹೈರಾಣಾಗಿಸುವ ಕಾರ್ಯದಲ್ಲಿ ಈತ ಮಗ್ನನಾಗಿದ್ದಾನೆ. ಈ ಕೆಳಗಿನ ಮತ್ತೊಂದು ಉದಾಹರಣೆ ನೋಡಿ.

ತಮಗೆ ವೋಟು ಎಲ್ಲೆಲ್ಲಿ ಬಂದಿಲ್ಲವೋ ಅಂಥಾ ಕೆಲವು ಏರಿಯಾಗಳಿಗೆ ಸಾರ್ವಜನಿಕ ನೀರು ಸರಬರಾಜು ಕಡಿತಗೊಳ್ಳುವಂತೆ ನೋಡಿಕೊಳ್ಳುವುದು, ಸರ್ಕಾರದ ವತಿಯಿಂದ ಸರಬರಾಜಾಗಬೇಕಿದ್ದ ನೀರಿನ ಸೌಲಭ್ಯಕ್ಕೆ ತತ್ವಾರ ಆದರೆ ಜನರ ನೀರಿನ ಬವಣೆ ಹೆಚ್ಚಿ ನೀರಿಗಾಗಿ ಪರದಾಡುವಂತಹ ಸ್ಥಿತಿ ನಿರ್ಮಾಣವಾಗುತ್ತದೆ ನೋಡಿ. ಅಂಥಾ ಸಂದರ್ಭದಲ್ಲಿ ಧರ್ಮಕಾರ್ಯದ ಹೆಸರಿನಲ್ಲಿ ನೀರಿನ ಟ್ಯಾಂಕರ್‌ಗಳನ್ನು ಕಳಿಸಿ ತನ್ನ ಬಗ್ಗೆ ಸಿಂಪಥಿ ಗಿಟ್ಟಿಸುವ ತಂತ್ರ ಕೃಷ್ಣರಾಜ ಕ್ಷೇತ್ರದಲ್ಲಿ ನಡೆಯುತ್ತಿದೆಯೆಂದು ನೊಂದ ಮತದಾರರು ತಮ್ಮ ಅಳಲು ತೋಡಿಕೊಳ್ಳುತ್ತಿದ್ದಾರೆ. ಇಂಥಾ ಹೀನಕೃತ್ಯಕ್ಕೆ ಇಂಡಿಯನ್ ಪೀನಲ್‌ಕೋಡ್‌ನ ಯಾವ ಯಾವ ಸೆಕ್ಷನ್‌ಗಳು ಅನ್ವಯ ಮಾಡಬಹುದೆಂದು ಕಾನೂನು ಪಂಡಿತರು ಅಧ್ಯಯನ ಕೈಗೊಂಡು ಸೂಕ್ತ ಕೇಸುಗಳನ್ನು ದಾಖಲಿಸಲು ಇನ್ನೂ ಕಾಲ ಮಿಂಚಿಲ್ಲ.

● ದೊಡ್ಡಿಪಾಳ್ಯ ನರಸಿಂಹಮೂರ್ತಿ

ಓಟು ನಿಮಿತ್ತಂ ಬಹುಕೃತ ವೇಷಂ

ಮೈಸೂರಿನ ಕೃಷ್ಣರಾಜ ಕ್ಷೇತ್ರದ ನಿವಾಸಿಗಳಿಗೆ ಹೊಸ ರೀತಿಯ ಕಿರುಕುಳವೊಂದು ಶುರುವಾಗಿಬಿಟ್ಟಿದೆ. ಚುನಾವಣೆ ಸಮೀಪಿಸಿದ್ದು ಹಾಗಿರಲಿ, ಮಂತ್ರಿ ರಾಮದಾಸ್ ಆಸರೆ ಫೌಂಡೇಷನ್‌ನ ಮಂದಿ ದಿನಬೆಳಗಾದರೆ ಮನೆ ಬಾಗಿಲಿಗೆ ಹಾಜರ್. ಈ ಮಂದಿ ಐದು ಹತ್ತು ರೂಪಾಯಿ ಬೆಲೆಯ ಗಿಡ ಹಂಚಲೆಂದೋ ಡೈರಿ ಅಥವಾ ಕ್ಯಾಲೆಂಡರ್ ಹಂಚುತ್ತೇವೆಂದೋ ಮನೆಮನೆ ಬಾಗಿಲು ತಟ್ಟುತ್ತಿದ್ದಾರೆ. ಹೀಗೆ ಮನೆ ಬಾಗಿಲಿಗೆ ಬಂದು ಹಲ್ಲು ಕಿಸಿದು ನಿಲ್ಲುವ ಈ ಮಂದಿ ಕೇಳುವ ಪ್ರಶ್ನೆಗಳಂತೂ ಸಾರ್ವಜನಿಕರಿಗೆ ಕಿರಿಕಿರಿ ಉಂಟುಮಾಡುತ್ತಿವೆ.

ನಿಮ್ಮ ವೆಡ್ಡಿಂಗ್ ಆನಿವರ್ಸರಿ ಯಾವತ್ತು? ನೀವು ಹುಟ್ಟಿದ ದಿನಾಂಕ ಯಾವುದು? ಹೀಗೆ ತೀರಾ ವೈಯಕ್ತಿಕ ವಿಷಯಗಳಿಗೆ ಇಳಿಯುತ್ತಾರೆ. ನಿಮಗೆ ಅವೆಲ್ಲಾ ಯಾಕೆ ಬೇಕು ಅಂತಾ ಯಾರಾದರೂ ದಬಾಯಿಸಿ ಕೇಳಿದರೆ, "ಕೋಪ ಮಾಡ್ಕೋಬೇಡಿ ಮೇಡಂ, ನಿಮಗೆ ಗ್ರೀಟಿಂಗ್ ಕಾರ್ಡ್ ಕಳಿಸಲಿಕ್ಕೆ ಅಷ್ಟೆ" ಅಂತಾ ಹಲ್ಲು ಕಿಸಿಯುತ್ತಾರೆ. ಇಂಥಾ ಚೀಪ್‌ರೇಟ್ ಗಿಮಿಕ್‌ಗಳು ಮತದಾರರಲ್ಲಿ ಅಸಹ್ಯ ಮೂಡಿಸಿವೆ.

ಪಡ್ಡೆ ಹುಡುಗರಿಗೆ ಗೋವಾ ಯಾತ್ರೆ

ಈ ಆರೆಸ್ಸೆಸ್, ಬಿಜೆಪಿ ಮಂದಿ ಬೋಧಿಸುವ ಸಂಸ್ಕೃತಿಯ ಒಳಹೂರಣ ನೋಡಿ. ಪಬ್-ಕ್ಲಬ್ ಸಂಸ್ಕೃತಿಯಿಂದ ರತೀಯ ಸಂಸ್ಕೃತಿ ನಾಶವಾಗುತ್ತೆ ಅಂತ ದಿನಬೆಳಗಾದರೆ ಬೀದಿಯಲ್ಲಿ ಬೊಬ್ಬೆ ಹೊಡೆಯೋದು; ಆದರೆ ಸ್ತವದಲ್ಲಿ ಒಳಗೊಳಗೆ ಅದೇ ನೀತಿಗೆಟ್ಟ ಸಂಸ್ಕೃತಿಯನ್ನು ಪೋಷಿಸಿ ಬೆಳೆಸೋದು ಇವರ ಹಿಡನ್ ಅಜೆಂಡಾ ಬುದಕ್ಕೆ ಈಗ ಮತ್ತೊಂದು ಉದಾಹರಣೆ ಮೈಸೂರಿನಿಂದ ಹೊರಬಂದಿದೆ.

ಬರಲಿರುವ ಚುನಾವಣೆಯ ದೃಷ್ಟಿಯಿಂದ ಪಡ್ಡೆ ಹುಡುಗರನ್ನು ಮರುಳು ಮಾಡಿ ಒಲಿಸಿಕೊಳ್ಳಲು ಮಂತ್ರಿ ಮದಾಸ ತನ್ನ ಬಾಲಬಡುಕರ ಮೂಲಕ ಗೋವಾ ಟೂರ್‌ಗಳನ್ನು ಆಯೋಜಿಸುತ್ತಿದ್ದಾರೆ. ಕೃಷ್ಣರಾಜ ಕ್ಷೇತ್ರದ ಡುಗರು ಹೀಗೆ ಬ್ಯಾಚ್ ಬೈ ಬ್ಯಾಚ್ ಸಂಸ್ಕೃತಿ ಪ್ರವಾಸಕ್ಕೆ ಹೋಗಿ ಬರುತ್ತಿದ್ದಾರೆ ಎಂಬ ಸುದ್ದಿ ಮೈಸೂರಿನಾದ್ಯಂತ ಡಿದೆ. ಒಂದು ತಲೆಗೆ 10 ಸಾವಿರ, 10 ಮಂದಿ ಪಡ್ಡೆ ಹುಡುಗರ ಟೀಮ್‌ಗೆ ಒಂದು ಲಕ್ಷ , ಊಟ ತಿಂಡಿ ತೆಗೆ ಗೋವಾ ಎಂದ ಮೇಲೆ ತೀರ್ಥವೂ ಇರಬೇಕಲ್ಲಾ, ಈ ಎಲ್ಲ ವೆಚ್ಚಗಳಿಗೂ ರಾಮದಾಸನ ಬೇನಾಮಿ ಹಣ ಯುತ್ತಿದೆ.

ಕರಾವಳಿಯಲ್ಲಿ ಒಂದು ಹುಡುಗ ಒಂದು ಹುಡುಗಿ ಜೊತೆಗೆ ಮಾತಾಡುವುದೂ ಘೋರ ಅಪರಾಧವೆಂಬಂಥ ಲಿಬಾನ್ ವ್ಯವಸ್ಥೆಯನ್ನು ಜಾರಿಗೆ ತಂದಿರುವ ಈ ಮಂದಿ ತಾವೇ ಮುಂದೆ ನಿಂತು ಅತ್ಯಂತ ಹೀನಾಯವಾದ ವ್‌ಪಾರ್ಟಿ ನಡೆಸಿ ತಮ್ಮ ನಿಜಬಣ್ಣ ತೋರಿಸಿಕೊಂಡಿದ್ದರು. ಈಗ ಅದೇ ಚಡ್ಡಿವೀರ ರಾಮದಾಸ ತನ್ನ ತಬ್ಯಾಂಕ್ ರಾಜಕೀಯಕ್ಕಾಗಿ 'ಗೋವಾ ಟೂರ್' ಹೆಸರಿನಲ್ಲಿ ಯುವಜನತೆಯನ್ನು ದಿಕ್ಕು ತಪ್ಪಿಸುತ್ತಿದ್ದಾರೆ.

2<<< **ಬಿಡಿಚಿತ್ರಗಳು....**

ಕಂಪೆನಿಯ ಪ್ರೈಮ್ ಕಮಿಟಿಯವರು ಅಂದಾಜಿಸಿದಂತೆ ಪ್ಪು ತಿಜೋರಿಯಿಂದ ಅವರು ವಶಪಡಿಸಿಕೊಂಡ ಇನ್ನಿತರ ಪತ್ತಿನ ಮೌಲ್ಯ ಹೀಗಿತ್ತು:

16,74,350 ಪೌಂಡ್ ಬೆಲೆಯ ಸ್ಟಾರ್ ಪಗೋಡಾಗಳು

25,00,000 ಪೌಂಡ್ ಬೆಲೆಯ ಚಿನ್ನ, ಬೆಳ್ಳಿ ಆಭರಣಗಳು

1,10,000 ಪೌಂಡ್ ಬೆಲೆಯ ಭತ್ತ, ಮೆಣಸು, ಉಪ್ಪು

2,00,000 ಪೌಂಡ್ ಬೆಲೆಯ ರೇಷ್ಮೆ, ಮಸ್ಲೀನ್ ಉಡುಪುಗಳು

ಹೀಗೆ, 45.58 ಲಕ್ಷ ಪಗೋಡಾಗಳಷ್ಟು ಬೆಲೆಯ ಪತ್ತು ಟಿಪ್ಪು ಖಜಾನೆಯಲ್ಲಿತ್ತು, ಇವೆಲ್ಲಾ 500 ಒಂಟೆಗಳ ಲೆ ಹೇರುವಷ್ಟು ಅಗಾಧ ಪ್ರಮಾಣದಲ್ಲಿತ್ತು ಎನ್ನಲಾಗಿದೆ.

ಬ್ರಿಟಿಷ್ ಏಜೆಂಟರ ದುರಾಸೆ ಯಾವ ಮಟ್ಟದಲ್ಲಿತ್ತು ದರೆ ತಮ್ಮ ಸಂಗ್ರಹ ಮೊತ್ತದ ಪ್ರಮಾಣವನ್ನು ಹೆಚ್ಚಿಸಲು ರು ಟಿಪ್ಪು ಅರಮನೆಯ ಬಾಗಿಲುಗಳನ್ನೂ ಬಿಡದೆ ಟಿ ಹರಾಜು ಹಾಕಲು ಹೊರಟಿದ್ದಾಗ ಲಾರ್ಡ್ ವೆಲ್ಲೆಸ್ಲಿ ವರನ್ನು ತಡೆದಿದ್ದ.

ಹೀಗೆ, ಟಿಪ್ಪು ಪತನ ಬ್ರಿಟಿಷರ ಈಸ್ಟ್ ಇಂಡಿಯಾ ಕಂಪೆನಿಯ ಸೈನಿಕರ ಧನದಾಹ ಹಾಗೂ ಲೂಟಿಕೋರ ಪ್ರವೃತ್ತಿಗೆ ಸಾಕ್ಷಿಯಾದರೆ, ಟಿಪ್ಪು ಸಾವು ಕಂಪೆನಿಯ ಆರ್ಥಿಕ ಹಾಗೂ ಮಿಲಿಟರಿ ಶಕ್ತಿಗೆ ಹೊಸ ಚೈತನ್ಯವನ್ನೇ ತಂದವು.

ಆದರೆ, ಟಿಪ್ಪು ಅರಮನೆಯಿಂದ ಲೂಟಿ ಮಾಡಿ ಹಂಚಿಕೊಂಡ ಚಿನ್ನ, ವಜ್ರಖಚಿತ ಆಭರಣಗಳ ಕತೆ ಅಲ್ಲಿಗೇ ಮುಗಿಯಲಿಲ್ಲ, ಅವು ಕಾಲಾನಂತರದಲ್ಲಿ ತಮ್ಮ ಆಕಾರ, ಸ್ವರೂಪ ಬದಲಿಸಿಕೊಳ್ಳುತ್ತಾ ಇಂಗ್ಲೆಂಡ್, ಅಮೆರಿಕ, ರಷ್ಯಾಗಳಲ್ಲಿ ಕಾಣಿಸಿಕೊಳ್ಳುತ್ತಾ ಹೋದವು. ಜನರಲ್ ಹ್ಯಾರಿಸ್ ತನ್ನ ಪಾಲಿಗೆ ಬಂದಿದ್ದ ಆಭರಣಗಳ ಪೈಕಿ ಬಹುತೇಕವನ್ನು ಇಂಗ್ಲೆಂಡಿನಲ್ಲಿ ಮಾರಿಕೊಂಡ. ಆದರೆ ಟಿಪ್ಪುವಿನ ಸಂಗ್ರಹದಲ್ಲಿದ್ದ 52 ಕಲ್ಲುಗಳ ಒಂದು ಎಮರಾಲ್ಡ್ ನೆಕ್ಲೆಸ್ ಹಾಗು 59 ಕಲ್ಲುಗಳಿದ್ದ ಮತ್ತೊಂದು ರೂಬಿ ನೆಕ್ಲೆಸ್ ಇವೆರಡನ್ನು ಹ್ಯಾರಿಸ್‌ನ ಪತ್ನಿ ತನಗಾಗಿ ಉಳಿಸಿಕೊಂಡಳು. ಮುಂದೆ ನಾಲ್ಕನೇ ಲಾರ್ಡ್ ಹ್ಯಾರಿಸ್‌ನ (1851-1932) ಪತ್ನಿ ಲೂಸಿ ಆ ನೆಕ್ಲೆಸ್‌ಗಳನ್ನು 19ನೇ ಶತಮಾನದ ಫ್ಯಾಶನ್ನಿಗೆ ತಕ್ಕಂತೆ ಮಾರ್ಪಡಿಸಿ ಧರಿಸುತ್ತಿದ್ದಳು.

ಇಂಗ್ಲೆಂಡಿನ ಬೆಲ್‌ಮೌಂಡ್ ಚರ್ಚಿನಲ್ಲಿ ಈ ಹ್ಯಾರಿಸ್ ವಂಶದ ಮಹಿಳೆಯರಾದ ಲೂಸಿ, ಇಸಾಬೆಲ್ಲಾ, ಸಾರಾ ಮುಂತಾದವರು ಈ ಆಭರಣಗಳನ್ನು ಧರಿಸಿಕೊಂಡಿರುವ ತೈಲವರ್ಣದ ಚಿತ್ರಗಳಿವೆ. ಟಿಪ್ಪು ಧರಿಸುತ್ತಿದ್ದ ಈ ನೆಕ್ಲೆಸ್‌ನಲ್ಲಿದ್ದ ಎಮರಾಲ್ಡ್ ಹಾಗೂ ರೂಬಿ ರತ್ನಗಳು ದಕ್ಷಿಣ ಅಮೆರಿಕ ಖಂಡದ ಕೊಲಂಬಿಯಾ ದೇಶದ ಚಿರಾರ್ ಗಣಿ ಪ್ರದೇಶದಿಂದ ತರಿಸಿದ್ದವುಗಳು.

ಟಿಪ್ಪು ಸಂಗ್ರಹದಲ್ಲಿದ್ದ ಚಿನ್ನದ ಹುಲಿಯ ತಲೆಯನ್ನು ಈಸ್ಟ್ ಇಂಡಿಯಾ ಕಂಪೆನಿಯ ಮೂಲಕ ನಿರ್ದೇಶಕರು ಇಂಗ್ಲೆಂಡಿನ ರಾಜ 3ನೇ ಜಾರ್ಜ್‌ಗೆ ಕಾಣಿಕೆಯಾಗಿ ಒಪ್ಪಿಸಿದರು. ಶುದ್ಧ ಚಿನ್ನದ ಗಟ್ಟಿಯಿಂದ ರೂಪಿಸಿ ಮತ್ತು ರತ್ನ ಹರಳುಗಳಿಂದ ಅಲಂಕರಿಸಲ್ಪಟ್ಟಿದ್ದ ಹ್ಯೂಮಾ ಪಕ್ಷಿಯನ್ನು (Huma Bird) ಟಿಪ್ಪು ಮಡಿದ ದಿನ ಮದ್ರಾಸ್ ಇಂಜಿನಿಯರಿಂಗ್ ಸೇನಾ ವಿಭಾಗದವರು ಸಿಪಾಯಿಯೊಬ್ಬನಿಂದ 5 ಸಾವಿರ ಪಗೋಡಾಗಳಿಗೆ ಖರೀದಿಸಿಟ್ಟುಕೊಂಡಿದ್ದರು. ಕಂಪೆನಿ ಅಧಿಕಾರಿಗಳು 1760 ಪೌಂಡ್ ಪಾವತಿಸಿ ಅದನ್ನು ಮರು ಖರೀದಿಸಿ 1831ರಲ್ಲಿ ನಾಲ್ಕನೇ ವಿಲಿಯಂಗೆ ಕಾಣಿಕೆಯಾಗಿ ನೀಡಿದರು.

ಟಿಪ್ಪು ನಿಧನಾನಂತರ ಅರಮನೆ ಹಾಗೂ ಖಾಸಗಿ ಕೋಣೆಯನ್ನು ಹೊಕ್ಕ ಕಂಪೆನಿ ಅಧಿಕಾರಿಗಳಿಗೆ ದಿಗ್ಭ್ರಮೆಯಾಗುವಷ್ಟು ಪುಸ್ತಕ ಸಂಗ್ರಹವೂ ಸಿಕ್ಕವು. ಅಂದಾಜು 2000 ಪುಸ್ತಕಗಳಿದ್ದ ಟಿಪ್ಪು ಲೈಬ್ರರಿಯಲ್ಲಿ ಕಲೆ, ವಿಜ್ಞಾನ, ಫಿಲಾಸಫಿ, ಗಣಿತ, ಜ್ಯೋತಿಷ್ಯಶಾಸ್ತ್ರ, ಕುರ್‌ಆನ್ ಪ್ರಾರ್ಥನೆಗಳು, ಸಂಪ್ರದಾಯ, ತತ್ವಗಳು, ನ್ಯಾಯ ವಿಧೇಯಕಗಳು ಹಾಗೂ ಸೂಫಿಯಿಸಂಗೆ ಸಂಬಂಧಪಟ್ಟ ಪುಸ್ತಕಗಳು ಇದ್ದವು.'

ಚಾರ್ಲ್ಸ್ ಸ್ಟುವರ್ಟ್ ಎಂಬ ಸೇನಾಧಿಕಾರಿ 'ಟಿಪ್ಪುವಿನ ಪುಸ್ತಕ ಸಂಗ್ರಹಗಳು ಅತ್ಯಂತ ಆಸಕ್ತಿದಾಯಕ' ಎಂದು ಬಣ್ಣಿಸುತ್ತಾನೆ.

ಟಿಪ್ಪುವಿನ ಪುಸ್ತಕಗಳ ಪೈಕಿ 200ರಷ್ಟನ್ನು ಇಂಗ್ಲೆಂಡಿನ ಈಸ್ಟ್ ಇಂಡಿಯಾ ಕಂಪೆನಿ ಡೈರೆಕ್ಟರುಗಳಿಗೆ ಹಾಗೂ ಬ್ರಿಟಿಷ್ ರಾಜಮನೆತನದವರಿಗೆ ಕಳುಹಿಸಲಾಯಿತು. ಇನ್ನೂ ಕೆಲವನ್ನು ಬ್ರಿಟಿಷರು ಕಲ್ಕತ್ತಾದಲ್ಲಿ ಆರಂಭಿಸಿದ್ದ ಪೋರ್ಟ್ ವಿಲಿಯಂ ಕಾಲೇಜಿಗೆ ರವಾನಿಸಲಾಯಿತು.


ಈಗಲೂ ಟಿಪ್ಪುವಿಗೆ ಸೇರಿದ್ದ ಅನೇಕ ಅಮೂಲ್ಯ ವಸ್ತುಗಳು ಯೂರೋಪ್, ಅಮೆರಿಕಗಳಲ್ಲಿ ಹರಾಜಿಗೆ ಬರುತ್ತಿರುತ್ತವೆ. ಅಂತಹ ಪ್ರತೀ ಸಂದರ್ಭವೂ ಬ್ರಿಟಿಷ್ ಸಾಹುಕಾರಶಾಹಿಗಳ ಲಾಭಬಡುಕುತನ, ತಣ್ಣನೆಯ ಕ್ರೌರ್ಯವನ್ನು ಮತ್ತೆಮತ್ತೆ ನೆನಪಿಸುತ್ತಿರುವುದಷ್ಟೇ ಅಲ್ಲ ಅಂದಿನ ಮೈಸೂರು ರಾಜ್ಯ ಬ್ರಿಟಿಷರ ವಿರುದ್ಧ ಸತತವಾಗಿ ನಡೆಸಿದ ವಿರೋಚಿತ ಹೋರಾಟದ ನೆನಪನ್ನೂ ತರುತ್ತದೆ.


1799ರ ಮೇ ನಾಲ್ಕರ ದಿನ ಭಾರತದ ಪಾಲಿಗೆ ಅತ್ಯಂತ ದುರ್ದೈವದ ದಿನ. ಅದೇ ವೇಳೆಗೆ ಅದು ಸಾಮ್ರಾಜ್ಯ ವಿಸ್ತರಣಾಕಾಂಕ್ಷಿಗಳಾಗಿದ್ದ ಬ್ರಿಟಿಷರ ಪಾಲಿಗೆ ಇಡೀ ಭಾರತವನ್ನು ಆಕ್ರಮಿಸಿಕೊಳ್ಳಲು ಅವಕಾಶ ಮಾಡಿಕೊಟ್ಟ ದಿನವೂ ಹೌದು. ಆದರೆ 1799ರ ಮೇ ನಾಲ್ಕರಂದಿನ ಟಿಪ್ಪೂ ಮರಣ ಹಾಗೂ ನಂತರದ ದುರ್ಘಟನೆಗಳ ವ್ಯಾಪ್ತಿ ಮತ್ತು ಪರಿಣಾಮ ಅದಕ್ಕಿಂತಲೂ ಅಗಾಧವಾದದ್ದು.

ಲಿಂಗಾಯತರ ಹೆಸರಲ್ಲಿ ಆರೆಸ್ಸೆಸ್ ಲೂಟಿ!


"ಹೆಸರಿಗಷ್ಟೇ ಇದು ಲಿಂಗಾಯತರ ಸರ್ಕಾರವೇ ಹೊರತು ಲಾಭವಾಗಿದ್ದು ಮಾತ್ರ ಬ್ರಾಹ್ಮಣರಿಗೇ...!"


-ವೀರಶೈವ ವೇದಿಕೆ ಅಧ್ಯಕ್ಷ ಶಿವಮಹದೇವಪ್ಪ



ಅದ್ವಾನಿ


ಅನಂತ್‌ಕುಮಾರ್


ಯಡಿಯೂರಪ್ಪ



ಶೆಟ್ಟರ್


ಕಲ್ಲಡ್ಕ ಭಟ್ಟ


ಮೈಚ ಜಯದೇವ

ಯಾರೇನೇ ಅಂದರೂ ಯಡ್ಡಿಯಿಂದ ಹಿಡಿದು ಶೆಟ್ಟರ್‌ವರೆಗಿನ ಬಿಜೆಪಿ ಸರ್ಕಾರವನ್ನು ಜನಸಾಮಾನ್ಯರು ಭಾವಿಸಿರುವುದು ಲಿಂಗಾಯತರ ಸರ್ಕಾರವೆಂದೇ ತಾನೆ?

ಬಿಜೆಪಿಯನ್ನು ಅಧಿಕಾರಕ್ಕೆ ತಂದದ್ದೇ ಲಿಂಗಾಯತರೆಂಬ ಕಟು ವಾಸ್ತವದಿಂದ ಹಿಡಿದು ಆಯಕಟ್ಟಿನ ಹುದ್ದೆಗಳನ್ನೆಲ್ಲ ಲಿಂಗಾಯತರೇ ಆಕ್ರಮಿಸಿಕೊಂಡರೆಂದೂ, ಸರ್ಕಾರಿ ಭೂಮಿ, ಗ್ರಾಂಟು, ಕಾಂಟ್ರಾಕ್ಟು ಇತ್ಯಾದಿಗಳೂ ಅವರದ್ದೇ ಪಾಲಾದವೆಂದೂ, ಲಿಂಗಾಯತ ಮಠಮಾನ್ಯಗಳಿಗೇ ಹೆಚ್ಚು ಲಾಭವಾಯಿತೆಂದೂ ಸಾಮಾನ್ಯವಾಗಿ ಕೇಳಿಬರುವ ಕುಹಕ. ಇದಕ್ಕೊಂದು ಅಪಸ್ವರವೆನ್ನಿ ಆಕ್ಷೇಪಣೆಯೆನ್ನಿ, ರಾಜ್ಯದ ಲಿಂಗಾಯತರ ಪ್ರಾತಿನಿಧಿಕ ಸಂಸ್ಥೆಯೆಂದೇ ಚಾಲ್ತಿಯಲ್ಲಿರುವ ವೀರಶೈವ ಮಹಾಸಭಾದ ಪರ್ಯಾಯ ಸಂಸ್ಥೆಯಾದ ಕರ್ನಾಟಕ ರಾಜ್ಯ ವೀರಶೈವ ವೇದಿಕೆ ಮತ್ತದರ ರಾಜ್ಯಾಧ್ಯಕ್ಷ ಶಿವಮಹದೇವಪ್ಪ ಬೇರೆಯದೇ ವಾದವೊಂದನ್ನು ಮಂಡಿಸುತ್ತಿದ್ದಾರೆ. ಅದನ್ನು ಅವರದ್ದೇ ಮಾತುಗಳಲ್ಲಿ ಕೇಳಬೇಕು-


ವೀರಶೈವ ವೇದಿಕೆ ಅಧ್ಯಕ್ಷ ಶಿವಮಹದೇವಪ್ಪ

"...ನೋಡಿ ಸಾರ್, ವೀರಶೈವ ಮಹಾಸಭಾ ಜನಸಾಮಾನ್ಯ ಆರ್ಥಿಕ ಅಸಹಾಯಕ ಲಿಂಗಾಯತರಿಗೆ ಸ್ಪಂದಿಸುತ್ತಿಲ್ಲ ಅಂತಲೇ ಹುಟ್ಟಿಕೊಂಡಿದ್ದು ವೀರಶೈವ ವೇದಿಕೆ. ಇದರ ಅಧ್ಯಕ್ಷನಾಗಿ ನಾನು ರಾಜ್ಯದ ಮೂಲೆಮೂಲೆ ಸುತ್ತಿದ್ದೇನೆ. ಕಳೆದ ಏಳೆಂಟು ವರ್ಷಗಳಿಂದ ಯಡಿಯೂರಪ್ಪನವರನ್ನು ಅತೀ ಹತ್ತಿರದಿಂದ ನೋಡಿ ಹೇಳುತ್ತಿದ್ದೇನೆ. ನೀವೇನಾದ್ರೂ ಯಡಿಯೂರಪ್ಪ ಲಿಂಗಾಯತರ ಮುಖ್ಯಮಂತ್ರಿ ಅವರ ಸರ್ಕಾರದಿಂದ ಲಿಂಗಾಯತರಿಗೆ ಲಾಭವಾಯಿತು ಅಂತ ತಿಳಕೊಂಡಿದ್ರೆ ಅದು ನಿಮ್ಮ ಅಜ್ಞಾನವೆನಿಸಿಕೊಳ್ಳುತ್ತದೆ.

ನನ್ನ ಪ್ರಕಾರ ಯಡಿಯೂರಪ್ಪ ಇಲ್ಲದೆ ಕೇವಲ ಸಂಘ ಪರಿವಾರದ ಬಿಜೆಪಿ ಮಾತ್ರವೇ ಆಗಿದ್ದರೆ ಇನ್ನು ನೂರು ವರ್ಷಕ್ಕೂ ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬರುತ್ತಿರಲಿಲ್ಲ, ಇದನ್ನು ಮನಗಂಡೇ ಆರೆಸ್ಸೆಸ್ ಯಡಿಯೂರಪ್ಪನವರನ್ನು ಗುರಾಣಿಯಂತೆ ಬಳಸಿಕೊಂಡಿತು. ಯಡಿಯೂರಪ್ಪ ಜಾತ್ಯತೀತ ನಾಯಕ. ರೈತ ಹೋರಾಟಗಾರ. ಹುಟ್ಟಿನಿಂದ ಮಾತ್ರವೇ ಲಿಂಗಾಯತ. ಈ ರಾಜ್ಯದಲ್ಲಿ ಅಧಿಕಾರ ಹಿಡಿಯಬೇಕೆಂದರೆ ಬಹುಸಂಖ್ಯಾತ ಸಮಾಜದ ಓರ್ವ ನಾಯಕನ ಅನಿವಾರ್ಯತೆ ಬಿಜೆಪಿಗಿತ್ತು ಮತ್ತು ಅದಕ್ಕೆಂದೇ ಯಡಿಯೂರಪ್ಪನವರನ್ನು ಬಳಸಿಕೊಂಡಿತು.

ಅನಂತಕುಮಾರ್ ನೇತೃತ್ವದಲ್ಲಿ ಬಿಜೆಪಿ ಚುನಾವಣೆ ಎದುರಿಸಿದಾಗ ಬಾರದ ಬಹುಮತ ಯಡಿಯೂರಪ್ಪ ಮುಂದಾಳತ್ವದಲ್ಲಿ ನಡೆದಾಗ ಅಧಿಕ ಸಂಖ್ಯೆಯ ಬಿಜೆಪಿ ಶಾಸಕರು ಗೆದ್ದುಬಂದಿದ್ದೇ ಈ ಕಾರಣಕ್ಕೆ. ನಿಮಗೆ ನೆನಪಿರಬಹುದು. ಕಳೆದ ಚುನಾವಣೆಗೂ ಮುನ್ನ ಬಿಜೆಪಿ ಯಡಿಯೂರಪ್ಪನವರ ಹೊರತಾಗಿ ಬೇರೆ ಯಾರನ್ನೂ ಮುಖ್ಯಮಂತ್ರಿ ಅಭ್ಯರ್ಥಿ ಎಂದು ಘೋಷಿಸಿರಲಿಲ್ಲ,

ಬಹುಶಃ ಟಿಕೆಟ್ ಹಂಚಿಕೆಯಲ್ಲಿ ಯಡಿಯೂರಪ್ಪನವರಿಗೆ ಪೂರ್ತಿ ಸ್ವಾತಂತ್ರ ಕೊಟ್ಟಿದ್ದರೆ ಕನಿಷ್ಠ ನೂರರಿಂದ ನೂರಿಪ್ಪತ್ತು ಸ್ಥಾನ ಬಿಜೆಪಿ ಗೆಲ್ಲುತ್ತಿತ್ತು, ಹೆಸರಿಗಷ್ಟೇ ಅವರನ್ನು ಮುಖ್ಯಮಂತ್ರಿ ಅಭ್ಯರ್ಥಿಯೆಂದು ಘೋಷಿಸಿ ಟಿಕೆಟ್ ಹಂಚಿಕೆಯಲ್ಲಿ ಪೂರ್ಣ ಸ್ವಾತಂತ್ರ್ಯ ನೀಡದ ಫಲವಾಗಿ ನಿರೀಕ್ಷಿತ ಬಹುಮತ ಬರಲಿಲ್ಲ, ಅಷ್ಟಾಗ್ಯೂ ಯಡಿಯೂರಪ್ಪ ಪಕ್ಷೇತರರು, ಇತರೇ ಪಕ್ಷಗಳಲ್ಲಿದ್ದ ತಮ್ಮ ಸ್ನೇಹಿತರನ್ನು ಸೆಳೆದ ಫಲವಾಗಿ ಬಿಜೆಪಿ ಅಧಿಕಾರಕ್ಕೆ ಬಂತಲ್ಲವೇ? ಆದರೆ ಅಧಿಕಾರ ಸಿಕ್ಕ ಮೇಲೆ ಆರೆಸ್ಸೆಸ್ ಮಾಡಿದ್ದೇನು?

ಚುನಾವಣೆಗೂ ಮುನ್ನ ನೀವೇ ನಾಯಕರು, ಏನು ಬೇಕಾದರೂ ತೀರ್ಮಾನ ತಗೊಳ್ಳಿ ಎನ್ನುತ್ತಿದ್ದ ಆರೆಸ್ಸೆಸ್ ನಾಯಕರ ವರ್ತನೆ ಯಡಿಯೂರಪ್ಪ ಮುಖ್ಯಮಂತ್ರಿಯಾದ ಮೇಲೆ ಬದಲಾಯಿತು. ಒಂದರ ಮೇಲೊಂದರಂತೆ ಕಡಿವಾಣ ಹಾಕಲು ಪ್ರಾರಂಭಿಸಿದರು. ಲೋಕಕ್ಕೆ ಗೊತ್ತೇ ಇಲ್ಲದ, ಹೊರ ಜಗತ್ತಿಗೆಂದೂ ಮುಖ ತೋರಿಸದ, ಕೇಶವಶಿಲ್ಪದಲ್ಲಿ ಅವಿತು ಕೂತು ಷಡ್ಯಂತ್ರ ನಡೆಸುವ ಆರೆಸ್ಸೆಸ್ ಆಸಾಮಿಗಳು ಸರ್ಕಾರದ ಮೇಲೆ ಹಿಡಿತ ಸಾಧಿಸಲು ಯತ್ನಿಸಿದರು. ಅದರ ಹಿಡ್ದನ್ ಅಜೆಂಡಾನೇ ಬೇರೆಯಿತ್ತು.

ಅದು ಮುಖ್ಯಮಂತ್ರಿಯಾದ ಒಂದೇ ವರ್ಷಕ್ಕೆ ಯಡಿಯೂರಪ್ಪನವರನ್ನು ಇಳಿಸಿ ಆ ಜಾಗಕ್ಕೆ ಸಂತೋಷ್‌ಜಿಯನ್ನು ತರುವುದು. ಅನಂತರ ಸಂತೋಷ್‌ಜಿಯನ್ನು

ಸಂದರ್ಶನ

ಆರೇ ತಿಂಗಳಿಗೆ ಇಳಿಸಿ ಅನಂತ್‌ಕುಮಾರ್‌ರನ್ನು ಬಿಜೆಪಿಯ ಸರ್ವಸಮ್ಮತ ಮುಖ್ಯಮಂತ್ರಿಯನ್ನಾಗಿ ಮಾಡುವುದು- ಇಂಥದೊಂದು ಷಡ್ಯಂತ್ರದ ಮೂಲ ವ್ಯಕ್ತಿಯೇ ಬಿಜೆಪಿ ರಾಷ್ಟ್ರನಾಯಕ ಎಲ್.ಕೆ.ಅದ್ವಾನಿ. ಏಕಾಏಕಿ ಅನಂತ್‌ರನ್ನು ಮುಖ್ಯಮಂತ್ರಿ ಮಾಡ್ತೀವಿ ಅಂದರೆ ಎಲ್ಲಿ ಲಿಂಗಾಯತರು ಬಂಡೇಳುತ್ತಾರೋ? ಎಂದು ನಾಮಕಾವಸ್ಥೆಗೆ ಸಂತೋಷ್‌ಜಿಯನ್ನು ಮುಂದು ಮಾಡಿ ತೆರೆಮರೆಯಲ್ಲಿ ಅನಂತ್ ಕುಮಾರ್‌ರನ್ನು ಪ್ರತಿಷ್ಠಾಪಿಸುವುದು ಆರೆಸ್ಸೆಸ್ ಮತ್ತು ಅದ್ವಾನಿಯ ಕುತಂತ್ರವಾಗಿತ್ತು.

ಅದಕ್ಕೆಂದೇ ವ್ಯವಸ್ಥಿತವಾಗಿ ಯಡಿಯೂರಪ್ಪನವರ ವಿರುದ್ಧ ಆರೆಸ್ಸೆಸ್ ಅಪಪ್ರಚಾರಕ್ಕಿಳಿಯಿತು. ಅವರ ಮುಂಗೋಪ, ದಿಟ್ಟ ನಿಲುವು, ಜಾತಿ ಹಿನ್ನೆಲೆಯನ್ನೇ ಮುಂದೆ ಮಾಡಿ ಸಂಘಪರಿವಾರದ ಹಿಡಿತದಲ್ಲಿರುವ ಮಾಧ್ಯಮಗಳ ಮೂಲಕ ಅಪಪ್ರಚಾರಕ್ಕಿಳಿಯಿತು. ಇದು ಗೊತ್ತಾಗಿಯೇ ಯಡಿಯೂರಪ್ಪ ಅದ್ವಾನಿಯನ್ನು ವಿರೋಧಿಸಲಾರಂಭಿಸಿದರು. ಏಕೆಂದರೆ ಅವರು ವಾಜಪೇಯಿ ಅನುಯಾಯಿ. ರಾಜಕೀಯವಾಗಿ ವಾಜಪೇಯಿ ಸಕ್ರಿಯರಾಗಿದ್ದರೆ ಇಂಥ ಯಾವ ಕುತಂತ್ರಗಳಿಗೂ ಅವಕಾಶವೇ ಇರುತ್ತಿರಲಿಲ್ಲ, ಯಡಿಯೂರಪ್ಪ ಅಧಿಕಾರದಿಂದ ಇಳಿಯುವುದಾಗಲಿ ಪ್ರತ್ಯೇಕ ಪಕ್ಷ ಕಟ್ಟುವುದಾಗಲಿ ಸಂಭವಿಸುತ್ತಲೇ ಇರಲಿಲ್ಲ, ಇಷ್ಟೆಲ್ಲಕ್ಕೂ ಮೂಲ ಪುರುಷ ಅನಂತ್‌ಕುಮಾರ್.

ಈ ಷಡ್ಯಂತ್ರವನ್ನು ಅರಿತೇ ಯಡಿಯೂರಪ್ಪ ದಿಟ್ಟ ನಿರ್ಧಾರ ಕೈಗೊಂಡು ತನ್ನದೇ ಅನುಯಾಯಿಗಳ ಸರ್ಕಾರ ಕಟ್ಟಲೆತ್ನಿಸಿದರು. ಆರೆಸ್ಸೆಸ್ ಮತ್ತು 'ಅನಂತ್‌ಕುಮಾರ್ ಕುಮ್ಮಕ್ಕಿನ ಮೇರೆಗೇ ಗಣಿ ರೆಡ್ಡಿಗಳು ತಿರುಗಿ ಬೀಳುವಂತಾಯ್ತು, ಜಾರಕಿಹೊಳಿ ಗುಂಪು ಬಂಡೆದ್ದಿತು. ಇದನ್ನೆಲ್ಲ ಹೇಗೋ ಸಂಭಾಳಿಸಿಕೊಂಡು ಬಚಾವಾದ ಯಡಿಯೂರಪ್ಪನವರನ್ನು ಹಣಿಯಲು ಅನಂತ್‌ಕುಮಾರ್ ಅಂತಿಮವಾಗಿ ಬ್ರಹ್ಮಾಸ್ತ್ರದಂತೆ ಬಳಸಿದ್ದು ಲೋಕಾಯುಕ್ತರನ್ನು, ಸಂತೋಷ್ ಹೆಗ್ಡೆಯವರ ತಂದೆಗೆ ಅದ್ವಾನಿಯವರ ಜೊತೆಗೆ ಆತ್ಮೀಯತೆ ಇದ್ದುದರಿಂದಲೇ ಅವರ ಲೋಕಾಯುಕ್ತ ಹುದ್ದೆಗೆ ರಾಜೀನಾಮೆ ನೀಡಲು ಮುಂದಾದಾಗ ಅದ್ವಾನಿಯವರೇ ಬಂದು ರಾಜೀನಾಮೆ ನೀಡದಂತೆ ಮನವೊಲಿಸಿದ್ದು!

ಅದ್ವಾನಿ ನನಗೆ ತಂದೆ ಇದ್ದಂತೆ ಎಂದು ಸಂತೋಷ್ ಹೆಗ್ಡೆ ಆ ಸಂದರ್ಭದಲ್ಲಿ ಹೇಳಿಕೆ ಕೊಟ್ಟಿದ್ದನ್ನು ಒಮ್ಮೆ ನೆನೆಸಿಕೊಳ್ಳಿ...!

ಇದೆಲ್ಲದರಿಂದಾಗಿ ಗಣಿ ಹಗರಣದಲ್ಲಿ ಯಡಿಯೂರಪ್ಪನವರನ್ನು ಸಿಲುಕಿಸಿ ಅವರು ಜೈಲಿಗೆ ಹೋಗುವಂತಾಯ್ತು, ಮುಖ್ಯಮಂತ್ರಿ ಸ್ಥಾನಕ್ಕೂ ಸಂಚಕಾರ ಬಂತು!

ಇದು ಅನಂತ್‌ಕುಮಾರ್ ಮತ್ತು ಆರೆಸ್ಸೆಸ್ ಜಾಲದ ಕಾರ್ಯಾಚರಣೆ ಎಷ್ಟೊಂದು ವ್ಯವಸ್ಥಿತವಾಗಿರುತ್ತದೆ ಎಂಬುದಕ್ಕೆ ಒಂದು ಸ್ಯಾಂಪಲ್ ಮಾತ್ರ. ಜನ ಯಡಿಯೂರಪ್ಪನವರನ್ನು ಲಿಂಗಾಯತ ಪಕ್ಷಪಾತಿ ಅಂದುಕೊಂಡಿರಬಹುದು. ಬಿಜೆಪಿ ಸರ್ಕಾರವನ್ನು ಲಿಂಗಾಯತರ ಸರ್ಕಾರ ಎನ್ನಬಹುದು. ಯಡಿಯೂರಪ್ಪನವರ ಕಾಲದಲ್ಲಿ ಎಲ್ಲಾ ಆಯಕಟ್ಟಿನ ಹುದ್ದೆಗಳಲ್ಲಿ ಲಿಂಗಾಯತರೇ ಆಕ್ರಮಿಸಿದ್ದರು, ಲಿಂಗಾಯತರಿಗಷ್ಟೇ ಲಾಭವಾಯಿತು ಎನ್ನಬಹುದು. ಆದರೆ ಸತ್ಯ ಯಾವತ್ತಿದ್ದರೂ ಸತ್ಯವೇ ತಾನೆ?

ಯಡಿಯೂರಪ್ಪನವರನ್ನು ತೀರ ಹತ್ತಿರದಿಂದ ನಾನು ಬಲ್ಲಂತೆ ಅವರು ಮುಖ್ಯಮಂತ್ರಿಯಾಗಿದ್ದಾಗ ಅಸ್ತಿತ್ವದಲ್ಲಿದ್ದದ್ದು ಒಂದಲ್ಲ ಎರಡು ಸರ್ಕಾರಗಳು!

ಈ ಎರಡು ಸರ್ಕಾರಗಳು ಯಾವುದು ಅಂತೀರಾ? ಒಂದು ಮುಖ್ಯಮಂತ್ರಿ ಯಡಿಯೂರಪ್ಪನವರ ಮೇಲ್ನೋಟದ ಸರ್ಕಾರವಾದರೆ, ಮತ್ತೊಂದು ಆರೆಸ್ಸೆಸ್ ಪ್ರಾಬಲ್ಯದ ಭೂಗಳ್ಳರ ಸರ್ಕಾರ! ಅಂದರೆ **Hidden Government...!**

ಬಹುಶಃ ಯಾರೂ ನಂಬಲಿಕ್ಕಿಲ್ಲ- ಮುಖ್ಯಮಂತ್ರಿಯಿಂದ ಹಿಡಿದು ಪ್ರತಿಯೊಂದು ಇಲಾಖೆಯ ನೀತಿ-ನಿಯಮಾವಳಿಯನ್ನು ನಿರ್ಧರಿಸಲೆಂದೇ ಆರೆಸ್ಸೆಸ್ ಕಾರ್ಯಕರ್ತರು, ನಾಯಕರ ನೇತೃತ್ವದ ಮೇಲುಸ್ತುವಾರಿ ಸಮಿತಿಗಳನ್ನು ರಚಿಸಲಾಯ್ತು, ಕನಿಷ್ಠ ಐವರು ಆರೆಸ್ಸೆಸ್ ಆಸಾಮಿಗಳಿರುತ್ತಿದ್ದ ಈ ಸಮಿತಿಗೆ ಆಯಾ ಇಲಾಖಾ ಮುಖ್ಯಸ್ಥರನ್ನೂ ಮೀರಿದ ಅಧಿಕಾರ ನೀಡಲಾಯ್ತು, ಆಯಾ ಇಲಾಖಾ ಮಂತ್ರಿ ಇವರ ನಿರ್ದೇಶನದಂತೆಯೇ ಪಾಲಿಸಿ ರೂಪಿಸಬೇಕೆಂದು ಕೇಶವ ಶಿಲ್ಪದ ಬ್ರಾಹ್ಮಣರು ಫರ್ಮಾನು ಜಾರಿಗೊಳಿಸಿದರು. ಮುಖ್ಯಮಂತ್ರಿಯನ್ನು ಶಂಕರಪುರಂನ ಕೇಶವ ಶಿಲ್ಪಕ್ಕೇ ಕರೆಸಿಕೊಳ್ಳುವಷ್ಟು ಸರ್ವಾಧಿಕಾರ ಆರೆಸ್ಸೆಸ್ ನಾಯಕರಿಗಿತ್ತೆಂದರೆ ನೀವೇ ಯೋಚಿಸಿ...!

ಮೇಲುನೋಟಕ್ಕೆ ಯಡಿಯೂರಪ್ಪ ಮುಖ್ಯಮಂತ್ರಿ, ಲಿಂಗಾಯತರ ಸರ್ಕಾರ ಎಂದು ಜನ ಭಾವಿಸಿದರಾದರೂ ವಾಸ್ತವದಲ್ಲಿ ಅದು ಆರೆಸ್ಸೆಸ್ ಕೈಗೊಂಬೆ ಸರ್ಕಾರವಾಗಿತ್ತು, ಆರೆಸ್ಸೆಸ್ ಮೂಲದ ನಿವೃತ್ತ ಅಧಿಕಾರಿಗಳು, ಸದ್ಯ ಸೇವೆಯಲ್ಲಿರುವವರು, ಸಂಘ ಪರಿವಾರದ ಚೆಡ್ಡಿಗಳನ್ನೆಲ್ಲ ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲಾಯ್ತು, ಅದು ಯಾವ ಮಟ್ಟಕ್ಕೆಂದರೆ ಹೆಸರಿಗಷ್ಟೇ ಮಮ್ತಾಜ್ ಅಲಿಖಾನ್ ಮಂತ್ರಿಯಾದರೂ ಅವರ ಆಪ್ತ ಕಾರ್ಯದರ್ಶಿಯಾಗಿ ಆರೆಸ್ಸೆಸ್ ಮೂಲದ ಬ್ರಾಹ್ಮಣ ಅಧಿಕಾರಿಯೊಬ್ಬರನ್ನು ನೇಮಿಸಲಾಗಿತ್ತು, ಆತನ ಅಣತಿಯಂತೆಯೇ ಮಂತ್ರಿ ವರ್ತಿಸಬೇಕು!


ಆರೆಸ್ಸೆಸ್ ಚೆಡ್ಡಿಗಳು

ಇದು ಕೇವಲ ಮಮ್ತಾಜ್ ಅಲಿಖಾನ್, ಕಾಗೇರಿ, ಲಿಂಬಾವಳಿ, ಸುರೇಶ್‌ಕುಮಾರ್‌ರಂಥವರ ಪಾಡಷ್ಟೇ ಅಲ್ಲ, ಕರಂದ್ಲಾಜೆ, ಉದಾಸಿ, ಕಾರಜೋಳರಿಂದ ಹಿಡಿದು ಖುದ್ದು ಯಡಿಯೂರಪ್ಪನವರ ತನಕ ಬಿಜೆಪಿ ಸರ್ಕಾರದ ಪ್ರತಿ ಮಂತ್ರಿಯ ಪಾಡು. ಕಲ್ಲಡ್ಕ ಭಟ್ಟ, ಜಯದೇವ, ಮಂಘೇಶ್ ಭೇಂಡೆ, ದಾ.ಮ್ಹ. ರವೀಂದ್ರ ಮುಂತಾದ ಆರೆಸ್ಸೆಸ್ ನಾಯಕರು ಕೇಶವ ಶಿಲ್ಪದಲ್ಲಿ ಕೂತು ಅವರವರದ್ದೇ ಡೀಲು, ಆದೇಶ, ನಿರ್ಧಾರಗಳನ್ನು ಹೊರಡಿಸುತ್ತಿದ್ದರು. ಕೆಐಎಡಿಬಿ, ಬಿಡಿಎ, ಬಿಬಿಎಂಪಿ, ನಗರಾಭಿವೃದ್ಧಿಗೆ ಸಂಬಂಧಿಸಿದಂತೆ ಯಾವ್ಯಾವ ಆರೆಸ್ಸೆಸ್ ಸಂಸ್ಥೆಗಳು, ವ್ಯಕ್ತಿಗಳಿಗೆ ನಿವೇಶನ ಮಂಜೂರಾಗಬೇಕು, ಯಾವ್ಯಾವ ಅಧಿಕಾರಿಯನ್ನು ಎಲ್ಲಿಗೆ ತರಬೇಕು, ಏನೇನು ಕೆಲಸಗಳಾಗಬೇಕು ಎಂಬ ಆದೇಶ ಕೇಶವ ಕೃಪಾ, ಕೇಶವ ಶಿಲ್ಪಗಳಿಂದ ಜಾರಿಯಾಗುತ್ತಿತ್ತು,

ಹೀಗೆ ಆರೆಸ್ಸೆಸ್ ಮೂಲಕ ಬಂದ ಫೈಲುಗಳನ್ನು ಯಾರೇ ಅಧಿಕಾರಿಯೂ ಪರಿಶೀಲಿಸುವಂತಿರಲಿಲ್ಲ, ಆರೆಸ್ಸೆಸ್ ಫೈಲುಗಳನ್ನು ರಾಕೆಟ್ ಫೈಲುಗಳೆಂದು ಕರೆಯಲಾಗುತ್ತಿತ್ತು, ಬಂದಷ್ಟೇ ವೇಗವಾಗಿ ಅವುಗಳನ್ನು ವಿಲೇವಾರಿ ಮಾಡಲೇಬೇಕಿತ್ತು, ಹೀಗೆ ಕೇಶವ ಕೃಪಾದಲ್ಲಿ ಕೂತು ಪರ್ಯಾಯ ಸರ್ಕಾರ ಸ್ಥಾಪಿಸಿದ್ದ ಆರೆಸ್ಸೆಸ್ ಮುಖಂಡರು ತಮ್ಮ ಪ್ರತಿ ಕೆಲಸಕ್ಕೂ ಲಕ್ಷ-ಕೋಟಿಗಳ ಲೆಕ್ಕದಲ್ಲಿ ಲಂಚ ಪಡೆದಿದ್ದಕ್ಕೆ ನನ್ನ ಬಳಿ ದಾಖಲೆಯಿದೆ. ಆರೆಸ್ಸೆಸ್ ಮೂಲದ ಎನ್‌ಜಿಓಗಳು ಮತ್ತು ಮಠಗಳಿಗೆ ಬೆಂಗಳೂರು, ಮೈಸೂರು, ಮಂಗಳೂರು, ಹುಬ್ಬಳ್ಳಿ ನಗರಗಳ ಬೆಲೆ ಬಾಳುವ ಸರ್ಕಾರಿ ಭೂಮಿಯನ್ನು ಮಂಜೂರು ಮಾಡಲಾಯ್ತು.

ಹಾಗೆ ನೋಡಿದರೆ ಲಿಂಗಾಯತರ ಮಠಗಳಿಗಿಂತಲೂ ಬ್ರಾಹ್ಮಣ ಮಠಗಳಿಗೇ ಹೆಚ್ಚು ಭೂಮಿ ಮತ್ತು ಹೆಚ್ಚು ಹಣವನ್ನು ಮಂಜೂರು ಮಾಡಲಾಯ್ತು. ಶಾಲಾ ಪಠ್ಯಪುಸ್ತಕಗಳಲ್ಲಿದ್ದ ಶಿವಶರಣರ ವಚನಗಳನ್ನೆಲ್ಲ ಕಿತ್ತು ಆ ಜಾಗಕ್ಕೆ ಭಗವದ್ಗೀತೆ, ವೇದ, ಉಪನಿಷತ್ತುಗಳನ್ನು ತುರುಕಲಾಯ್ತು, ಬಸವಣ್ಣ, ಅಕ್ಕ ಮಹಾದೇವಿ, ಅಲ್ಲಮ ಪ್ರಭುಗಳಂಥ ಸಂತರ ವಚನಗಳಲ್ಲಿ ಮಾನವೀಯತೆಯಿತ್ತು, ದಯೆ-ಕರುಣೆಗಳಿದ್ದವು. ಮನುಷ್ಯನನ್ನು ಮನುಷ್ಯನನ್ನಾಗಿಸುವ ನೀತಿ ಸೂತ್ರಗಳಿದ್ದವು. ಭಗವದ್ಗೀತೆಯಲ್ಲಿ ಏನಿದೆ? ಕೇವಲ ಯುದ್ಧ ಬೋಧನೆ...!


ಕನ್ನಡ ಜನತೆಗೆ ಬೇಕಿರುವುದು ಶಿವಶರಣರ ವಚನಗಳೇ ಹೊರತು ಗೀತೆ, ಉಪನಿಷತ್ತುಗಳಲ್ಲ, ಇದನ್ನೆಲ್ಲ ಒಳಗೊಳಗೇ ವಿರೋಧಿಸುತ್ತಾ, ಎದುರಿಸುತ್ತಾ ತೊಳಲಾಟದಲ್ಲೇ ನರಳಿದ ಯಡಿಯೂರಪ್ಪ ಸಹಜವಾಗೇ ಅನಂತ್‌ಕುಮಾರ್ ಮತ್ತು ಆರೆಸ್ಸೆಸ್ ಷಡ್ಯಂತ್ರದ ಬಲಿಪಶು ಮಾತ್ರ. ಈಗ ಹೇಳಿ ಇದು ಲಿಂಗಾಯತರ ಸರ್ಕಾರವಾ ಅಥವಾ ಲಿಂಗಾಯತರ ಹೆಸರು ಬ್ರಾಹ್ಮಣರ ಬಸಿರಿನ ಸರ್ಕಾರವಾ? ಲಾಭವಾಗಿದ್ದು ಆರೆಸ್ಸೆಸ್‌ಗಾ ಅಥವಾ ಲಿಂಗಾಯತರಿಗಾ?

ನೀವೇ ನೋಡಿ- ಯಾವತ್ತೂ ಇಲ್ಲದಂತೆ ವಿಧಾನಸೌಧ, ವಿಕಾಸಸೌಧಗಳಿಗೆ ಭದ್ರತೆಯ ನೆಪದಲ್ಲಿ ಜನಸಾಮಾನ್ಯರ ಪ್ರವೇಶವನ್ನೇ ನಿಷೇಧಿಸಲಾಯ್ತು. ಪತ್ರಕರ್ತರಿಗೂ ವಿಧಾನಸೌಧದ ಪ್ರವೇಶ ಕುರಿತಂತೆ ನಿರ್ಬಂಧಗಳನ್ನು ವಿಧಿಸಲಾಯ್ತು, ಇದರ ಉದ್ದೇಶ ಹೊರಜಗತ್ತಿಗೆ ಆರೆಸ್ಸೆಸ್ ಕಾರ್ಯಾಚರಣೆ ಗೊತ್ತಾಗದಿರಲಿ ಎಂಬುದು. ಮೂಲ ಆರೆಸ್ಸೆಸ್, ಬಿಜೆಪಿ, ಸಂಘ ಪರಿವಾರದವರ್‍ಯಾರೂ ವಿಧಾನಸೌಧದತ್ತ ತಲೆಯನ್ನೇ ಹಾಕಲಿಲ್ಲ ನಿಜ. ಆದರೆ ಅವರ ಕೆಲಸ ಕಾರ್ಯಗಳೆಲ್ಲ ಕೇಶವಶಿಲ್ಪ, ಕೇಶವ ಕೃಪಾಗಳಿಂದಲೇ ನಡೆಯುತ್ತಿತ್ತಲ್ಲ!

ಕೋತಿ ಬೆಣ್ಣೆ ತಿಂದು ಮೇಕೆ ಬಾಯಿಗೆ ಒರೆಸಿದ ಹಾಗೆ ಆರೆಸ್ಸೆಸ್- ಬಿಜೆಪಿಯವರು ಲೂಟಿ ಹೊಡೆದು ಅಪವಾದವನ್ನು ಮಾತ್ರ ಯಡಿಯೂರಪ್ಪನವರ ಮೇಲೆ ಹೊರಿಸಿದ್ದಾರೆ. ಯಡಿಯೂರಪ್ಪ ಮುಖ್ಯಮಂತ್ರಿ ಪದವಿಯಿಂದ ಇಳಿಯುವಾಗ ಇದೇ ಶೆಟ್ಟರ್ ಅನಂತ್‌ಕುಮಾರ್ ಜೊತೆಗಿದ್ದುದರಿಂದ ವಿಧಿಯಿಲ್ಲದೇ ಸದಾನಂದಗೌಡರನ್ನು ಮುಖ್ಯಮಂತ್ರಿ ಮಾಡಬೇಕಾಯ್ತು, ಹಾಗೇ ಅವರ ಬೆಂಬಲದಿಂದ ಮುಖ್ಯಮಂತ್ರಿಯಾದ ಸದಾನಂದಗೌಡ ಕೂಡ ಕ್ರಮೇಣ ಅನಂತ್‌ಕುಮಾರ್ ಜೊತೆ ಕೈಜೋಡಿಸಿಬಿಟ್ಟರು. ಈಗ ಶೆಟ್ಟರ್ ಕೂಡ ಮತ್ತೆ ಅನಂತ್‌ಕುಮಾರ್ ಜೊತೆ ಕೈಜೋಡಿಸಿದ್ದಾರೆಂದರೆ ನೀವೇ ಹೇಳಿ ಇದು ಲಿಂಗಾಯತರ ಸರ್ಕಾರವಾ ಆರೆಸ್ಸೆಸ್ ಸರ್ಕಾರವಾ?"

-ಇದಿಷ್ಟೂ ರಾಜ್ಯ ವೀರಶೈವ ವೇದಿಕೆ ಅಧ್ಯಕ್ಷ ಶಿವ ಮಹದೇವಪ್ಪನವರ ವಾದ ಸರಣಿ. ಇದರ ತರ್ಕ, ಒಪ್ಪು-ನೆಪ್ಪು ಎಲ್ಲವೂ ಅವರವರ ವಿವೇಚನೆಗೆ ಬಿಟ್ಟದ್ದು.

• ರಾ. ಸೋಮನಾಥ್


ಸಚಿವ ನಾರಾಯಣಸ್ವಾಮಿ

ಡಿಐಜಿ ವೀರಭದ್ರಸ್ವಾಮಿಯ ಅನಾಚಾರ


ಬೆಳಗಾವಿ ಜೈಲಲ್ಲಿ ಗಾಂಜಾ ಹಬ್ಬ!

ಬೆಳಗಾವಿಯ ಐತಿಹಾಸಿಕ ಹಿಂಡಲಗಾ ಜೈಲಿಗೆ ಯಾವ್ಯಾವ ಗಳಿಗೆಯಲ್ಲಿ ವೀರಭದ್ರಸ್ವಾಮಿ ಎಂಬ ಬಕಾಸುರನ ಪ್ರವೇಶವಾಯಿತೋ ಆವತ್ತಿನಿಂದ ಇಲ್ಲಿನ ಕ್ರಿಮಿನಲ್‌ಗಳಿಗೆ ಮಾರಿಹಬ್ಬ!

ಬಂದೀಖಾನೆ ಇಲಾಖೆಯಲ್ಲೇ ಇಡೀ ಆಯಸ್ಸು ಕಳೆದು ಈಗ ಡಿಐಜಿ ಹುದ್ದೆಗೇರಿರುವ ವೀರಭದ್ರಸ್ವಾಮಿಗೆ ಇನ್ನೇನು ನಿವೃತ್ತಿ ಸಮೀಪಿಸುತ್ತಿದ್ದಂತೆ ದುಡ್ಡಿನ ಹಪಾಹಪಿ ಭುಗಿಲೆದ್ದಿದೆ. ರಾಜ್ಯ ಬಂದೀಖಾನೆ ಇಲಾಖೆ ಹೇಳಿಕೇಳಿ ಸಮಾಜ ಕಲ್ಯಾಣ ಮಂತ್ರಿ ಆನೇಕಲ್ ನಾರಾಯಣಸ್ವಾಮಿಯವರ ಸುಪರ್ದಿಗೇ ಬರುತ್ತದಾದ್ದರಿಂದ ಅವರನ್ನು ಸರಿಮಾಡಿಕೊಂಡರೆ ಆಡಿದ್ದೇ ಆಟ ಎಂಬ ಕಳ್ಳಾಟಕ್ಕೆ ವೀರಭದ್ರಸ್ವಾಮಿ ಕೈಯಿಟ್ಟ ಫಲವೇ ಬೆಳಗಾವಿ ಜೈಲಿನ ದುರವಸ್ಥೆ.

ಸದ್ಯ ಬೆಳಗಾವಿ ಜೈಲಿನ ಸಾವಿರಕ್ಕೂ ಅಧಿಕ ಬಂಧಿಗಳ ಪೈಕಿ ಕುಖ್ಯಾತ ಪಾತಕಿ ಧರಣೇಶ, ಬನಶಂಕರಿಯ ಅರಸಯ್ಯ, ಕೆಮೆಲ್ ಕೃಷ್ಣಪ್ಪನವರ ಹತ್ಯೆ ಕೇಸಿನ ನೆಲಮಂಗಲದ ಪಾತಕಿಗಳು, ಬಿಲ್ಡರ್ ಸುಬ್ಬರಾಜು ಹಂತಕ ಯೂಸುಫ್ ಬಚಖಾನ್, ಬೆಳಗಾವಿಯ ಲೋಕಲ್ ರೌಡಿಗಳಾದ ರಾಕೇಸ್ ಕುಣಸೆ, ಬಿಕ್ಕು ಸಿಂಧೆ, ರವೀಂದ್ರ ಚೌಗುಲೆ ಮತ್ತು ಎನ್‌ಕೌಂಟರ್‌ನಲ್ಲಿ ಹತನಾದ ಪ್ರವೀಣ್ ಸಿಂತ್ರೆಯ ತಮ್ಮ ರಣಜಿತ್ ಸಿಂತ್ರೆ ಇತ್ಯಾದಿ ಭಯಾನಕ ಹಂತಕರ ಹಿಂಡೇ ಬೆಳಗಾವಿ ಜೈಲಲ್ಲಿದೆ. ಇಂಥ ಪಾತಕಿಗಳಿಗೆ ಪ್ರತಿನಿತ್ಯ ಬೆಳಗಾವಿಯ ನಿಯಾಜ್ ಹೊಟೇಲಿನಿಂದ ಬಿರಿಯಾನಿ-ಖರ್ಮಾದಿಂದ ಹಿಡಿದು ಗಾಂಜಾ, ಅಫೀಮು, ವಿಸ್ಕಿಗಳ ಸಮಾರಾಧನೆಯನ್ನೇ ಮೇಳೈಸಿದ ಕೀರ್ತಿ ವೀರಭದ್ರಸ್ವಾಮಿಗೆ ಸಲ್ಲುತ್ತದೆ.

ಇಲ್ಲಿಗೆ ತಿಂಗಳ ಹಿಂದೆ ಅಂದರೆ 2012 ನವೆಂಬರ್ 18 ರಂದು ಬಿಲ್ಡರ್ ಸುಬ್ಬರಾಜು ಹಂತಕ ಯೂಸುಫ್ ಬಚಖಾನನ ಮೇಲೆ ವಿರೋಧಿ ಗ್ಯಾಂಗಿನ ರೌಡಿಗಳು ಜೈಲಲ್ಲೇ ಮಾರಕ ದಾಳಿ ನಡೆಸಿದರು. ಬಚಖಾನನ ಮೇಲೆ ದಾಳಿ ನಡೆಸಿದ್ದು ಬೆಂಗಳೂರಿನ ರೌಡಿ ಅರಸಯ್ಯನ ಪಡೆ. ಯಾರೇ ಬಂಧಿಯೊಬ್ಬನಿಗೆ ಆತನ ವಿರೋಧಿ ಬಂಧಿಗಳಿಂದ ಪ್ರಾಣಾಪಾಯವಿದ್ದ ಪಕ್ಷದಲ್ಲಿ ಆತನ ಪ್ರಾಣ ರಕ್ಷಣೆಗೆ ಏನೇನು ಕ್ರಮಕೈಗೊಳ್ಳಬೇಕೋ ಅದೆಲ್ಲವನ್ನೂ ನಿಷ್ಪಕ್ಷಪಾತವಾಗಿ ಮಾಡಬೇಕೆಂಬುದು ಜೈಲಿನ ನಿಯಮ.



ರಷೀದ್ ಮಲಬಾರಿ

ಬಚಾಖಾನನ ಹತ್ಯೆಗೆ...!

ತನಗೆ ಮುತ್ತಪ್ಪ ರೈ ಗ್ಯಾಂಗ್‌ನಿಂದ ಪ್ರಾಣಾಪಾಯವಿದೆ. ಬೆಂಗಳೂರಿನ ರೌಡಿ ಅರಸಯ್ಯ ಹೇಳಿಕೇಳಿ ರೈಗೆ ಆತ್ಮೀಯನಾಗಿರುವುದರಿಂದ ತನ್ನನ್ನು ಅರಸಯ್ಯನ ಪಡೆಯಿರುವ ಕೊಠಡಿಗೆ ಸ್ಥಳಾಂತರಿಸಬೇಡಿ ಎಂದು ಬಚಖಾನ್ ಪರಿಪರಿಯಾಗಿ ಬೆಳಗಾವಿ ಜೈಲಿನ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ತಲ್ಲೂರ್‌ಗೆ ಮನವಿ ಮಾಡಿದ್ದ. ಆದರೆ ಡಿಐಜಿ ವೀರಭದ್ರಸ್ವಾಮಿಗೆ ಬಚಖಾನನ ಎದುರಾಳಿ ಡಾನ್‌ನೇ ಸುಪಾರಿ ಕೊಟ್ಟಿದ್ದನೆಂಬುದು ಬಚಖಾನನಿಗೆಲ್ಲಿ ಗೊತ್ತಾಗಬೇಕು. ಅರಸಯ್ಯನ ಗ್ಯಾಂಗ್‌ನಿಂದ ತನ್ನ ಪ್ರಾಣ ಉಳಿಸಿ ಎಂದು ಬಚಖಾನ ಪರಿಪರಿಯಾಗಿ ಬೇಡಿಕೊಂಡರೂ ಆತನನ್ನು ಹೊತ್ತೊಯ್ದು ಅರಸಯ್ಯನಿದ್ದ ಬ್ಯಾರಕ್ಕಿಗೆ ದಬ್ಬಲಾಯ್ತು. ಏನಾಗಬೇಕಿತ್ತೋ ಅದೇ ಆಯಿತು. ಬಚಖಾನನ ಮೇಲೆ ಅರಸಯ್ಯನ ಹುಡುಗರು ಮುಗಿಬಿದ್ದು ಹಿಗ್ಗಾಮುಗ್ಗಾ ಥಳಿಸಿಬಿಟ್ಟರು.

ಒಂದಿಬ್ಬರು ಕೈದಿಗಳು ನೆರವಿಗೆ ಬಾರದೇ ಹೋಗಿದ್ದರೆ ತನ್ನನ್ನು ಅರಸಯ್ಯನ ಗ್ಯಾಂಗ್ ಕೊಂದೇ ಬಿಡುತ್ತಿತ್ತೆಂದು ಬಚಖಾನ ಬೊಬ್ಬೆಯಿಟ್ಟ. ಇದು ಡಿಐಜಿ ವೀರಭದ್ರಯ್ಯರ ಕರ್ತವ್ಯನಿಷ್ಠೆಗೆ ಒಂದು ಸ್ಯಾಂಪಲ್ಲಷ್ಟೆ. ಕನಿಷ್ಠ ತನ್ನ ಆತ್ಮೀಯ ಕೈದಿಗಳ ತಂಡದ ಸಮೇತವಾದರೂ ಅರಸಯ್ಯನ ಬ್ಯಾರಕ್ಕಿಗೆ ನನ್ನನ್ನು ಸ್ಥಳಾಂತರಿಸಿದ್ದರೆ ಇಂಥಾ ಗತಿಯಾಗುತ್ತಿರಲಿಲ್ಲ ಎಂದು ಬಚಖಾನ ಗೋಳಾಡುತ್ತಿದ್ದಾನೆ. ವಿರೋಧಿ ಗ್ಯಾಂಗಿನವರನ್ನೆಲ್ಲ ಒಟ್ಟೊಟ್ಟಿಗೆ ಇರುವಂತೆ ನೋಡಿಕೊಂಡು ಬಚಖಾನನನ್ನು ಮಾತ್ರ ಒಬ್ಬಂಟಿಯಾಗಿ ಪ್ರತ್ಯೇಕಿಸಿ ಹತ್ಯಾ ಯತ್ನಕ್ಕೆ ಬೇಕಾದ ಎಲ್ಲಾ ಅನುಕೂಲಗಳನ್ನೂ ಕಲ್ಪಿಸಿಕೊಟ್ಟಿದ್ದರು ವೀರಭದ್ರಸ್ವಾಮಿ.


ಬೆಳಗಾವಿ ಜೈಲಿನ ಕೈದಿಗಳ ಊಟಕ್ಕೆಂದು ಪ್ರತಿನಿತ್ಯ ಕ್ವಿಂಟಾಲ್‌ಗಟ್ಟಲೇ ಅಕ್ಕಿ ಬೇಕು. ಗೋಧಿ-ಜೋಳವನ್ನು ಬಿಡದೆ ಮೂಟೆ ಮೂಟೆ ರೇಷನ್ನನ್ನು ಬೆಳಗಾವಿಯ ಅಕ್ಕಿ ಸ್ಮಗ್ಲರ್ ಓರ್ವನ ಮೂಲಕ ವೀರಭದ್ರಸ್ವಾಮಿ ಮಾರಿಕೊಳ್ಳುತ್ತಿದ್ದಾರೆಂದು ಅಲ್ಲಿನ ಕೈದಿಗಳೇ ಸರ್ಕಾರಕ್ಕೆ ದೂರು ಸಲ್ಲಿಸಿದ್ದಾರೆ. ವಾರಕ್ಕೊಮ್ಮೆ ಜೈಲಿನ ಗೋಡೆಯಾಚೆಯಿಂದ ಕೇಜಿ ಲೆಕ್ಕದಲ್ಲಿ ಗಾಂಜಾ ಪೊಟ್ಟಣಗಳನ್ನು ತೂರುವುದು ಇಲ್ಲಿನ ಮತ್ತೊಂದು ದಂಧೆ. ಇದಲ್ಲದೆ ಯಾರೇ ಕೈದಿಯೊಬ್ಬ ಜೈಲಲ್ಲಿ ಮೊಬೈಲ್ ಬಳಸಬೇಕೆಂದರೆ ಆದಕ್ಕೆಂದೇ ಹತ್ತು ಸಾವಿರ ರೂಪಾಯಿಗಳ ಮಂತ್ಲಿ ಕಪ್ಪ ಸಲ್ಲಿಸಬೇಕು. ಸದ್ಯ ಬೆಳಗಾವಿ ಜೈಲೊಂದರಲ್ಲೇ ಐವತ್ತಕ್ಕೂ ಅಧಿಕ ಮೊಬೈಲುಗಳಿವೆ ಎಂದರೆ ಈ ಒಂದೇ ಬಾಬತ್ತಿನಿಂದ ಡಿಐಜಿ ವೀರಭದ್ರ ಸ್ವಾಮಿಗೆ ಐದು ಲಕ್ಷದ ಮಂತ್ಲಿ ಇನ್‌ಕಮ್ಮಿದೆ!


ಯೂಸುಫ್ ಬಚಖಾನ್

ಧರಣೇಶನ ದರ್ಬಾರು!


ಮಿಕ್ಕಂತೆ ಗಾಂಜಾ ದಂಧೆ, ಲಿಕ್ಕರ್ ದಂಧೆ, ಕಮಾನೆತ್ತದಂತೆ ವಿಶೇಷ ಕಾಣಿಕೆ! ಒಂದೇ ಬ್ಯಾರಕ್ಕಿನಲ್ಲಿ ಮೋಜು-ಮಸ್ತಿಗೆ ಅವಕಾಶ ಇತ್ಯಾದಿ ಸೇವೆಗಳಿಗೆ ಡಿಐಜಿ ಸಾಹೇಬರ ರೇಟೆ ಬೇರೆಯಿದೆ. ಸಾಲದ್ದಕ್ಕೆ ಬೆಳಗಾವಿ ಜೈಲಿಗೊಬ್ಬ ಸೂಪರಿಂಟೆಂಡೆಂಟ್ ಕೂಡ ಗತಿಯಿಲ್ಲ.

ಹೀಗಾಗಿ ಡಿಐಜಿ ಹುದ್ದೆಯ ಜೊತೆಗೆ ಸೂಪರಿಂಟೆಂಡೆಂಟ್ ಹುದ್ದೆಯೂ ಬೋನಸ್ಸಿನಂತೆ ವೀರಭದ್ರಸ್ವಾಮಿಯ ಕೈ ಸೇರಿದೆ. ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ತಲ್ಲೂರ್ ಇನ್ನೇನು ನಿವೃತ್ತಿಯ ಅಂಚಿನಲ್ಲಿರುವುದರಿಂದ ತನ್ನ ಪಾಡಿಗೆ ತಾನಿದ್ದು ಬಿಡುತ್ತಾರೆ. ಹೀಗಾಗಿ ವೀರಭದ್ರಸ್ವಾಮಿಗೆ ಒಂದಲ್ಲ ಮೂರು ಹುದ್ದೆಗಳನ್ನು ಒಟ್ಟೊಟ್ಟಿಗೇ ಅನುಭವಿಸುವ ಸೌಭಾಗ್ಯ. ಇದಕ್ಕೆ ಬೇಕಾದ ಎಲ್ಲಾ ವಸೂಲಿ ಡೀಲು ಹಪ್ತಾ ಸಂಗ್ರಹಿಸಿಕೊಡುವವನು ಶಿವಮೊಗ್ಗದ ಕೇಡಿ ಧರಣೇಶ. ಈತ ಜೀವಾವಧಿ ಕೈದಿ. ಈತನಿಗೆಂದೇ ವೀರಭದ್ರ ಸ್ವಾಮಿ ಪ್ರತ್ಯೇಕ ಬ್ಯಾರಕ್ಕೊಂದನ್ನು ಕಲ್ಪಿಸಿದ್ದಾರೆ. ಜೊತೆಗೆ ಈತನ ಹತ್ತು ಮಂದಿ ಚೇಲಾಗಳಿಗೂ ಅದೇ ಬ್ಯಾರಕ್ಕಿನಲ್ಲಿ ಬಿಟ್ಟಿದ್ದಾರೆ. ಇವರ ಮೇಲೆ ಡಿಐಜಿಗೆ ಎಂಥಾ ವ್ಯಾಮೋಹವೆಂದರೆ ಬೇರೆಲ್ಲಾ ಕೈದಿಗಳಿಗೆ ಮಾಡುವ ಅಡುಗೆಯನ್ನು ಈ ಮಂದಿ


ಹಿಂಡಲಗಾ ಜೈಲು ಕಟ್ಟಡ...

ಎಡಗೈನಲ್ಲೂ ಮುಟ್ಟುವುದಿಲ್ಲ. ಇಡೀ ಜೈಲಿಗೇ ಬೇರೆ ಊಟವಾದರೆ ಧರಣೇಶನ ಗ್ಯಾಂಗಿಗೇ ಬೇರೆ ಅಡುಗೆಯ ವ್ಯವಸ್ಥೆಯಿದೆ. ಇದಕ್ಕೆ ಬೇಕಾದ ಅಕ್ಕಿ, ಸಕ್ಕರೆ, ಮಸಾಲೆಗಳನ್ನು ಮಂತ್ಲಿ ಆಧಾರದ ಮೇಲೆ ಧರಣೇಶನಿಗೆ ಸರಬರಾಜಾಗುತ್ತಿವೆ.

ತಮಾಷೆಯೆಂದರೆ ಇದೇ ಧರಣೇಶ ತನಗೆಂದು ಪ್ರತ್ಯೇಕವಾಗಿ ಮಾಡಿಸಿದ ಅಡುಗೆಯಲ್ಲಿ ಪಕ್ಕದ ಹೆಂಗಸರ ಬ್ಯಾರಕ್ಕಿಗೆ ಪ್ರತಿ ನಿತ್ಯ ಎರಡು ಊಟ ಕಳಿಸುತ್ತಾನೆ. ಹೆಂಗಸರ ವಾರ್ಡಿಗೆ ಧರಣೇಶನ ಸ್ಪೆಷಲ್ ಊಟವೇ ಹೋಗುತ್ತದೆ ಎಂದ ಮೇಲೆ ಬೇರೆ ಏನೆಲ್ಲ ವ್ಯವಸ್ಥೆಯನ್ನು ವೀರಭದ್ರಸ್ವಾಮಿ ಕರುಣಿಸಲಿಕ್ಕಿಲ್ಲ?


ಗಗನ್‌ದೀಪ್

ತಿರುಗಿಬಿದ್ದ ಸಿಬ್ಬಂದಿ

ಇದರ ಹೊರತಾಗಿ ಜೈಲಿನ ಕೈದಿಗಳಿಗೆಂದು ಮೊಬೈಲ್ ಬಾಡಿಗೆ ಕೊಡುವುದು, ಅವರ ಸಂಬಂಧಿಕರಿಂದ ತಮ್ಮ ಅಕೌಂಟಿಗೆ ದುಡ್ಡು ಹಾಕಿಸಿಕೊಂಡು ಅದರಲ್ಲಿ ತಮ್ಮ ಪಾಲು ಮುರಿದುಕೊಂಡು ಕೈದಿಗಳಿಗೆ ತಲುಪಿಸುವುದು ಇಲ್ಲಿನ ಮತ್ತೊಂದು ದಂಧೆ. ಜೈಲಿನ ವಾರ್ಡನ್ ಒಬ್ಬನಿಂದ ಮೊಬೈಲ್ ಖರೀದಿಸಿದ್ದ ಕೈದಿಯೊಬ್ಬ ಅದಕ್ಕೆಂದು ಮೊದಲೇ ಮೂರು ಸಾವಿರ ರೂಪಾಯಿ ಕೊಟ್ಟಿದ್ದ. ವಾರ್ಡನ್ ಇನ್ನೂ ಮೂರು ಸಾವಿರ ಹೆಚ್ಚಾಗಿ ಕೇಳಿದ್ದಕ್ಕೆ ಆತ ಬರೀ ಒಂದು ಸಾವಿರವನ್ನಷ್ಟೇ ಕೊಟ್ಟ. ಅದಕ್ಕೆ ಕೆಂಡವಾದ ವಾರ್ಡನ್ ಕೈದಿಯನ್ನೇ ಹಿಡಿದು ಬಡಿದುಬಿಟ್ಟ. ಇದನ್ನು ಪ್ರತಿಭಟಿಸಿ ಕೈದಿಗಳೆಲ್ಲ ಪ್ರತಿಭಟನೆ ನಡೆಸಿದರು.

2011ರ ಜೂನ್ ತಿಂಗಳಲ್ಲಿ ಬೆಳಗಾವಿಯ ಎಸ್‌ಪಿ ಸಂದೀಪ್ ಪಾಟೀಲ್ ಏಕಾಏಕಿ ಜೈಲಿನ ಮೇಲೆ ದಾಳಿ ನಡೆಸಿದಾಗ ಡಜನ್ನುಗಟ್ಟಲೇ ಮೊಬೈಲುಗಳು ಚಾರ್ಜರ್‌ಗಳು, ಗಾಂಜಾ, ಟೆಲಿವಿಷನ್ ಸೆಟ್ಟುಗಳು ಸಿಕ್ಕಿಬಿದ್ದವು. ಇದಾವುದರಿಂದಲೂ ಡಿಐಜಿ ವೀರಭದ್ರಸ್ವಾಮಿ ಪಾಠ ಕಲಿಯಲಿಲ್ಲ. ಏಕೆಂದರೆ ವೀರಭದ್ರಸ್ವಾಮಿಗೆ ಬಂದೀಖಾನೆ ಇಲಾಖೆಯಲ್ಲಿ ಗಾಡ್‌ಫಾದರ್‌ನಂತಿದ್ದ ಬೆಂಗಳೂರಿನ ಡಿಐಜಿ ವಿ.ಎಸ್. ರಾಜಾ. ಜೈಲಧಿಕಾರಿಯಾಗಿದ್ದುಕೊಂಡೇ ದುಬೈ ರಿಟರ್ನ್ ಡಾನ್ ಒಬ್ಬನ ಸೇವೆಗೆ ನಿಂತು ಆತನಿಗೆ ಬೇಕಾದ ಕೈದಿಗಳಿಗೆ ಜೈಲಲ್ಲಿ ಅನುಕೂಲ ಕಲ್ಪಿಸುವುದು ರಾಜಾ ಸಾಹೇಬರ ಹರಕತ್ತು.

ವೀರಭದ್ರಸ್ವಾಮಿಯ ಅನಾಚಾರವನ್ನು ಕಂಡ ಹಿಂಡಲಗಾ ಜೈಲಿನ ಸಿಬ್ಬಂದಿಗಳೇ ತಿರುಗಿಬಿದ್ದು ಇಲ್ಲಿಗೆ ತಿಂಗಳ ಹಿಂದೆಯೇ ಇಲಾಖಾ ಮುಖ್ಯಸ್ಥ ಗಗನ್ ದೀಪ್‌ಗೆ ದೂರು ಕೊಟ್ಟಿದ್ದಾರೆ. ಇದಕ್ಕೆ ಮುನ್ನ ಇಲ್ಲಿನ ಕೈದಿಗಳು ಕೊಟ್ಟ ದೂರಿಗೆ ಲೆಕ್ಕವಿರಲಿಲ್ಲ. ಯಾವ ಜೈಲಿನ ಸಿಬ್ಬಂದಿಗಳೇ ತನ್ನ ದುರಾಚಾರದ ವಿರುದ್ಧ ತಿರುಗಿ ಬಿದ್ದದ್ದು ಗೊತ್ತಾಯಿತೋ ವೀರಭದ್ರಸ್ವಾಮಿ ಮತ್ತೊಬ್ಬ ಡಿಐಜಿ ರಾಜಾರನ್ನು ಪಳಗಿಸಿಕೊಂಡಿದ್ದೇ ಬಂಡೆದ್ದ ಏಳೂ ಮಂದಿ ಜೈಲು ಸಿಬ್ಬಂದಿಯನ್ನು ಎತ್ತಂಗಡಿ ಮಾಡಿಸಿಬಿಟ್ಟ. ಈ ಪೈಕಿ ಜೈಲರ್ ಯಲಗಾರ್, ವಾರ್ಡನ್ ಕೋತಗಿ ಮತ್ತೊಬ್ಬ ವಾರ್ಡನ್ ಹೊನಕಂಡಿಯವರನ್ನು ಅಥಣಿಯ ಜೈಲಿಗೆ ಎತ್ತಂಗಡಿ ಮಾಡಿಸಿದ್ದು ಡಿಐಜಿ ವೀರಭದ್ರಯ್ಯರ ಅಟ್ಟಹಾಸದ ಪರಮಾವಧಿಯಷ್ಟೆ.

ಇದರ ಅಡ್ಡ ಪರಿಣಾಮವೀಗ ಬೆಂಗಳೂರು ಭೂಗತ ಜಗತ್ತಿನ ಮೇಲಾಗಿದೆ. ಜೈಲಲ್ಲಿದ್ದುಕೊಂಡೇ ಶಿವಾಜಿನಗರದ ಬಿಲ್ಡರ್ ಉಮರ್ ಫಾರೂಕ್‌ನನ್ನು ಸುಪಾರಿಕೊಟ್ಟು ಕೊಲ್ಲಿಸಲು ಯೂಸುಫ್ ಬಚಖಾನ ಟ್ಯಾನರಿ ರೋಟಿನ ಪಾತಕಿಗಳಿಗೆ ಒಂದಲ್ಲ ಮೂರು ರಿವಾಲ್ವರ್ ಹೊಂಚಿ ಕೊಡಿಸಿದ್ದು ಬಯಲಾಗಿದೆ. ಬಾಣಸವಾಡಿಯ ಇನ್ಸ್‌ಪೆಕ್ಟರ್ ರಂಗಪ್ಪ ಏನಾದರೂ ಕೊಂಚ ಯಾಮಾರಿದ್ದರೆ ಈ ಹೊತ್ತಿಗೆ ಬಿಲ್ಡರ್ ಫಾರೂಕ್ ಗುಂಡೇಟಿಗೆ ಬಲಿಯಾಗಿರುತ್ತಿದ್ದ. ಇದೇ ಜೈಲಲ್ಲಿದ್ದ ಅರಸಯ್ಯ ತನ್ನ ಹುಡುಗರನ್ನು ಬಿಟ್ಟು ಡಕಾಯಿತಿ ಮಾಡಿಸಲೆತ್ನಿಸಿದನೆಂದು ಆತನ ಹುಡುಗರೂ ಪೊಲೀಸರಿಗೆ ಸಿಕ್ಕಿಬಿದ್ದರು.

ಸದ್ಯ ಯೂಸುಫ್ ಬಚಖಾನನ ಜೊತೆ ಅರಸಯ್ಯನನ್ನೂ ಬೆಂಗಳೂರು ಪೊಲೀಸರು ವಿಚಾರಣೆಗೆಂದು ಎಳೆದೊಯ್ದಿದ್ದು ಡಿಐಜಿ ವೀರಭದ್ರಯ್ಯರ ಜೈಲು ಲೂಟಿಯ ಪರಿಣಾಮವಲ್ಲದೆ ಮತ್ತೇನಲ್ಲ. ಇದೇ ಜೈಲಲ್ಲಿ ಈ ಹಿಂದೆ ಮುಂಬೈ ಪಾತಕಿ ರಷೀದ್ ಮಲಬಾರಿಯೂ ಇದ್ದ. ಆಗ ಬೆಳಗಾವಿಗೆ ಎಸ್ಪಿಯಾಗಿದ್ದ ಸೋನಿಯಾ ನಾರಂಗ್ ಜೈಲಿಗೇ ನುಗ್ಗಿ ರಷೀದ್ ಮಲಬಾರಿಯ ಕೋಣೆಯಲ್ಲಿ ತಪಾಸಣೆ ನಡೆಸಿದಾಗ ಸಿಕ್ಕಿದ್ದು ಒಂದಲ್ಲ ಮೂರು ಮೊಬೈಲುಗಳು. ಇಂಥ ಮೊಬೈಲುಗಳ ಮೂಲಕ ರಷೀದ್ ಆವತ್ತು ಇಂಟರ್‌ನ್ಯಾಷನಲ್ ಕರೆಗಳನ್ನು ಮಾಡಿದ್ದ!


ಈಗ ಯೂಸುಫ್ ಬಚಖಾನ, ಅರಸಯ್ಯ ಮತ್ತು ರಷೀದ್ ಮಲಬಾರಿಯನ್ನೂ ಸೇರಿಸಿ ಬೆಂಗಳೂರು ಪೊಲೀಸರು ವಶಕ್ಕೆ ಪಡೆದಿದ್ದರ ಹಿಂದೆ ಡಿಐಜಿ ವೀರಭದ್ರಯ್ಯನ ಪಾಲೆಷ್ಟು? ಈ ಬಗ್ಗೆ ತನಿಖೆ ಮಾಡುವವರ್‍ಯಾರು? ಬಂದೀಖಾನೆ ಮಂತ್ರಿ ನಾರಾಯಣಸ್ವಾಮಿ ಕೂಡ ದುರಾಚಾರ ಕಂಡೂ ತೆಪ್ಪಗಿದ್ದಾರೆಯೆಂದರೆ ಅದು ಅಸಹಾಯಕತೆಯೋ ಅಥವಾ ಪಾಪದ ಪಾಲಿನ ಫಲವೋ?

● ರಾ.ಸೋಮನಾಥ


ವಂಚಕ ನಾಗೇಂದ್ರರೆಡ್ಡಿಯ ಎಸ್ಕೇಪ್

ಇಂಟರ್‌ನ್ಯಾಷನಲ್ ವಂಚಕ ನಾಗೇಂದ್ರರೆಡ್ಡಿ ಇಲ್ಲಿಗೆ ವರ್ಷದ ಹಿಂದಷ್ಟೇ ಹಿಂಡಲಗಾ ಜೈಲಿನಿಂದ ಎಸ್ಕೇಪಾಗಿದ್ದ. ನೆರೆಯ ಆಂಧ್ರದಿಂದ ಹಿಡಿದು ದೂರದ ಇಂಗ್ಲೆಂಡ್ ತನಕ ಹಣಕಾಸು ವಂಚನೆ ಮಾಡಿ ನೂರಾರು ಜನಕ್ಕೆ ಟೋಪಿ ಹಾಕಿದ್ದ ನಾಗೇಂದ್ರರೆಡ್ಡಿ ಇಲ್ಲಿನ ಜೈಲು ಭ್ರಷ್ಟಾಚಾರವನ್ನು ಸದುಪಯೋಗ ಮಾಡಿಕೊಂಡೇ ಪರಾರಿಯಾಗಿದ್ದ. ಇದಕ್ಕೆ ಯಾರ್‍ಯಾರನ್ನೋ ಹೊಣೆ ಮಾಡಿ ಶಿಕ್ಷಿಸಿದ ಬಂದೀಖಾನೆ ಅಧಿಕಾರಿಗಳಿಗೆ ವೀರಭದ್ರ ಸ್ವಾಮಿಯ ಜೈಲು ಲೂಟಿ ಮಾತ್ರ ಕಾಣಿಸಲೇ ಇಲ್ಲ.

ಈಗಲೂ ಅಷ್ಟೆ, ಹಿಂಡಲಗಾ ಜೈಲಲ್ಲಿದ್ದುಕೊಂಡೆ ಬಚಖಾನ್ ಬಿಲ್ಡರ್ ಫಾರೂಕ್ ಹತ್ಯೆಗೆ ಕೈಹಾಕಿದ್ದು ಮತ್ತು ಅದಕ್ಕೆ ದುಬೈ ಪಾತಕಿ ರಷೀದ್ ಮಲಬಾರಿ ಕೈ ಜೋಡಿಸಿದ್ದಕ್ಕೆ, ಬೆಳಗಾವಿ ಜೈಲಿನ ದುರವಸ್ಥೆಯ ಪಾಲೂ ಇತ್ತೆನ್ನಿಸುತ್ತು.



ಚುನಾವಣಾ ಸಮೀಕ್ಷೆ: ಕೂಸು ಹುಟ್ಟುವ ಮುನ್ನ ಕುಲಾವಿ



ಜಗದೀಶ್ ಶೆಟ್ಟರ್ ಸರಕಾರಕ್ಕೆ ಮತ್ತೆ ಹೊಸ ಕಂಟಕ ಒದಗಿ ಬಂದಿದೆ. ಇನ್ನೇನು ಕಾವೇರಿ ಸಮಸ್ಯೆ ತಣ್ಣಗಾಯಿತು. ಯಡಿಯೂರಪ್ಪನವರ ರಾಜೀನಾಮೆಯ ಡೆಡ್ ಲೈನ್ ಡ್ರಾಮಾದ ಬೆದರಿಕೆಯೂ ಮುಗಿದುಹೋಯಿತು. ಬಜೆಟ್ ಅನ್ನು ಮಂಡಿಸಲು ಬಿಡುವುದಿಲ್ಲ ಎಂಬ ಯಡಿಯೂರಪ್ಪನವರ ಬೆದರಿಕೆ ಕೂಡಾ 'ಠುಸ್' ಆಯಿತು. ಉಳಿದಿರುವ ಮೂರು ತಿಂಗಳಾದರೂ ಆರಾಮವಾಗಿ ಕಾಲ ಕಳೆಯಬಹುದು ಎಂದು ಶೆಟ್ಟರ್ ಅಂದುಕೊಳ್ಳುತ್ತಿರುವಾಗಲೇ ಈಗ ಇನ್ನೊಂದು ಸಮಸ್ಯೆ ಭುಗಿಲೆದ್ದಿದೆ. ಅದೇನೆಂದರೆ ನಗರ ಸ್ಥಳೀಯಸಂಸ್ಥೆಗಳಿಗೆ ಚುನಾವಣೆಯನ್ನು ನಿಗದಿತ ಸಮಯದಲ್ಲೇ ಮಾಡುತ್ತೇನೆ ಎಂದು ರಾಜ್ಯ ಚುನಾವಣಾ ಆಯೋಗದ ಆಯುಕ್ತ ಸಿ.ಆರ್.ಚಿಕ್ಕಮಠ ಅವರು ಹಠ ಹಿಡಿದಿರುವುದು.

ಇದರಿಂದಾಗಿ ಶೆಟ್ಟರ್ ಸರಕಾರ ಈಗ ಧರ್ಮಸಂಕಟದಲ್ಲಿ ಸಿಲುಕಿಕೊಂಡಿದೆ. ಒಂದೇ ಒಂದು ಸಮಾಧಾನದ ಸಂಗತಿ ಯಾವುದೆಂದರೆ ಈ ಬಾರಿಯ ಸಮಸ್ಯೆಯನ್ನು ಎದುರಿಸಲು ಶೆಟ್ಟರ್ ಅವರಿಗೆ ವಿರೋಧಪಕ್ಷದವರೂ ಸಾತ್ ನೀಡಿರುವುದು. ಚುನಾವಣಾ ಆಯೋಗದ ಆಯುಕ್ತ ಚಿಕ್ಕಮಠ ಅವರು ರಾಜ್ಯದ 209 ನಗರ ಸ್ಥಳೀಯಸಂಸ್ಥೆಗಳ ವಾರ್ಡು ವಾರು ಚುನಾವಣೆ ಮಾಡಿಯೇ ಸಿದ್ಧ ಎಂದು ಹೇಳಿರುವುದು ಬರೀ ಶೆಟ್ಟರ್ ಅವರಿಗೆ ಮಾತ್ರವಲ್ಲ, ಎಲ್ಲಾ ರಾಜಕೀಯ ಪಕ್ಷದವರ ನಿದ್ದೆ ಕೆಡಿಸಿದೆ. ಈ ಚುನಾವಣೆಯನ್ನು ನಡೆಸಬೇಕೆಂದು ಸುಪ್ರೀಂಕೋರ್ಟ್ ಆದೇಶ ನೀಡಿರುವುದರಿಂದ ತಾನು ಈ ಕ್ರಮ ಕೈಗೊಂಡಿದ್ದೇನೆ ಎಂದು ಚಿಕ್ಕಮಠ ಸ್ಪಷ್ಟೀಕರಣ ನೀಡಿ ತಮ್ಮ ನಿಲುವಿಗೆ ಅಂಟಿಕೊಂಡಿದ್ದಾರೆ. ಈ ಮಧ್ಯೆ ಇದನ್ನು ಮರುಪರಿಶೀಲಿಸಬೇಕೆಂದು ವಿಧಾನಮಂಡಲದ ನಿರ್ಣಯವನ್ನು ಸುಪ್ರೀಂಕೋರ್ಟ್‌ಗೆ ಸಲ್ಲಿಸಲಾಗಿದೆ. ಇದರ ಬಗ್ಗೆ ಸುಪ್ರೀಂಕೋರ್ಟ್ ತೀರ್ಪು ನೀಡುವ ಮುನ್ನವೇ ಚಿಕ್ಕಮಠರು ಚುನಾವಣೆ ನಡೆಸಲು ಹೊರಟಿರುವುದು ಎಲ್ಲಾ ಪಕ್ಷಗಳ ಶಾಸಕರಿಗೆ ಸಿಟ್ಟು ತಂದಿದೆ. ಈ ಕಾರಣಕ್ಕಾಗಿಯೇ ವಿಧಾನಮಂಡಲದ ನಿರ್ಣಯವನ್ನು ಉಲ್ಲಂಘಿಸಿದರು ಎಂದು ಚಿಕ್ಕಮಠರ ವಿರುದ್ಧ ಮೊನ್ನೆ ಎಲ್ಲರೂ ಪಕ್ಷಭೇದ ಮರೆತು ಹಕ್ಕುಚ್ಯುತಿ ಮಂಡನೆಗೆ ಹೊರಟಿದ್ದು. ಆದರೂ ತಾನು ಮಾತ್ರ ಸುಪ್ರೀಂಕೋರ್ಟ್‌ನ ಮಾರ್ಗದರ್ಶನದಂತೆ ತನ್ನ ಕಾರ್ಯವನ್ನು ಮಾಡುತ್ತಿದ್ದೇನೆ ಎಂದು ಚಿಕ್ಕಮಠ ಮತ್ತೊಮ್ಮೆ ಸ್ಪಷ್ಟೀಕರಣ ನೀಡಿ, ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಚುನಾವಣೆ ನಡೆಸುವ ಬಗ್ಗೆ ವರದಿ ನೀಡಿ ಎಂದು ಕೇಳಿಕೊಂಡಿದ್ದಾರೆ.

ಒಂದು ಕಡೆ ಸುಪ್ರೀಂಕೋರ್ಟ್‌ನ ಆದೇಶ, ಮತ್ತೊಂದು ಕಡೆ ಚುನಾವಣಾ ಆಯೋಗದ ಆಯುಕ್ತ ಚಿಕ್ಕಮಠ ಅವರ ಶಿಸ್ತುಬದ್ಧ ಕಾರ್ಯವೈಖರಿ, ಇನ್ನೊಂದೆಡೆ ಚುನಾವಣೆಗೆ ಸಂಬಂಧಪಟ್ಟಂತೆ ಶಾಸಕರಿಗಿರುವ ಭಯ... ಇವೆಲ್ಲವೂ ಒಟ್ಟಾರೆಯಾಗಿ ರಾಜ್ಯ ರಾಜಕೀಯದಲ್ಲಿ ಅಯೋಮಯ ಪರಿಸ್ಥಿತಿಯನ್ನು ಹುಟ್ಟುಹಾಕಿದೆ.


ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಬಹುತೇಕ ಎಲ್ಲಾ ರಾಜಕೀಯ ಪಕ್ಷದ ಧುರೀಣರು ಮಾತ್ರವಲ್ಲ, ಬಹುತೇಕ ಎಲ್ಲ ಶಾಸಕರ ತೀವ್ರವಾದ ವಿರೋಧವಿದೆ. ಇದಕ್ಕೆ ಕಾರಣವಿಷ್ಟೆ: ಒಂದು ವೇಳೆ ಚುನಾವಣೆ ಘೋಷಣೆಯಾದರೆ ಬಹುತೇಕ ಶಾಸಕರು ತಮ್ಮ ಮುಂದಿನ ವಿಧಾನಸಭಾ ಚುನಾವಣೆಯನ್ನು ಮರೆತು ಸ್ಥಳೀಯ ಚುನಾವಣೆಗೆ ಪ್ರಾಮುಖ್ಯತೆ ನೀಡಲೇಬೇಕಾಗುತ್ತದೆ. ಅಂದರೆ ಸ್ಥಳೀಯ ಚುನಾವಣೆಯ ಅಭ್ಯರ್ಥಿಗಳ ಆಯ್ಕೆಯ ವಿಷಯದಲ್ಲಿ ಶಾಸಕರೆಲ್ಲರೂ ಅತ್ಯಂತ ಎಚ್ಚರಿಕೆಯಿಂದ ಕಾರ್ಯ ನಿರ್ವಹಿಸಬೇಕಾಗುತ್ತದೆ. ಹೀಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ಸ್ವಲ್ಪ ಎಡವಿದರೂ ಪ್ರತಿ ಅಸೆಂಬ್ಲಿ ಕ್ಷೇತ್ರದಲ್ಲಿ ಬಂಡಾಯ ಅಭ್ಯರ್ಥಿಗಳು ಹುಟ್ಟುವುದು ಖಂಡಿತ. ಅಸೆಂಬ್ಲಿ ಚುನಾವಣೆ ಸಮೀಪಿಸುತ್ತಿರುವ ಸಂದರ್ಭದಲ್ಲೇ ತಾವೇ ಬಂಡಾಯ ಅಭ್ಯರ್ಥಿಗಳನ್ನು ಸೃಷ್ಟಿಸುವುದು ಯಾವ ಶಾಸಕರಿಗೂ ಇಷ್ಟವಿಲ್ಲ.

ಸ್ಥಳೀಯ ಚುನಾವಣೆ ನಡೆದರೆ ಒಂದು ಕಡೆ ಬಂಡಾಯ ಅಭ್ಯರ್ಥಿಗಳು ಹುಟ್ಟುತ್ತಾರೆ ಎನ್ನುವ ಭಯ ಶಾಸಕರಿಗಿದ್ದರೆ, ಮತ್ತೊಂದು ಕಡೆ ಚುನಾವಣೆ ಘೋಷಣೆಯಾದ ನಂತರ ಯಾವುದೇ ಅಭಿವೃದ್ಧಿ ಕೆಲಸಕಾರ್ಯಗಳನ್ನು ಮಾಡಲಾಗುವುದಿಲ್ಲ ಎಂಬ ಕೊರಗೂ ಶಾಸಕರಿಗಿದೆ. ಬಹುತೇಕ ಎಲ್ಲ ಶಾಸಕರು ಈ ಬಾರಿ ಶೆಟ್ಟರ್ ಮಂಡಿಸಲಿರುವ ಬಜೆಟ್‌ನಲ್ಲಿ ತಮ್ಮ ತಮ್ಮ ಕ್ಷೇತ್ರಕ್ಕೆ ತಮಗೆ ಬೇಕಾದ ಅನುದಾನ ಮತ್ತು ಅಭಿವೃದ್ಧಿ ಕೆಲಸಗಳ ಯೋಜನೆಯನ್ನು ಸೇರಿಸಿಕೊಂಡಿದ್ದಾರೆ. ಬಜೆಟ್ ಮಂಡಿಸಿದ ನಂತರ ಈ ಎಲ್ಲ ಕೆಲಸ ಕಾರ್ಯಗಳಿಗೂ ಹಣವನ್ನು ಬಿಡುಗಡೆ ಮಾಡಿ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಅಭಿವೃದ್ಧಿ ಕೆಲಸಗಳನ್ನು ಕೈಗೆತ್ತಿಕೊಂಡು ಮತದಾರರ ಮನಸ್ಸನ್ನು ಗೆಲ್ಲುವ ತಂತ್ರ ಶಾಸಕರದ್ದಾಗಿದೆ. ಆದರೆ ಸ್ಥಳೀಯ ಚುನಾವಣೆ ಘೋಷಣೆಯಾದರೆ ಈ ಅಭಿವೃದ್ಧಿ ಕೆಲಸಗಳಿಗೆ ಕಲ್ಲು ಹಾಕಿದಂತಾಗುತ್ತದೆ. ಈ ಕಾರಣಕ್ಕಾಗಿಯೂ ಸ್ಥಳೀಯ ಚುನಾವಣೆಯ ಬಗ್ಗೆ ಶಾಸಕರಿಗೆ ತಮ್ಮದೇ ಆದ ವಿರೋಧವಿದೆ.

ಚುನಾವಣೆ ಸಮೀಪಿಸುತ್ತಿರುವ ಈ ಸಂದರ್ಭದಲ್ಲಿ ಇಂತಹ ಒಂದು ಧರ್ಮ ಸಂಕಟದಲ್ಲಿ ತಾವೆಲ್ಲ ಸಿಲುಕಿಕೊಳ್ಳುತ್ತೇವೆ ಎಂದು ಯಾವ ಶಾಸಕರೂ ಭಾವಿಸಿರಲಿಲ್ಲ. ಈ ಕಾರಣಕ್ಕಾಗಿಯೇ ಈಗ ಪಕ್ಷ ಭೇದ ಮರೆತು ಎಲ್ಲರೂ ಸ್ಥಳೀಯ ಚುನಾವಣೆಯನ್ನು ಮುಂದೂಡಲು ಹರಸಾಹಸ ಮಾಡುತ್ತಿದ್ದಾರೆ; ಶೆಟ್ಟರ್ ಅವರಿಗೆ ತಮ್ಮ ಸಂಪೂರ್ಣ ಬೆಂಬಲ ಮತ್ತು ಸಹಕಾರ ನೀಡುತ್ತಿದ್ದಾರೆ. ಆದರೆ ಎಂದಿನಂತೆ ಯಡಿಯೂರಪ್ಪನವರದ್ದು ಮಾತ್ರ ಬೇರೆ ನಿಲುವು.

ಸ್ಥಳೀಯ ಚುನಾವಣೆಗಳು ಈಗ ನಡೆದರೆ ಅದರಿಂದ ಹೆಚ್ಚಿನ ಲಾಭವಾಗುವುದು ಯಡಿಯೂರಪ್ಪನವರಿಗೆ ಎಂಬುದು ಬಹುತೇಕರ ಅಭಿಪ್ರಾಯ. ಮೊದಲನೆಯದಾಗಿ, ಈಗ ಸ್ಥಳೀಯ ಚುನಾವಣೆ ನಡೆದರೆ ಯಡಿಯೂರಪ್ಪನವರ ಕೆಜೆಪಿ ಪಕ್ಷಕ್ಕೆ ಮಾತ್ರ ಯಾವುದೇ ನಷ್ಟವಿಲ್ಲ. ಏಕೆಂದರೆ ಬಹುತೇಕ ಸ್ಥಳೀಯ ಕ್ಷೇತ್ರಗಳಲ್ಲಿ ಇತರೆ ಪಕ್ಷಗಳಿಂದ ಟಿಕೆಟ್ ಪಡೆಯದವರು ತಮ್ಮ ಪಕ್ಷಕ್ಕೆ ಬರುತ್ತಾರೆ ಎಂಬುದು ಅವರ ಲೆಕ್ಕಾಚಾರ. ಹೀಗೆ ಅಸೆಂಬ್ಲಿ ಚುನಾವಣೆಯ ಮೊದಲೇ ರಾಜ್ಯಾದ್ಯಂತ ತಮ್ಮ ಪಕ್ಷಕ್ಕೆ ಕಾರ್ಯಕರ್ತರನ್ನು ಒಮ್ಮೆಂದೊಮ್ಮೆಗೆ ಪಡೆಯುವ ದುರಾಲೋಚನೆ ಯಡ್ಡಿಯದ್ದು.

ಇದೆಲ್ಲಕ್ಕಿಂತಲೂ ಇನ್ನೊಂದು ದೊಡ್ಡ ಅಪಾಯ ಶೆಟ್ಟರ್



ಸರ್ಕಾರಕ್ಕೆ ಕಾದಿದೆ. ಅದೇನೆಂದರೆ ಒಂದು ವೇಳೆ ಸುಪ್ರೀಂಕೋರ್ಟ್‌ನ ಆದೇಶ ಮತ್ತು ಸಂವಿಧಾನದ ಪ್ರಕಾರ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆದರೆ ಮತ್ತು ಆ ಚುನಾವಣೆಯಲ್ಲಿ ಆಡಳಿತಾರೂಢ ಬಿಜೆಪಿ ಪಕ್ಷ ಕಳಪೆ ಪ್ರದರ್ಶನ ನೀಡಿದರೆ ನಂತರದ ಅಸೆಂಬ್ಲಿ ಚುನಾವಣೆಯನ್ನು ಎದುರಿಸುವ ಮನೋಸ್ಥೈರ್ಯ ಕೂಡ ಬಿಜೆಪಿಯವರ ಪಾಲಿಗೆ ಕುಂದುವುದು ಸಹಜ. ಈ ಎಲ್ಲ ಕಾರಣಗಳಿಂದಾಗಿಯೇ ಸ್ಥಳೀಯ ಚುನಾವಣೆ ಈಗಿನ ಸಂದರ್ಭದಲ್ಲಿ ಬೇಡವೇ ಬೇಡ ಎಂಬುದು ಬಿಜೆಪಿಯ ನಿಲುವು.

ಚಿಕ್ಕಮಠ ಓರ್ವ ದಕ್ಷ ಅಧಿಕಾರಿ: ಯಾವುದೇ ಕಾರಣಕ್ಕೂ ಈ ಸ್ಥಳೀಯ ಚುನಾವಣೆಯನ್ನು ಮುಂದೂಡುವಂತಾಗಬಾರದು. ಶಾಸಕಾಂಗ ಮತ್ತು ನ್ಯಾಯಾಂಗದ ನಡುವೆ ಸಣ್ಣಮಟ್ಟದ ತಿಕ್ಕಾಟ ನಡೆಯುವ ಹಂತಕ್ಕೆ ಈ ವಿಷಯವನ್ನು ಬಿಜೆಪಿಯವರು ತೆಗೆದುಕೊಂಡು ಚಿಕ್ಕಮಠರನ್ನು ಸದನಕ್ಕೆ ಕರೆಸಿ ಛೀಮಾರಿ ಹಾಕಲು ಹೊರಟಿರುವುದು ಬಿಜೆಪಿಯವರ ಅಧಿಕಾರದಾಹವನ್ನು ಪ್ರದರ್ಶಿಸುತ್ತದೆ ಎಂದಷ್ಟೇ ಹೇಳಬಹುದು.

ಚಿಕ್ಕಮಠ ಅವರ ಪರವಾಗಿ ನ್ಯಾಯಾಂಗ ಇರುವುದರಿಂದ ಅವರು ಈ ರಾಜಕಾರಣಿಗಳ ಧಮಕಿಗೆ ಹೆದರದೇ ಗಟ್ಟಿತನವನ್ನು ಪ್ರದರ್ಶಿಸಿದ್ದು ಈಗ ಬಿಜೆಪಿಯವರ ಪಾಲಿಗೆ ನುಂಗಲಾರದ ತುತ್ತಾಗಿದೆ.

● ಶೆಣೈ

ಮೈಸೂರು: ಶಾಲೆ ನುಂಗಿದ ರಾಮಕೃಷ್ಣಾಶ್ರಮ!

ಬಿಜೆಪಿ ಸರ್ಕಾರದ ಕೇಸರೀಕರಣವೋ, ಮೈಸೂರು ಮಂತ್ರಿ ರಾಮದಾಸುವಿನ ರಿಯಲ್ ಎಸ್ಟೇಟ್ ಲೆಕ್ಕಾಚಾರವೋ, ಒಟ್ಟಿನಲ್ಲಿ ಮತ್ತೊಂದು ಸರ್ಕಾರಿ ಕನ್ನಡ ಶಾಲೆ ನೆಲಸಮವಾಗುತ್ತಿದೆ. At the same time, ಮೈಸೂರಿನ ಮಧ್ಯದಲ್ಲಿರುವ ಕೋಟಿಗಟ್ಟಲೆ ಬೆಲೆಬಾಳುವ ಸಾರ್ವಜನಿಕ ಜಾಗ ಪುಕ್ಕಟೆಯಾಗಿ ಪಶ್ಚಿಮ ಬಂಗಾಳ ಮೂಲದ ರಾಮಕೃಷ್ಣ ಮಿಷನ್‌ಗೆ ಬಿಕರಿಯಾಗುತ್ತಿದೆ. ಮೇಲ್ನೋಟಕ್ಕೆ ಇದೆಲ್ಲವೂ ಸ್ವಾಮಿ ವಿವೇಕಾನಂದರಿಗೆ ಸಲ್ಲಿಸುತ್ತಿರುವ ಸಲಾಮಿನಂತೆ ಕಂಡುಬಂದರೂ ರಾಜ್ಯ ಸರ್ಕಾರದ ತರಾತುರಿಯ ನಿರ್ಧಾರ, ಸ್ಥಳೀಯ ಪ್ರತಿಭಟನೆಗಳನ್ನೂ ಲೆಕ್ಕಿಸದ ರಾಮದಾಸುವಿನ ಭಂಡತನಗಳು ಈ ಹಕೀಕತ್ತಿನ ಹಿಂದಿರುವ ಮಸಲತ್ತುಗಳನ್ನು ತೆರೆದಿಡುತ್ತವೆ.

ಮೈಸೂರು ನಗರದ ದೇವರಾಜ್ ಅರಸ್ ರಸ್ತೆ ಮತ್ತು ಶೇಷಾದ್ರಿ ಐಯ್ಯರ್ ರಸ್ತೆಗಳಿಗೆ ಹೊಂದಿಕೊಂಡಂತಿರುವ ಶತಮಾನದಷ್ಟು ಹಳೆಯದಾದ ನ್ಯೂ ಟೈಪ್ ಮಾಡೆಲ್ ಸ್ಕೂಲ್‌ಗೆ ಸೇರಿದ ಸುಮಾರು 36,590 ಚದರ ಅಡಿಗಳ ಜಾಗವನ್ನು ರಾಜ್ಯ ಸರ್ಕಾರ ರಾಮಕೃಷ್ಣ ಮಿಷನ್‌ಗೆ ನೀಡಿದೆ. ಇಪ್ಪತ್ತನೇ ಶತಮಾನದ ಆರಂಭದಲ್ಲಿ ಅಂದಿನ ಮೈಸೂರು ಮಹಾರಾಜ ನಾಲ್ವಡಿ ಕೃಷ್ಣ ರಾಜ ಒಡೆಯರ್‌ರು ಬಡ ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕೆಂದು ಸ್ಥಾಪಿಸಿದ್ದ ಈ ಎನ್.ಟಿ.ಎಂ.ಎಸ್ ಕನ್ನಡ ಮಾಧ್ಯಮ ಶಾಲೆ ನಂತರದಲ್ಲಿ ಸರ್ಕಾರಿ ಶಾಲೆಯಾಗಿ ಬದಲಾಗಿತ್ತು. ಇದಕ್ಕೆ ಅತುಕೊಂಡಂತೇ ಇರುವ 'ನಿರಂಜನ್' ಮಠದ ಅಭಿವೃದ್ಧಿಯ ನೆಪದಲ್ಲಿ ಶಾಲೆಯನ್ನೆ ಬಿಕರಿ ಮಾಡಿರುವ ಸರ್ಕಾರ ತನ್ನ ಶಿಕ್ಷಣದ ಕನಿಷ್ಠ ಆದ್ಯತೆಯನ್ನು ಮತ್ತೊಮ್ಮೆ ಜಗಜ್ಜಾಹೀರುಗೊಳಿಸಿದೆ.

ಇದಿಷ್ಟು ಅವಾಂತರಕ್ಕೂ ಒಂದು ಪುಟ್ಟ ಚರಿತ್ರೆಯಿದೆ. ಮಹಾರಾಜ ಚಾಮರಾಜ್ ಒಡೆಯರ್‌ರ ಆಹ್ವಾನದ ಮೇರೆಗೆ 1892ರಲ್ಲಿ ಮೈಸೂರಿಗೆ ಬಂದಿದ್ದ ಸ್ವಾಮಿ ವಿವೇಕಾನಂದರು ಒಂದು ವಾರಗಳ ಕಾಲ ಈ ಶಾಲೆಯ ಪಕ್ಕದಲ್ಲೇ ಇರುವ ಕಟ್ಟಡದಲ್ಲಿ ತಂಗಿದ್ದರಂತೆ. ಅಲ್ಲಿಂದಲೇ ಅವರು ಐತಿಹಾಸಿಕ ಭಾಷಣ ಮಾಡಲು ಚಿಕಾಗೋಕ್ಕೆ ತೆರಳಿದ್ದರು ಎನ್ನಲಾಗಿದೆ. ಅವರ ಸ್ಮರಣೆಗಾಗಿ ಖುದ್ದು ಮಹಾರಾಜರೆ ವಿವೇಕಾನಂದರು ತಂಗಿದ್ದ ಕಟ್ಟಡವನ್ನು ನಿರಂಜನ್ ಮಠವನ್ನಾಗಿ ಮರುಸ್ಥಾಪಿಸಿದ್ದರು. ಅದಾದ ಮೇಲೆ ಸದರಿ ಎನ್.ಟಿ.ಎಂ.ಎಸ್ ಶಾಲೆಯನ್ನೂ ಪಕ್ಕದಲ್ಲೇ ಸ್ಥಾಪಿಸಲಾಗಿತ್ತು, ಸೂಕ್ತ ಕಾಳಜಿ



1892ರಲ್ಲಿ ಸ್ವಾಮಿ ವಿವೇಕಾನಂದ ತಂಗಿದ್ದ ಮೈಸೂರಿನ ಕಟ್ಟಡ

ಯಿಲ್ಲದೆ ಆ ಕಟ್ಟಡ ಶಿಥಿಲ ಸ್ಥಿತಿಯನ್ನು ತಲುಪಿದ್ದರಿಂದ ಅದನ್ನು ತಮಗೆ ಬಿಟ್ಟು ಕೊಟ್ಟರೆ ಅಭಿವೃದ್ಧಿಪಡಿಸಿ ಅಲ್ಲಿ 'ವಿವೇಕ ಸ್ಮಾರಕ' ಹೆಸರಿನಲ್ಲಿ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸುವುದಾಗಿ ಕಳೆದ ಅಕ್ಟೋಬರ್‌ನಲ್ಲಿ ಪಶ್ಚಿಮ ಬಂಗಾಳ ಮೂಲದ ರಾಮಕೃಷ್ಣ ಮಿಷನ್ ಸರ್ಕಾರಕ್ಕೆ ಅರ್ಜಿ ಸಲ್ಲಿಸಿತ್ತು.




ಜನವರಿ 9ರಂದು ನಡೆದ ಸಚಿವ ಸಂಪುಟದ ಸಭೆಯಲ್ಲಿ ರಾಜ್ಯ ಸರ್ಕಾರ ರಾಮಕೃಷ್ಣ ಮಿಷನ್‌ನ ಅರ್ಜಿಯನ್ನು ಮಾನ್ಯ ಮಾಡಿ ಆದೇಶ ಹೊರಡಿಸಿತ್ತು. ಮಿಷನ್ ಕೇಳಿದ ಮಠವನ್ನು ಮಾತ್ರ ನೀಡಿದ್ದರೆ ಯಾರ ತಕರಾರೂ ಇರುತ್ತಿರಲಿಲ್ಲ. ಆದರೆ ಮೈಸೂರು ಉಸ್ತುವಾರಿ ಸಚಿವ ರಾಮದಾಸುವಿನ ದೂ(ದು)ರಾಲೋಚನೆಯಿಂದಾಗಿ ಮಠ ಮಾತ್ರವಲ್ಲದೆ ಅನಾಮತ್ತು ಒಂದು ಎಕರೆ ಭೂಮಿಯನ್ನೆ ದಾನ ಮಾಡಿರುವುದು ಹಲವು ಅನುಮಾನಗಳಿಗೆ ಎಡೆ ಮಾಡಿಕೊಡುತ್ತದೆ. ಸದ್ಯದ ಮಾರ್ಕೆಟ್ ಬೆಲೆಯಂತೆ ಏನಿಲ್ಲವೆಂದರೂ 40 ಕೋಟಿ ಬೆಲೆಬಾಳುವ ಭೂಮಿ ಅದು. ಇದಕ್ಕಾಗಿ ಎನ್.ಟಿ.ಎಂ.ಎಸ್ ಶಾಲೆಯನ್ನು ಬಂದ್ ಮಾಡಿ, ಶಾಲಾ ಕಟ್ಟಡವನ್ನು ನೆಲಸಮ ಮಾಡುವುದಾಗಿ ರಾಮದಾಸ್ ಬಹಿರಂಗ ಹೇಳಿಕೆ ನೀಡಿದ್ದಾರೆ.

ಅಸಲಿಗೆ ಶಾಲೆಗೆ ಸೇರಿದ ಜಾಗವನ್ನು ಹೀಗೆ ದಾನ ಮಾಡಲು ಸರ್ಕಾರಕ್ಕೆ ಸಂಪೂರ್ಣ ಅಧಿಕಾರವೇ ಇಲ್ಲ. ಯಾಕೆಂದರೆ ಶಾಲೆ ಮತ್ತದರ ವ್ಯಾಪ್ತಿಯ ಸಂಪೂರ್ಣ ಜಾಗದ ಒಡೆತನ ಸೇರುವುದು ಮೈಸೂರು ಜಿಲ್ಲಾ ಪಂಚಾಯ್ತಿಗೆ. ಜಿಲ್ಲಾ ಪಂಚಾಯ್ತಿಯಿಂದ ಸಂವಿಧಾನಬದ್ಧವಾದ ಅನುಮತಿ ಪಡೆದ ನಂತರವಷ್ಟೆ ರಾಜ್ಯ ಸರ್ಕಾರ ಈ ತೀರ್ಮಾನಕ್ಕೆ ಬರಬೇಕಾಗಿತ್ತು. ಆದರೆ ಈ ವಿಚಾರದಲ್ಲಿ ರಾಮದಾಸನಾಗಲಿ, ಸಿ.ಎಂ ಶೆಟ್ಟರ್ ಆಗಲಿ ಅಂತಹ ಔಚಿತ್ಯವನ್ನೇ ತೋರಿಲ್ಲ. ಥೇಟ್ ಸರ್ವಾಧಿಕಾರಿಗಳಂತೆ ಸಾರ್ವಜನಿಕರ ಜಾಗವನ್ನು ದಾನ ಮಾಡಿ ಘೋಷಿಸಿ ಕೊಟ್ಟಿದ್ದಾರೆ. ಅಲ್ಲಿಗೆ ಬಿಜೆಪಿಗೆ ಸಂವಿಧಾನದ ಎ,ಬಿ,ಸಿ,ಡಿ,ಯೇ ತಿಳಿದಿಲ್ಲ ಎನ್ನುವುದು ಖಾತ್ರಿಯಾಗಿದೆ. ಸ್ಥಳೀಯ ಆಡಳಿತಗಳ ಸ್ವಾಯತ್ತತೆ ಮೇಲೆ ಸವಾರಿ ಮಾಡಬಾರದೆನ್ನುವ ಕನಿಷ್ಠ ವಿವೇಚನೆಯೂ ಇಲ್ಲದ ರಾಜ್ಯ ಸರ್ಕಾರದ ವಿರುದ್ಧ ತಿರುಗಿ ಬಿದ್ದಿರುವ ಮೈಸೂರು ಜಿಲ್ಲಾ ಪಂಚಾಯ್ತಿ ಇತ್ತೀಚೆಗೆ ಸಭೆ ಸೇರಿ ಶಾಲೆಯನ್ನು ಬಿಕರಿ ಮಾಡಲು ಸುತಾರಾಂ ಒಪ್ಪುವುದಿಲ್ಲವೆನ್ನುವ ನಿರ್ಧಾರಕ್ಕೆ ಬಂದಿದೆ. ಸರ್ಕಾರ ಇದಕ್ಕೂ ಮಣಿಯದಿದ್ದರೆ ಕೋರ್ಟ್‌ನ ಮೆಟ್ಟಿಲೇರುವ ಆಯ್ಕೆಯನ್ನೂ ಮುಖ್ಯವಾಗಿರಿಸಿಕೊಂಡಿದೆ. ಹಾಗೇನಾದರು ಆದಲ್ಲಿ ಅಧಿಕಾರಾವಧಿಯ ಕಡೇ ಕ್ಷಣದಲ್ಲಿರುವ ಬಿಜೆಪಿಗೆ ಭರ್ಜರಿ ಮುಖಭಂಗವಾಗುವುದು ಮಾತ್ರವಲ್ಲ, ತನ್ನದೇ ಅಧೀನ ಆಡಳಿತದಿಂದ ಕೇಸು ಜಡಿಸಿಕೊಂಡ ಸರ್ಕಾರವೆಂಬ ಪ್ರಥಮಕ್ಕೂ ಸಾಕ್ಷಿಯಾಗಲಿದೆ.

ಜಿಲ್ಲಾ ಪಂಚಾಯ್ತಿಯ ವಿರೋಧವೂ ಅಲ್ಲದೆ ಕನ್ನಡ ಕ್ರಿಯಾ ಸಮಿತಿ ಮೊದಲಾದ ಸ್ಥಳೀಯ ಸಂಘಟನೆಗಳು, ಪ್ರಗತಿಪರ ಕನ್ನಡ ಸಾಹಿತಿಗಳು ಸರ್ಕಾರದ ಈ ನಿಲುವನ್ನು ಖಂಡಿಸಿ ಪ್ರತಿಭಟನೆ ನಡೆಸುತ್ತಿದ್ದಾರೆ. ಇದ್ಯಾವುದಕ್ಕೂ ಕ್ಯಾರೆ ಎನ್ನದ ರಾಮದಾಸು ಶಾಲೆಯ ಮಕ್ಕಳು ಮತ್ತು ಶಿಕ್ಷಕರನ್ನು ಪಕ್ಕದ ದೇವರಾಜು ಶಾಲೆಗೆ ವರ್ಗಾಯಿಸಿದ್ದು, ತಮ್ಮ ನಿರ್ಧಾರವನ್ನು ಬದಲಾಯಿಸುವ ಮಾತೇ ಇಲ್ಲ ಎನ್ನುತ್ತಿದ್ದಾರೆ. ಅಲ್ಲದೆ ಜಾಗವನ್ನು ಸಂಪೂರ್ಣವಾಗಿ ರಾಮಕೃಷ್ಣ ಮಿಷನ್‌ಗೆ ಬಿಟ್ಟುಕೊಟ್ಟಿಲ್ಲ, ಬದಲಾಗಿ ಅಭಿವೃದ್ಧಿ ಪಡಿಸುವ ಯೋಜನೆಯನ್ನು ಮಾತ್ರ ಅದಕ್ಕೆ ನೀಡಿದ್ದು, ಉಸ್ತುವಾರಿ ಸಮಿತಿಯ ಅಧ್ಯಕ್ಷತೆಯನ್ನು ಜಿಲ್ಲಾಧಿಕಾರಿ ನೋಡಿಕೊಳ್ಳಲಿದ್ದಾರೆ ಎನ್ನುವ ಸಬೂಬನ್ನೂ ನೀಡುತ್ತಿದ್ದಾರೆ. ಇದೊಂಥರಾ ಬಡ ರೈತರ ಜಮೀನನ್ನು ನೈಸ್ ಕಂಪನಿಗೆ ಅಡವಿಟ್ಟ ಡ್ರಾಮಾಕ್ಕಿಂತ ಭಿನ್ನವಾದದ್ದೇನೂ ಅಲ್ಲ. ಅಷ್ಟಕ್ಕೂ ಮಠವಿರುವ ಜಾಗದಲ್ಲಿ ವಿವೇಕ ಸ್ಮಾರಕದ ನಿರ್ಮಾಣವಾದರೆ, ಶಾಲೆಯನ್ನು ಧ್ವಂಸ ಮಾಡಿ ಅಲ್ಲಿ ನಿರ್ಮಿಸಲು ಹೊರಟಿರುವುದು 'ಜ್ಞಾನಬುತ್ತಿ? ಎನ್ನುವ ಸಂಸ್ಥೆಯನ್ನು. ಇದು ಮಕ್ಕಳಿಗೆ ಸಂಜೆಯ ವೇಳೆ ಜ್ಞಾನ ನೀಡುವ ಕೇಂದ್ರವಂತೆ. ಈಗ ಅಲ್ಲಿ ಕಲಿಯುತ್ತಿರುವ ಮಕ್ಕಳ ಶಿಕ್ಷಣವನ್ನು ಒಕ್ಕಲೆಬ್ಬಿಸಿ ಧರ್ಮ, ಆಧ್ಯಾತ್ಮದ ಹೆಸರಲ್ಲಿ ಜ್ಞಾನ ನೀಡುವ ರಾಮದಾಸುವಿನ ಐಡಿಯಾಲಜಿಯೆ ಬಲು ಹಾಸ್ಯಾಸ್ಪದ ಎನಿಸುತ್ತದೆ.

ಅಂತೂಇಂತೂ ಸ್ವಾಮಿ ವಿವೇಕಾನಂದರ ಅಪೂರ್ವ ಆಧ್ಯಾತ್ಮಿಕತೆಯನ್ನೆ ಸರಕಾಗಿಸಿಕೊಂಡು ಭೂಮಿಯನ್ನು ಲಪಟಾಯಿಸುವ ನಾಟಕಕ್ಕೆ ಮಂತ್ರಿ ರಾಮದಾಸುವೇ ಸೂತ್ರಧಾರರು ಎಂಬುಂದಂತೂ ಸತ್ಯ. ಧರ್ಮದ ಹೆಸರಲ್ಲಿ ದೇಶದ ವಿಭಜನೆ ಸಲ್ಲದು ಎಂಬಿತ್ಯಾದಿ ಹೇಳಿಕೆಗಳ ಮೂಲಕ ಟಿಪ್ಪು ವಿವಿಯನ್ನು ಖಂಡತುಂಡವಾಗಿ ವಿರೋಧಿಸುತ್ತಿರುವ ಸದರಿ ರಾಮದಾಸನೇ ಧಾರ್ಮಿಕತೆಯ ಹೆಸರಲ್ಲಿ 'ಜ್ಞಾನಬುತ್ತಿ' ಕಟ್ಟಲು ತವಕಿಸುತ್ತಿರುವುದು ವಿಚಿತ್ರವೋ? ವ್ಯವಹಾರವೋ? ....ಜನರೇ ತೀರ್ಮಾನಿಸಬೇಕು.

● ಗಿರೀಶ್ ತಾಳಿಕಟ್ಟೆ

ಮುಂದಿನ ನೂರು ದಿನದಲ್ಲಿ ನಡೆಯಬಹುದಾದ ಕರ್ನಾಟಕ ವಿಧಾನಸಭಾ ...ಾವಣೆಗೆ ಸಂಬಂಧಿಸಿದಂತೆ ಈಗಾಗಲೇ ಎರಡು ಸಮೀಕ್ಷೆಗಳು ಪ್ರಕಟವಾಗಿವೆ.

ಒಂದು, ಈಗ್ಗೆ ಎರಡು ತಿಂಗಳ ಹಿಂದೆ ಸುವರ್ಣ ಟಿವಿ ಹಾಗೂ ಕನ್ನಡ ... ದಿನಪತ್ರಿಕೆ ಸಂಸ್ಥೆಯವರು **C-Fore** ಎಂಬ ಇನ್ನೊಂದು ಸಮೀಕ್ಷಾ ...ಸ್ಥೆಯ ಮೂಲಕ ನಡೆಸಿದ ವಿಶ್ಲೇಷಣಾ ವರದಿ ಈಗಾಗಲೇ ಪ್ರಕಟಗೊಂಡಿದೆ.

ಈಗ ತೆಹೆಲ್ಕಾ ಸಂಸ್ಥೆಯು **C-Voter** ಸಂಸ್ಥೆಯ ಮೂಲಕ ನಡೆಸಿರುವ ...ಸ ಸಮೀಕ್ಷಾ ವರದಿಯೂ ಹೊರಬಂದಿದೆ.

ಇವೆರಡೂ ಸಮೀಕ್ಷಾ ವರದಿಗಳಲ್ಲಿ ಈ ಬಾರಿ ಬಿಜೆಪಿಯು ಸರ್ಕಾರ ...ಸುವಷ್ಟು ಸೀಟ್ ಗೆಲ್ಲಲಾರದೆಂತಲೂ, ಕಾಂಗ್ರೆಸ್‌ಗೆ ಸರಳ, ಸ್ಪಷ್ಟ ಬಹುಮತ ...ಲಿದೆಯೆಂತಲೂ ಊಹಿಸಲಾಗಿದೆ.

ಅಂದಹಾಗೆ ಕಾಂಗ್ರೆಸ್ ಹೈಕಮಾಂಡ್ ಕೆಲ ವಾರಗಳ ಹಿಂದೆಯೇ ತಾನೊಂದು ...ಸಗಿಯಾದ ಆಂತರಿಕ ಸಮೀಕ್ಷೆ ನಡೆಸಿದ್ದು ನೂರಾಹತ್ತು ಸೀಟುಗಳನ್ನು ...ಲ್ಲುವ ಸಾಧ್ಯತೆಯಿದೆ ಎಂಬುದಾಗಿ ಪತ್ತೆಹಚ್ಚಿದೆ.

ಈ ಸಮೀಕ್ಷೆಗಳೆಲ್ಲಾ ಸದ್ಯಕ್ಕೆ ಕಾಂಗ್ರೆಸ್ ಪಾಲಿಗೆ ಚಿಗುರಿದ ...ನಸಿನಂತಿರಬಹುದು. ಆದರೆ ಈ ಕನಸನ್ನು ನಿಜವಾಗಿಸಿಕೊಳ್ಳಲು ಕಾಂಗ್ರೆಸ್

ಕಾಂಗ್ರೆಸ್‌ನ ಚಿಗುರಿದ ಕನಸು

...ಳ ಕಷ್ಟಪಡಬೇಕಾಗುತ್ತದೆ. ಏಕೆಂದರೆ ಕಾಂಗ್ರೆಸ್‌ನ ಹಳೇ ಕಾಯಿಲೆ ಏನೆಂದರೆ ...ಾ ಅಧಿಕಾರ ತನ್ನಂತೆ ತಾನೆ ತನ್ನ ಬಳಿ ಬರಲಿ ಎಂದು ಕಾದು ಕೂರುವ ...ವೇ ವಿನಃ ಹೋರಾಡಿ ಅಧಿಕಾರ ಪಡೆಯುವ ಪಕ್ಷವಲ್ಲ.

ಸುವರ್ಣ ಸಮೀಕ್ಷೆ

ಸುವರ್ಣ ವಾಹಿನಿಯ ಸಮೀಕ್ಷೆಯ ಮುಖ್ಯಾಂಶಗಳು ಹೀಗಿದ್ದವು.

ಬಿಜೆಪಿ	ಕಾಂಗ್ರೆಸ್	ದಳ	ಕೆಜೆಪಿ	ಇತರೆ
63	133	19	5	4

ಹೀಗೆ 224 ಕ್ಷೇತ್ರಗಳ ಪೈಕಿ 218 ನ್ನು ನಾಲ್ಕು ಪ್ರಮುಖ ಪಕ್ಷಗಳಿಗೆ ...ಚಿರುವ ಈ ಸಮೀಕ್ಷೆಯನ್ನು ತೆಹೆಲ್ಕಾ ಸಮೀಕ್ಷೆಯೊಂದಿಗೆ ಹೋಲಿಸಿ ...ೋಡಿದರೆ ಒಂದಷ್ಟು ವ್ಯತ್ಯಾಸಗಳು ಕಾಣಸಿಗುತ್ತವೆ.

ತೆಹೆಲ್ಕಾ ಪ್ರಕಾರ

ಬಿಜೆಪಿ	ಕಾಂಗ್ರೆಸ್	ದಳ	ಕೆಜೆಪಿ	ಇತರೆ
58	115	31	14	4

ಎಂಬುದಾಗಿ ಪಕ್ಷಾವಾರು ಗೆಲ್ಲಬಲ್ಲ ಸೀಟುಗಳ ಸಂಖ್ಯೆಯನ್ನು ...ದಾಜಿಲಾಗಿದೆ.

2008 ರ ಚುನಾವಣೆಯಲ್ಲಿ ಬಿಜೆಪಿ 110, ಕಾಂಗ್ರೆಸ್ 80, ದಳಕ್ಕೆ 28 ...ಗೂ 6 ಪಕ್ಷೇತರರು ಗೆದ್ದಿದ್ದಾರೆಂಬ ವಾಸ್ತವ ಲೆಕ್ಕವನ್ನು ಪರಿಗಣಿಸಿ ...ೋಡಿದರೆ ತೆಹಲ್ಕಾಗಿಂತಾ ಸುವರ್ಣ ಸಮೀಕ್ಷೆ ಸ್ವಲ್ಪ ಬೆಟರ್ ...ಸುವಂತೆ ಮೇಲ್ನೋಟಕ್ಕೆ ಕಾಣುತ್ತಿದೆ.

ಈ ಬಾರಿ ಬಿಜೆಪಿ ತಾನು 2008 ರಲ್ಲಿ ಗೆದ್ದಿದ್ದ ನೂರಾಹತ್ತು ...ಗಗಳನ್ನು ಗೆಲ್ಲಲಾರದೆಂಬುದು ಸ್ವತಃ ಬಿಜೆಪಿಗೂ ಅರ್ಥವಾಗಿದೆ. ...ರೆ ಕಾಂಗ್ರೆಸ್ ಅಷ್ಟು ಸಲೀಸಾಗಿ ಬಹುಮತ ಪಡೆದುಬಿಡುತ್ತದೆಯೇ ...ಬುದು ಅನುಮಾನಾಸ್ಪದ. ಏಕೆಂದರೆ ಮೂರ್ನಾಲ್ಕು ಪ್ರಮುಖ ...ಾರಗಳು ಇಲ್ಲಿ ಕಾಂಗ್ರೆಸ್‌ಗೆ ಅಡ್ಡಿಯಾಗಬಹುದು.

ಒಂದು, ಕಾಂಗ್ರೆಸ್ ಒಬ್ಬ ಸಮರ್ಥರನ್ನು ನಾಯಕನಾಗಿ ಬಿಂಬಿಸದೆ ...ಮೂಹಿಕ ನಾಯಕತ್ವದ ಹಳೇ ಪುರಾಣ ತೆಗೆಯುತ್ತಿದೆ. ಇದು ...ಪಕ್ಷದೊಳಗಿನ ಐಕ್ಯಮತದ ಕೊರತೆಯನ್ನು ಜೊತೆಗೆ ಆಂತರಿಕ ...ಟ್ಟಗಳನ್ನಷ್ಟೇ ಬಿಂಬಿಸುವಂತಿದೆ. ಜೊತೆಗೆ ಕೇಂದ್ರದ ಯುಪಿಎ ...ರದ ದುರಾಡಳಿತ, ಬೆಲೆ ಏರಿಕೆಗಳೆಲ್ಲಾ ನೇರವಾಗಿ ಕಾಂಗ್ರೆಸ್‌ನ ...ಡುಗೆಗಳೇ ಆಗಿರುವಾಗ ರಾಜ್ಯದ ಮತದಾರರಿಗೆ ಕಾಂಗ್ರೆಸ್ ... ಪ್ರೀತಿ ಉಕ್ಕಿ ಬರಲು ಕಾರಣಗಳೆಲ್ಲಿವೆ?

ಕರ್ನಾಟಕದ ಮತದಾರರು ಈ ಬಾರಿ ಬಿಜೆಪಿಯನ್ನು ತಿರಸ್ಕರಿಸಲು ...ರಾರು ಕಾರಣಗಳನ್ನು ಸ್ವತಃ ಬಿಜೆಪಿಗಳೇ ಒದಗಿಸಿದ್ದಾರೆ. ಆದರೆ ಅವೆಲ್ಲವೂ ...ಗ್ರೆಸ್‌ಗೆ ಮಾತ್ರ ವರದಾನವಾಗಿ ಬದಲಾಗಿಬಿಡುತ್ತದಾ?

ಜೆಡಿಎಸ್, ಕೆಜೆಪಿ, ಬಿಎಸ್‌ಪಿ ಹಾಗೂ ರಾಮುಲು ಕಾಂಗ್ರೆಸ್‌ನ ಅಸ್ತಿತ್ವವನ್ನು ತೆಹೆಲ್ಕಾ ಸಮೀಕ್ಷೆ ನಿರ್ಲಕ್ಷಿಸಿದ್ದರೂ ಮತದಾರನೂ ಹಾಗೆ ವರ್ತಿಸಲಾರ. ಏಕೆಂದರೆ 224 ಸೀಟುಗಳ ಪೈಕಿ ಜೆಡಿಎಸ್, ಕೆಜೆಪಿ, ಬಿಎಸ್‌ಪಿ, ರಾಮುಲು ಕಾಂಗ್ರೆಸ್ ಹಾಗೂ ಪಕ್ಷೇತರರೆಲ್ಲರೂ ಸೇರಿದಂತೆ ತೆಹಲ್ಕಾ ಮಂಜೂರು ಮಾಡಿರುವುದು ಜುಜುಬಿ 28 ಸೀಟು ಮಾತ್ರ!

ಇದು **under valuation** ಎಂದಷ್ಟೇ ಹೇಳಲಿಕ್ಕೆ ಸಾಧ್ಯ.

ಈ ಬಾರಿಯ ಚುನಾವಣೆಯಲ್ಲಿ ಯಾವ ಪ್ರಮುಖ ಪಕ್ಷಗಳಿಗೂ ಅಭ್ಯರ್ಥಿಗಳ ಕೊರತೆಯಾಗುವುದಿಲ್ಲ, ಅದರ ಬದಲಾಗಿ ಕಿಕ್ಕಿರಿದು ನುಗ್ಗುವ ಟಿಕೆಟ್ ಆಕಾಂಕ್ಷಿಗಳ ಪೈಕಿ ಗೆಲ್ಲಬಲ್ಲ ತಾಕತ್ತಿರುವ ಕುದುರೆಗಳನ್ನು ಆರಿಸುವುದೇ ಆಯಾ ಪಾರ್ಟಿಗಳಿಗೆ ತಲೆನೋವು ತರಬಹುದು.


ಬಹುಕೋನ ಸ್ಪರ್ಧೆ ಹಾಗೂ ಗೆಲುವಿನ ಅಂತರ

ಚುನಾವಣಾ ಸಮೀಕ್ಷೆ

ಕಳೆದ ಸಾರಿಯ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಕೇವಲ ಎರಡೂ ಮೂರು ಸಾವಿರ ಓಟುಗಳ ಅಂತರದಿಂದ ಗೆದ್ದ ಅಭ್ಯರ್ಥಿಗಳ ಸಂಖ್ಯೆ ಮೂವತ್ತರಷ್ಟಿತ್ತು.

ನೆನಪಿಡಿ.

ಆಗ ಅಖಾಡದಲ್ಲಿ ಕೆಜೆಪಿಯಾಗಲಿ ಅಥವಾ ರಾಮುಲು ಕಾಂಗ್ರೆಸ್ ಆಗಲಿ ಇರಲಿಲ್ಲ, ಆದರೆ ಈ ಬಾರಿ ಐದಾರು ಪಾರ್ಟಿಗಳ ಅಭ್ಯರ್ಥಿಗಳ ಪೈಪೋಟಿಯಲ್ಲಿ ಓಟುಗಳು ಚಿದುರಿಹೋಗಿ ಗೆಲ್ಲುವ ಅಭ್ಯರ್ಥಿಗಳ ಓಟಿನ

ಅಂತರ ಸಹಜವಾಗಿಯೇ ಕಡಿಮೆಯಾಗಲೂಬಹುದು.

ಹಾಗೆ ಗೆಲ್ಲುವ ಅಭ್ಯರ್ಥಿಯ ಓಟಿನ ಅಂತರವು ಮೂರ್ನಾಲ್ಕು ಸಾವಿರದ ಒಳಗಿದ್ದರೆ ಗೆಲ್ಲುವ ಸಾಧ್ಯತೆ ಕೇವಲ ಕಾಂಗ್ರೆಸ್‌ಗೆ ಮಾತ್ರವಲ್ಲ ದಳ, ಕೆಜೆಪಿಗೂ ಇದ್ದೇ ಇರುತ್ತದೆ. ಬಹುಕೋನ ಸ್ಪರ್ಧೆಯ ಸಂಕೀರ್ಣ ಸ್ಥಿತಿಗೆ ಉದಾಹರಣೆಯಾಗಿ ತೀರ್ಥಹಳ್ಳಿ ಕ್ಷೇತ್ರವನ್ನೇ ತೆಗೆದುಕೊಳ್ಳೋಣ.

ಅಲ್ಲಿ ಕಾಂಗ್ರೆಸ್‌ನಿಂದ ಕಿಮ್ಮನೆ ರತ್ನಾಕರ್, ಬಿಜೆಪಿಯ ಆರಗ ಜ್ಞಾನೇಂದ್ರ 2008 ರಲ್ಲಿ ಪ್ರಮುಖ ಸ್ಪರ್ಧಿಗಳಾಗಿದ್ದರು. ಜೆಡಿಎಸ್‌ನಿಂದ ನಿಂತಿದ್ದ ರಾಮ ಮನೋಹರ್ ಅವತ್ತು ಲೆಕ್ಕಕ್ಕಿರಲಿಲ್ಲ, ಅಂದು ಕಿಮ್ಮನೆ ಗೆದ್ದಿದ್ದರು. ಆದರೆ ಈ ಬಾರಿ ಕಿಮ್ಮನೆ ಹಾಗೂ ಆರಗರ ಜೊತೆಗೆ ದಳದಿಂದ ಮದನ್ ಹಾಗೂ ಕೆಜೆಪಿಯಿಂದ ಮಂಜುನಾಥ ಗೌಡ ಅಖಾಡಕ್ಕಿಳಿಯುತ್ತಿದ್ದಾರೆ. ಜಾತಿಯಲ್ಲಿ ಇವರೆಲ್ಲರೂ ಒಕ್ಕಲಿಗ ಸಮುದಾಯಕ್ಕೆ ಸೇರಿದವರೆ. ಜೊತೆಗೆ ಕಾರ್ಯಕರ್ತರ ಪಡೆ, ಬಂಧು, ಬಳಗದವರ ನೆಟ್‌ವರ್ಕ್ ಹಾಗೂ ಹಣದ ಸಾಮರ್ಥ್ಯದಲ್ಲಿ ಯಾರೇನೂ ದುರ್ಬಲರಲ್ಲ, ಅಲ್ಲಿ ಒಳ್ಳೆಯತನಕ್ಕೆ ಕಿಮ್ಮನೆ ಹೆಸರಾಗಿದ್ದಾರೆ. ಆದರೆ ಜಾತಿ ಲೆಕ್ಕಾಚಾರಗಳೇ ಮೇಲುಗೈ ಸಾಧಿಸಿಬಿಟ್ಟರೆ ಗೆಲ್ಲಬೇಕಾದ ಅಭ್ಯರ್ಥಿಗೆ ಒಕ್ಕಲಿಗರ ಓಟುಗಳೊಂದಿಗೆ ಅಹಿಂದ ಅಥವಾ ಲಿಂಗಾಯತರ ಓಟುಗಳ ನೆರವೂ ಬೇಕೇಬೇಕಾಗುತ್ತದೆ. ಅಂತಹ ಸಂದರ್ಭ ಬಂದರೆ ಕಿಮ್ಮನೆ ಕೆಜೆಪಿಯ ಮಂಜುನಾಥ ಗೌಡರ ಪ್ರಬಲ ಸವಾಲನ್ನು ಎದುರಿಸಬೇಕಾಗುತ್ತದೆ. ಇಂತಲ್ಲಿ ಗೆಲುವಿನ ಅಂತರ ಐದು ಸಾವಿರ ದಾಟಿದರೆ ಅದೇ ಹೆಚ್ಚು.

ಶಿವಮೊಗ್ಗ ಕ್ಷೇತ್ರದ ಇನ್ನೊಂದು ಉದಾಹರಣೆ ತೆಗೆದುಕೊಂಡರೆ ಅಲ್ಲಿ ಬಿಜೆಪಿಯ ಈಶ್ವರಪ್ಪ ಕೆಜೆಪಿಯ ರುದ್ರೇಗೌಡ, ಕಾಂಗ್ರೆಸ್‌ನಿಂದ ಪ್ರಸನ್ನಕುಮಾರ್ ಅಥವಾ ಯೋಗೇಶ್ ಅಥವಾ ದಿವಾಕರ್ ನಿಂತರೆ ದಳದಿಂದ ಶ್ರೀಕಾಂತ್ ಅಖಾಡಕ್ಕಿಳಿಯುತ್ತಾರೆ. ಈಶ್ವರಪ್ಪಗೆ ಕಳೆದ ಬಾರಿ ಮೂವತ್ತು ಸಾವಿರದಷ್ಟು ಲೀಡ್ ಸಿಕ್ಕಿ ಗೆದ್ದಿದ್ದರು. ಇದಕ್ಕೆ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಇಸ್ಮಾಯಿಲ್ ಖಾನ್‌ರ ಅನರ್ಹತೆಯೂ ಒಂದು ಕಾರಣವಾಗಿತ್ತು, ಜೊತೆಗೆ ಯಡ್ಡಿಯ ಕಾರಣದಿಂದ ಬಿದ್ದ ಲಿಂಗಾಯತರ ಓಟುಗಳ ಕೊಡುಗೆಯೂ ಸಾಕಷ್ಟಿತ್ತು.

ಈ ಬಾರಿ ಈಶ್ವರಪ್ಪಗೆ ಲಿಂಗಾಯತರ ಪೂರ್ಣ ಓಟುಗಳಂತೂ ಸಿಗಲಾರದು. ಅವೆಲ್ಲ ಕೆಜೆಪಿಯ ರುದ್ರೇಗೌಡರ ಪಾಲಾಗಲಿವೆ. ಮುಸ್ಲಿಮರಂತೂ ಕಾಂಗ್ರೆಸ್ ಜೊತೆಗಿರುವ ಸಾಧ್ಯತೆಗಳಿವೆ. ಜೊತೆಗೆ ದಳದವರು ಕೀಳುವ ಓಟುಗಳು, ಬಿಎಸ್‌ಪಿ ರಾಮುಲುನ ಅಭ್ಯರ್ಥಿಯ ಪಾಲುಗಳನ್ನೆಲ್ಲಾ ಲೆಕ್ಕಾ ಹಾಕಿದರೆ ಗೆಲ್ಲುವ ಅಭ್ಯರ್ಥಿಗೆ ಐದು ಸಾವಿರ ಲೀಡ್ ಸಿಕ್ಕರೆ ಅದೇ ಜಾಸ್ತಿ ಎನಿಸುವಂತಿದೆ.

ಸ್ವಿಂಗ್ ಎಂಬ ಅಗೋಚರ ಚಕ್ರ

2008 ರ ಚುನಾವಣೆಯಲ್ಲಿ ಒಟ್ಟು ಚಲಾವಣೆಯಾದ ಓಟುಗಳಲ್ಲಿ ಬಿಜೆಪಿಗೆ ಸಿಕ್ಕಿದ್ದು ಕೇವಲ ಶೇ. 34 ಮಾತ್ರ. ಮತ್ತೊಂದೆಡೆ ಕಾಂಗ್ರೆಸ್ ಶೇ. 35 ರಷ್ಟು ಓಟು ಪಡೆದಿದ್ದರೂ ಗೆದ್ದ ಸೀಟ್ ಸಂಖ್ಯೆಯಲ್ಲಿ ಬಿಜೆಪಿಗಿಂತ 30 ಕಡಿಮೆಯಾಗಿತ್ತು, ಸುಮಾರು 30 ಕ್ಷೇತ್ರಗಳಲ್ಲಿ ಬಿಜೆಪಿಯ ಜುಜುಬಿ ಎರಡು ಸಾವಿರ ಓಟುಗಳ ಅಂತರದಲ್ಲಷ್ಟೇ ಗೆದ್ದಿತ್ತು. ತೆಹೆಲ್ಕಾ ಪ್ರಕಾರ 2013 ರ ಎಲೆಕ್ಷನ್‌ನಲ್ಲಿ ಬಿಜೆಪಿಯು ಶೇ. 28 ರಷ್ಟನ್ನು ಕಾಂಗ್ರೆಸ್ ಶೇ. 37 ರಷ್ಟು ಓಟನ್ನು ಗಳಿಸಲಿವೆ. ಅಂದರೆ ಕಾಂಗ್ರೆಸ್‌ಗೆ ಕಳೆದ ಬಾರಿಗಿಂತ ಕೇವಲ ಶೇ. 2 ರಷ್ಟು ಓಟುಗಳು ಮಾತ್ರ ಹೆಚ್ಚಿಗೆ ಸಿಗಲಿವೆ. ಆದರೂ ಅದು ಗೆಲ್ಲಬಹುದಾದ ಸೀಟುಗಳ ಸಂಖ್ಯೆಯನ್ನು ಕಳೆದ ಬಾರಿಯ 80 ರಿಂದ ಈ ಬಾರಿ 133 ಕ್ಕೆ ಹೆಚ್ಚಿಸಲಿದೆ ಎನ್ನಲಾಗಿದೆ.

ಜೊತೆಗೆ ಬಿಜೆಪಿಯು ಶೇ. 6 ರಷ್ಟು ಮತದಾರರನ್ನು ಕಳೆದುಕೊಳ್ಳುವ ಮೂಲಕ ಒಟ್ಟು 47 ಸೀಟುಗಳನ್ನು ಕಳೆದುಕೊಂಡು 63 ಅಷ್ಟೇ ಗೆಲ್ಲಲು ಸಾಧ್ಯ ಎಂದು ಅಂದಾಜಿಸಲಾಗಿದೆ.

ಕಾಂಗ್ರೆಸ್ ಚಿಗುರಿದ ಕನಸು

ಬಿಜೆಪಿಯ ದುರಾಡಳಿತದ ಹಾಗೂ ಸಮೀಕ್ಷಾ ವರದಿಗಳ ಅಂಕಿಅಂಶಗಳಿಂದ ಕೊಂಚ ಆತ್ಮವಿಶ್ವಾಸ ಹೆಚ್ಚಿಸಿಕೊಂಡಿರುವ ಕಾಂಗ್ರೆಸ್ ಚುನಾವಣಾ ತಯಾರಿಯಲ್ಲಿ ಬೇರೆಲ್ಲಾ ಪಕ್ಷಗಳಿಗಿಂತ ಮುಂದೆ ಸಾಗುತ್ತಿದೆ.

ಕಾಂಗ್ರೆಸ್‌ಗೆ ಅಭ್ಯರ್ಥಿಗಳ ಕೊರತೆ ಇಲ್ಲ ನಿಜ. ಆದರೆ ಟಿಕೆಟ್ ಹಂಚಿಕೆಯಲ್ಲಿ ಯಾರ್ಯಾರೋ ಮೂಗು ತೂರಿಸುತ್ತಾ ತರಲೆ ಎಬ್ಬಿಸಿದರೆ ಆದೆಲ್ಲಾ ಫಲಿತಾಂಶವನ್ನು ಕೆಡಿಸಬಲ್ಲದು. 2008 ರಲ್ಲಿ ಅಸಮರ್ಥರಿಗೆ ಟಿಕೆಟ್ ಕೊಟ್ಟ ಕಾರಣದಿಂದಲೇ ಕಾಂಗ್ರೆಸ್ ಗೆಲ್ಲಬಹುದಾಗಿದ್ದ ಒಂದು ಡಜನ್ ಸ್ಥಾನಗಳನ್ನು ವಿನಾಕಾರಣ ಕಳೆದುಕೊಂಡಿತ್ತು. ಚುನಾವಣೆ ಗೆದ್ದು ಕಾಂಗ್ರೆಸ್ ಸರ್ಕಾರ ರಚಿಸುವ, ಮುಖ್ಯಮಂತ್ರಿಯಾಗುವ ಕನಸು ಕಾಣುತ್ತಿರುವ ಎಲ್ಲಾ ಆಕಾಂಕ್ಷಿಗಳೂ ತಮ್ಮ ಬೆಂಬಲಿಗರಿಗೇ ಟಿಕೆಟ್ ನೀಡಲು ಲಾಬಿ ಮಾಡುತ್ತಾರೆ.

ಗೆಲ್ಲಬಲ್ಲವರ ಬದಲಾಗಿ ಬೆಂಬಲಿಗರಿಗೇ ಟಿಕೆಟ್ ಕೊಟ್ಟು ಗೆಲುವನ್ನೇ ದೂರ ತಳ್ಳುವ ಪ್ರವೃತ್ತಿ ಈ ಬಾರಿಯೂ ಕಾಂಗ್ರೆಸ್‌ನಲ್ಲಿ ಪುನರಾವರ್ತನೆಯಾದರೆ ಮತದಾರರೇನು ಮಾಡಿಯಾರು?

ಪಾಳುಬಿದ್ದ ಓಶೋ ಆಶ್ರಮ

ಓಶೋ ಅಥವಾ ರಜನೀಶ್ ಭಾರತ ಕಂಡಿರುವ 'ಗುರು'ಗಳಲ್ಲಿ ಅತಿ ರಂಜಕ ಮನುಷ್ಯ. ಇವತ್ತಿಗೂ ಈತನ ಹಿಂಬಾಲಕರು ಜಗತ್ತಿನಾದ್ಯಂತ ಲಕ್ಷಾಂತರ ಸಂಖ್ಯೆಯಲ್ಲಿದ್ದಾರೆ. ಆತನ ಪುಸ್ತಕಗಳು ಈಗಲೂ ಸಾವಿರಾರು ಸಂಖ್ಯೆಯಲ್ಲಿ ಮಾರಾಟವಾಗುತ್ತವೆ. ಆತನ ಹೆಸರಲ್ಲಿ ಪ್ರತಿ ವಾರ ಹಲವಾರು ಕಡೆ ಶಿಬಿರಗಳು ನಡೆಯುತ್ತಲೇ ಇರುತ್ತವೆ. ಓಶೋ ಕೊನೆಯುಸಿರೆಳೆದು ಇಲ್ಲಿಗೆ 23 ವರ್ಷಗಳಾಗಿದ್ದರೂ ಆತನ ಪ್ರಭಾವ ಇನ್ನೂ ಎಲ್ಲೆಡೆ ಇದೆ...


ಒಂದು ಕಾಲದಲ್ಲಿ ಒಂದೇ ಒಂದು ಪದವನ್ನು ಆಡದಿದ್ದರೂ, ಗಂಟೆಗಟ್ಟಲೇ ಮೌನವಾಗಿದ್ದರೂ ಸಾವಿರಾರು ಜನ ತನ್ನ ತಾಳಕ್ಕೆ ಕುಣಿಯುವಂತೆ ಮಾಡುತ್ತಿದ್ದ, ಜಗತ್ತಿನಾದ್ಯಂತ ಕೋಟ್ಯಾಂತರ ರೂಪಾಯಿ ಬೆಲೆಬಾಳುವ ಆಶ್ರಮಗಳನ್ನು ಹೊಂದಿದ್ದ, ಬರೋಬ್ಬರಿ 93 ಐಶಾರಾಮಿ ರೋಲ್ಸ್ ರಾಯ್ಸ್ ಕಾರುಗಳ ಒಡೆಯನಾಗಿದ್ದ, ತನ್ನ ಟೋಪಿಗೆ ವಜ್ರಗಳನ್ನು ಅಂಟಿಸಿಕೊಳ್ಳುತ್ತಿದ್ದ ಓಶೋನ ಸಾಮ್ರಾಜ್ಯ ಕುಸಿದು ಬಿದ್ದ ಪರಿ ಇವತ್ತಿಗೂ ಅಚ್ಚರಿ ಮೂಡಿಸುತ್ತದೆ. ಏಕೆಂದರೆ ಆತನ ಕತೆಯಲ್ಲಿ ಆಧ್ಯಾತ್ಮಿಕತೆ ಇದೆ, ರಸಿಕತೆ ಇದೆ, ದುರಾಶೆ ಇದೆ, ತಂತ್ರಕುತಂತ್ರ ಇದೆ, ದೈವಮಾನವನಿಗಿಂತ ಸಹಜವಾದ ಮನುಷ್ಯನ ಲಾಲಸೆ ಇದೆ...

ಚಂದ್ರಮೋಹನ್ ಆಗಿ ಜನಿಸಿದ ಓರ್ವ ಬುದ್ಧಿವಂತ ಎರಡೇ ಎರಡು ದಶಕಗಳಲ್ಲಿ ಜಗದ್ವಿಖ್ಯಾತನಾದ. ಆದರೂ ಕೊನೆಗೆ ಹಲವಾರು ರೋಗಗಳಿಂದ ತತ್ತರಿಸಿ ತನ್ನ 58ನೇ ವಯಸ್ಸಿನಲ್ಲೇ ಅಸುನೀಗಿದ. ಅದು ಸಹಜ ಸಾವಾಗಿತ್ತೋ ಅಥವಾ ಕೊಲೆಯಾಗಿತ್ತೋ ಅಥವಾ ಆತ್ಮಹತ್ಯೆಯಾಗಿತ್ತೋ ಎಂಬುದು ಇವತ್ತಿಗೂ ನಿಗೂಢವಾಗಿದೆ. ಯಾಕೆಂದರೆ ಓಶೋನ ಬದುಕು, ಆತನ ಸುತ್ತ ಇದ್ದ ಜನರ ಕರಾಮತ್ತು, ಆತನ ದೇಹವನ್ನು ತಿಂದುಹಾಕುತ್ತಿದ್ದ ಕಾಯಿಲೆಗಳು ಅಂತಹ ಪ್ರಶ್ನೆಗಳಿಗೆ ಎಡೆಮಾಡಿಕೊಡುತ್ತವೆ...

ಮಹಾರಾಷ್ಟ್ರದ ಪೂಣೆಯಲ್ಲಿರುವ ಓಶೋ ಆಶ್ರಮವೇ ಸ್ವಘೋಷಿತ 'ಭಗವಾನ್' ಶ್ರೀ ರಜನೀಶನಿಗೆ ಮೊದಲು ಖ್ಯಾತಿ ಮತ್ತು ಕುಖ್ಯಾತಿ ಎರಡನ್ನೂ ತಂದುಕೊಟ್ಟಿತು (ಬಾಕ್ಸ್ ನೋಡಿ). ಆದರೆ ಸ್ವಲ್ಪ ದಿನಗಳಲ್ಲೇ ತನ್ನ ಖ್ಯಾತಿಗೆ ಮತ್ತು ದಿನೇದಿನೇ ಬೆಳೆಯುತ್ತಿದ್ದ ಭಕ್ತಾದಿಗಳ ಸಂಖ್ಯೆಗೆ ಪೂಣೆಯ ಆಶ್ರಮ ಚಿಕ್ಕದಾಯಿತು ಎಂದೆನಿಸಿತು ರಜನೀಶನಿಗೆ. ಆಗ ಶುರುವಾಗಿದ್ದು ಆತನ ಅಮೆರಿಕ ಪುರಾಣ. ವಿಪರ್ಯಾಸವೆಂದರೆ ಈ ಪುರಾಣದೊಂದಿಗೆ ರಜನೀಶನ ವಿನಾಶ ಕೂಡ ಪ್ರಾರಂಭವಾಯಿತು.

ಅದು 1980ರ ದಶಕರ ಆರಂಭ. ಆಗ ರಜನೀಶನಿಗೆ ಆಪ್ತ ಕಾರ್ಯದರ್ಶಿ ಮತ್ತು ಪ್ರೇಯಸಿ ಆಗಿದ್ದಾಕೆ ಮಾ ಶೀಲಾ ಎಂಬ ಗುಜರಾತಿ ಮಹಿಳೆ. ಸುಂದರಿಯೂ, ಚಾಣಾಕ್ಷೆಯೂ ಆಗಿದ್ದ ಶೀಲಾ ಈ ಹಿಂದೆ ರಜನೀಶನಿಗೆ ಹತ್ತಿರವಾಗಿದ್ದು ಪೂಣೆ ಆಶ್ರಮವನ್ನು ಸ್ಥಾಪಿಸಿದ್ದ ಮಾ ಲಕ್ಷ್ಮಿ ಎಂಬಾಕೆಯನ್ನು ಒದ್ದೋಡಿಸಿದ್ದಳು.







ಅದೇ ಹೊತ್ತಿಗೆ ಭಾರತ ಸರ್ಕಾರದಿಂದ ತೆರಿಗೆ ಕಟ್ಟುವಂತೆ ಒತ್ತಡ, ಪೂಣೆಯ ಧೂಳಿನಿಂದಾಗಿ ಕೆಡುತ್ತಿದ್ದ ರಜನೀಶನ ಆರೋಗ್ಯ, ಕಿರಿದಾಗುತ್ತಿದ್ದ ಆಶ್ರಮ... ಈ ಎಲ್ಲ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಮಾ ಶೀಲಾ ಮುಂದಾದಳು. ಆಗ ಆಕೆಯ ಕಣ್ಣಿಗೆ ಬಿದ್ದದ್ದು ಅಮೆರಿಕದಲ್ಲಿ ಪಾಳು ಬಿದಿದ್ದ 64,000 ಎಕರೆಯ ಒಂದು ಕೃಷಿ ಕ್ಷೇತ್ರ. ಅದು ಒರೆಗಾನ್ ರಾಜ್ಯದ ಅಂಟಿಲೋಪ್ ಎಂಬ ಪುಟ್ಟ ಊರಿನ ಹತ್ತಿರವೇ ಇತ್ತು, ಅದರ ಹೆಸರು 'ಬಿಗ್ ಮಡ್ಡಿ ರ್‍ಯಾಂಚ್'.

ಅತ್ತ ಅಮೆರಿಕೆಯಲ್ಲಿ ಶೀಲಾ ಆರು ಮಿಲಿಯನ್ ಡಾಲರ್‌ಗಳನ್ನು ತೆತ್ತು ಆ ಇಡೀ ಪ್ರದೇಶವನ್ನು ಖರೀದಿಸುತ್ತಿದ್ದಂತೆ ಇತ್ತ ಭಾರತದಲ್ಲಿ ರಜನೀಶ್ ಅಮೆರಿಕೆಯಲ್ಲಿ ತನ್ನ ಬೆನ್ನುನೋವಿಗೆ ಚಿಕಿತ್ಸೆ ಪಡೆಯಬೇಕೆಂಬ ನೆಪದಲ್ಲಿ ವೀಸಾ ಪಡೆದು ಹಾರಿ ಹೋದ. ಅಮೆರಿಕೆಯ ನೆಲದ ಮೇಲೆ ಹೆಜ್ಜೆ ಇಡುವ ಮುನ್ನ ರಜನೀಶ್ "ಅಮೆರಿಕಾ ಕಾಯುತ್ತಿದ್ದ ವಿಮೋಚಕ ನಾನು" ಎಂದು ಘೋಷಿಸಿದ್ದ. ರಜನೀಶ್ ಸುಳ್ಳು ಹೇಳಿ ಆ ದೇಶವನ್ನು ಪ್ರವೇಶಿಸಿದ್ದರೂ ಆತನ ಆಗಮನದ ಸುದ್ದಿ ಕೇಳುತ್ತಿದ್ದಂತೆ ಆತನ ಸಾವಿರಾರು ಅನುಯಾಯಿಗಳೂ ಹೊಸ ಆಶ್ರಮದಲ್ಲಿ ಜಮೆಯಾಗ ತೊಡಗಿದರು. ಆಗ ರಜನೀಶ್ ಸಾರ್ವಜನಿಕವಾಗಿ ಮೌನವನ್ನು ಆಚರಿಸುತ್ತಿದ್ದರೂ ಆತನ ಭಕ್ತರು ಆತನ ಮುಂದೆ ಸುಮ್ಮನೆ ಕೂರುವುದರಲ್ಲೇ ಧನ್ಯತೆ ಕಾಣುತ್ತಿದ್ದರು.

ಮೊದಮೊದಲು ಕೆಂಪು ಬಣ್ಣದ ಬಟ್ಟೆಗಳನ್ನು ತೊಟ್ಟು ಓಡಾಡುತ್ತಿದ್ದ ರಜನೀಶನ ಭಕ್ತರನ್ನು ಕಂಡು ಆಂಟಿಲೋಪ್ ಪಟ್ಟಣದ ಜನರು ನಕ್ಕರು, ತಲೆ ಕೆಟ್ಟವರು ಎಂದು ಭಾವಿಸಿ ಸುಮ್ಮನಾದರು. ಒಂದು ಅಕ್ಷರವನ್ನೂ ಮಾತನಾಡದ ಮನುಷ್ಯನಲ್ಲಿ ಈ ಬುದ್ಧಿವಂತ ಜನ ಏನು ಕಾಣುತ್ತಿದ್ದಾರೆ ಎಂದು ಅಚ್ಚರಿಗೊಂಡರು. ಜೊತೆಗೆ ಅವರೆಲ್ಲ ಬರಡು ಪ್ರದೇಶದಲ್ಲಿ ಸ್ಥಾಪಿಸುತ್ತಿದ್ದ ಕೃಷಿ, ಹೈನುಗಾರಿಕೆ, ಕಟ್ಟಡ ಇತ್ಯಾದಿಗಳನ್ನು ಕಂಡು ಮೆಚ್ಚಿದರು.

ಆದರೆ ನಿಧಾನವಾಗಿ ರಜನೀಶ್ ಮತ್ತು ಆತನ ಅಭಿಮಾನಿಗಳ ವರ್ತನೆ ಕಂಡು ಸ್ಥಳೀಯ ಜನರು ರೋಸಿ ಹೋಗಲಾರಂಭಿಸಿದರು. ಯಾಕೆಂದರೆ ಪ್ರತಿ ದಿನ ತನ್ನಲ್ಲಿದ್ದ ರೋಲ್ಸ್ ರಾಯ್ಸ್ ಕಾರುಗಳಲ್ಲಿ ಒಂದನ್ನೇರಿ ರಜನೀಶ್ ಹತ್ತಿರದ ಪಟ್ಟಣದಲ್ಲಿ 'ರೋಡ್ ಶೋ' ಕೊಡಲಾರಂಭಿಸಿದ. ಆತ ಹಾಗೆ ಬಂದಾಗಲೆಲ್ಲ ಆತನ ಹಿಂದೆ ಆತನ ಭಕ್ತಾದಿಗಳ ದಂಡೇ ಬರುತ್ತಿತ್ತು, ಸಕ್ಕರೆ ಕಾಯಿಲೆ ಇದ್ದರೂ ರಜನೀಶ್ ಐಸ್‌ಕ್ರೀಮ್ ಪಾರ್ಲರ್‌ಗಳ ಮುಂದೆ ತನ್ನ ಕಾರಿನಲ್ಲಿ ಕುಳಿತು ಐಸ್‌ಕ್ರೀಮ್ ತಿನ್ನುತ್ತಿದ್ದರೆ ಆತನ ಭಕ್ತಾದಿಗಳು ಆತನ ಕಾರಿನ ಸುತ್ತ ಚಪ್ಪಾಳೆ ತಟ್ಟುತ್ತಾ ನಿಲ್ಲುತ್ತಿದ್ದರು. (ಅಂದಹಾಗೆ ರಜನೀಶನಿಗೆ ಭಾರತದಲ್ಲಿ 'ಸೆಕ್ಸ್ ಗುರು' ಎಂಬ ಅಪಖ್ಯಾತಿ ಬಂದಿದ್ದರೆ ಅಮೆರಿಕದಲ್ಲಿ ಆತನ ಮಾಲೀಕತ್ವದಲ್ಲಿದ್ದ ರೋಲ್ಸ್ ರಾಯ್ಸ್ ಕಾರುಗಳಿಂದಾಗಿ ಆತನಿಗೆ 'ಕಾರ್ ಗುರು' ಎಂಬ ಬಿರುದು ಸಿಕ್ಕಿತ್ತು!)



ರಜನೀಶ್ ಮತ್ತು ಆತನ ಅನುಯಾಯಿಗಳ ವರ್ತನೆಯನ್ನೂ ಅದು ಹೇಗೋ ಸ್ಥಳೀಯರು ಸಹಿಸಿಕೊಂಡಿದ್ದರು. ಆದರೆ ಯಾವಾಗ ರಜನೀಶನ ಅನುಯಾಯಿಗಳು ತಮ್ಮ ಆಶ್ರಮಕ್ಕೆ 'ರಜನೀಶಪುರಂ' ಎಂದು ಹೆಸರಿಟ್ಟು ಅದನ್ನು ಒಂದು ಪ್ರತ್ಯೇಕ ನಗರ ಎಂದು ಘೋಷಿಸಿದರೋ ಆಗ ಆಂಟಿಲೋಪ್ ಜನರು ತಿರುಗಿ ಬಿದ್ದರು. ಇದು ಕಾನೂನಿನ ಉಲ್ಲಂಘನೆ ಎಂದೂ, ಅಮೆರಿಕೆಯ ಸಂವಿಧಾನಕ್ಕೆ ವಿರೋಧವಾಗಿ ಇಲ್ಲಿ ಸರ್ಕಾರ ಮತ್ತು ಧರ್ಮ ಸಮ್ಮಿಲಿತಗೊಂಡಿದೆ ಎಂದೂ ತಕರಾರು ತೆಗೆದರು.

ಸ್ಥಳೀಯರ ಬಾಯಿ ಮುಚ್ಚಿಸಲು ಆಗ ಶೀಲಾ ಒಂದು ಪ್ರಚಂಡ ತಂತ್ರ ಹೂಡಿದಳು. ಆಂಟಿಲೋಪ್ ಪಟ್ಟಣ ಅದೆಷ್ಟು ಚಿಕ್ಕದಾಗಿತ್ತೆಂದರೆ ಅಲ್ಲಿದ್ದ ಮತದಾರರ ಸಂಖ್ಯೆ ಕೇವಲ 43. ಅಷ್ಟು ಹೊತ್ತಿಗೆ ಆಶ್ರಮವನ್ನು ಸರ್ವಾಧಿಕಾರಿಯಂತೆ ನಡೆಸಲಾರಂಭಿಸಿದ್ದ ಶೀಲಾಳ ಆದೇಶದಂತೆ ಹಲವಾರು ಅಮೆರಿಕನ್ 'ರಜನೀ'ಗಳು (ಹೀಗೆ ಆತನ ಭಕ್ತಾದಿಗಳು ತಮ್ಮನ್ನು ಕರೆದುಕೊಳ್ಳುತ್ತಿದ್ದರು) ತಮ್ಮ ಹೆಸರುಗಳನ್ನು ಸ್ಥಳೀಯ ಮತದಾರರ ಪಟ್ಟಿಯಲ್ಲಿ ಸೇರಿಸಿದರು. ಪರಿಣಾಮವಾಗಿ ಮುಂದಿನ ಚುನಾವಣೆಯಲ್ಲಿ ಅವರದ್ದೇ ಮೇಲುಗೈಯಾಗಿ ಸ್ಥಳೀಯರು ಸೋಲುಂಡರು.

ಹೀಗೆ ಆಂಟಿಲೋಪ್ ಪಟ್ಟಣದ ಮೇಲೆ ಅಧಿಕಾರವನ್ನು ಸ್ಥಾಪಿಸಿದ ರಜನೀಶ್‌ಗಳು ಅಧಿಕೃತವಾಗಿಯೇ ತಮ್ಮ ಆಶ್ರಮಕ್ಕೆ 'ರಜನೀಶಪುರಂ' ಎಂದು ಹೆಸರಿಟ್ಟರು. ಜೊತೆಗೆ ಅದಕ್ಕೆ ಒಂದು ಪಟ್ಟಣದ ಸ್ಥಾನಮಾನವನ್ನೂ ನೀಡಿದರು. ಮಾತ್ರವಲ್ಲ, ಕೃಷಿ ಪ್ರದೇಶವಾಗಿದ್ದ ತಮ್ಮ ಆಶ್ರಮದಲ್ಲಿ ಕಟ್ಟಡಗಳನ್ನು ಸ್ಥಾಪಿಸಲು ತಮಗೆ ತಾವೇ ಅನುಮತಿಗಳನ್ನು ಕೊಟ್ಟುಕೊಳ್ಳಲಾರಂಭಿಸಿದರು. ಇದನ್ನೆಲ್ಲ ಕಂಡು ಸ್ಥಳೀಯರು ದಂಗು ಬಡಿದುಹೋದರು.

ಆಂಟಿಲೋಪ್‌ನಲ್ಲಿ ಹೀಗೆ ಸ್ಥಳೀಯವಾಗಿ ಜಯ ಕಂಡ ಶೀಲಾಳ ದುರಾಶೆ ಹೆಚ್ಚಾಯಿತು. ಆಂಟಿಲೋಪ್ ಪಟ್ಟಣವಿದ್ದ ವಾಕೋ ಜಿಲ್ಲೆಯ ಮೇಲೆಯೇ ಹಿಡಿತ ಸಾಧಿಸಲು ಮುಂದಾದಳು. ಅದಕ್ಕೂ ಆಕೆ ಮತ್ತೊಂದು ತಂತ್ರವನ್ನು ಹೆಣೆದಳು. ತಮ್ಮ ಪರ ಮತ ಚಲಾಯಿಸುವವರ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳಲು ಅಮೆರಿಕದ ನಿರಾಶ್ರಿತರಿಗೆ ಮುಕ್ತ ಆಹ್ವಾನವನ್ನು ನೀಡಿದಳು. 'ನಮ್ಮ ಆಶ್ರಮಕ್ಕೆ ಬರುವವರಿಗೆಲ್ಲ ಬಿಟ್ಟಿಯಾಗಿ ವಸತಿ ಸೌಕರ್ಯ ಮತ್ತು

ಶೀಲಾಳ ಕಥೆ...

ಸುಮಾರು ಎರಡು ದಶಕಗಳ ಹಿಂದೆ ಓಶೋ ಅವರ ಆಪ್ತ ಕಾರ್ಯದರ್ಶಿಯೂ, ಪ್ರೇಮಿಯೂ ಆಗಿದ್ದ ಮಾ ಆನಂದ ಶೀಲಾ ಅಲಿಯಾಸ್ ಶೀಲಾ ಬ್ರಿನ್‌ಸ್ಟೈಲ್ ಅವರ ಆತ್ಮಕಥನವಾದ 'ಡೋಂಟ್ ಕಿಲ್ ಹಿಮ್ - ದಿ ಸ್ಟೋರಿ ಆಫ್ ಮೈ ಲೈಫ್ ವಿತ್ ಭಗವಾನ್ ರಜನೀಶ್' ಈಗ ಭಾರತದಲ್ಲಿ ಬಿಡುಗಡೆಗೊಂಡಿದೆ.

ಅವತ್ತು ಶೀಲಾ ಓಶೋ ಜೊತೆಗೆ ಇದ್ದಾಗ ಅಪಾರ ಜಗಳಗಂಟಿ ಆಗಿದ್ದರು. ಬಾಯಿಗೆ ಬಂದದ್ದನ್ನು ಹೇಳಿ ಮಾಧ್ಯಮಗಳಲ್ಲಿ ಮಿಂಚುತ್ತಿದ್ದರು. ಆದರೀಗ ಅವರು ತುಂಬಾ ಬದಲಾಗಿದ್ದಾರೆ.

ಶೀಲಾಗೆ ಈಗ 63 ವರ್ಷ ವಯಸ್ಸು. ತಲೆಗೂದಲು ಬಿಳಿಯಾಗಿದೆ. ಹಿಂದೆ ತುಂಬಾ ಸುಂದರವಾಗಿದ್ದ ಮುಖ ಈಗ ವಯಸ್ಸಿನಿಂದಾಗಿ ಸ್ವಲ್ಪ ಊದಿಕೊಂಡಿದೆ. ಮಾತು ಕಡಿಮೆಯಾಗಿದೆ. ಹಿಂದಿದ್ದ ಸಿಟ್ಟಿನ ಬದಲಾಗಿ ಈಗ ಅವರ ಮುಖದಲ್ಲಿ ಮಂದಹಾಸ ಇದೆ. ಈಗ ಆಕೆ ಸ್ವಿಟ್ಜರ್‌ಲ್ಯಾಂಡಿನಲ್ಲಿ ಅನಾಥ ವೃದ್ಧರನ್ನು ನೋಡಿಕೊಂಡು ತಮ್ಮ ಜೀವನ ಸಾಗಿಸುತ್ತಿದ್ದಾರೆ.

ಇವತ್ತಿಗೂ ರಜನೀಶರ ಬೋಧನೆಗಳನ್ನು ಆರಾಧಿಸುವ ಶೀಲಾ ಈಗಲೂ ಆತನ ಬಗ್ಗೆ ಮಾತನಾಡುವಾಗ 'ಓಶೋ' ಎನ್ನುವ ಬದಲಾಗಿ 'ಭಗವಾನ್' ಎಂದೇ ಕರೆಯುತ್ತಾರೆ. "ಈಗ ನನ್ನ ತಂದೆತಾಯಿಯಾಗಲಿ, ಗಂಡನಾಗಲಿ ಇಲ್ಲ, ಅವರೆಲ್ಲ ಮಡಿದಿದ್ದಾರೆ. ಭಗವಾನ್ ಕೂಡ. ಈಗ ಬದುಕುವ ಉತ್ಸಾಹವೇ ನನಗೆ ಇಲ್ಲದಂತಾಗಿದೆ. ಆದರೆ ಈಗಲೂ ಭಗವಾನ್ ನನ್ನ ಹೃದಯದಲ್ಲಿ ಜೀವಂತವಾಗಿದ್ದಾರೆ. ಅವರು ಸಿದ್ಧಾಂತವನ್ನು ನನ್ನ ಜೀವನದಲ್ಲಿ ಅಳವಡಿಸಿಕೊಂಡು ಬದುಕುತ್ತಿದ್ದೇನೆ" ಎನ್ನುತ್ತಾರೆ ಶೀಲಾ.

ಗುಜರಾತಿ ಮೂಲದ ತಂದೆತಾಯಿಗೆ ಜನಿಸಿದ ಶೀಲಾ ಬೆಳೆದದ್ದು ಮುಂಬೈಯಲ್ಲಿ. ಆಕೆ ಚಿಕ್ಕವಳಾಗಿದ್ದಾಗಲೇ ರಜನೀಶರನ್ನು ಭೇಟಿಯಾಗಿ ಅವರಿಗೆ ಮಾರುಹೋಗಿದ್ದಳು. ರಜನೀಶರೊಂದಿಗಿನ ತಮ್ಮ ಪ್ರಥಮ ಭೇಟಿ ಬಗ್ಗೆ ಶೀಲಾ ಹೀಗೆ ಬರೆದಿದ್ದಾರೆ:

"ನಾನು ನನ್ನ ತಂದೆಯೊಂದಿಗೆ ಭಗವಾನರನ್ನು ಭೇಟಿ ಆಗಲು ಹೋಗಿದ್ದೆ. ಅವರು ಒಂದು ಕೊಠಡಿಯಲ್ಲಿ ಕುರ್ಚಿಯ ಮೇಲೆ ಚಕ್ಕಂಬಕ್ಕಳ ಹಾಕಿಕೊಂಡು ಕೂತಿದ್ದರು. ಪಕ್ಕದ ಟೇಬಲ್ ಮೇಲೆ ಹಲವಾರು ಪುಸ್ತಕಗಳಿದ್ದವು. ನಾನು ಅವರಿದ್ದ ಕೊಠಡಿಯನ್ನು ಪ್ರವೇಶಿಸಿದಂತೆ ನನ್ನತ್ತ ಸುಂದರವಾದ ಮುಗುಳ್ನಗೆಯನ್ನು ಬೀರಿದ ಭಗವಾನ್ ತಮ್ಮ ತೋಳುಗಳನ್ನು ತೆರೆದು ನನ್ನನ್ನು ಆಹ್ವಾನಿಸಿದರು. ನಾನು ಸಂತೋಷದಿಂದ ಅವರನ್ನು ಅಪ್ಪಿಕೊಂಡೆ. ನಾನು ಅವರ ತೊಡೆಯಲ್ಲಿ ನನ್ನ ಮುಖವನ್ನಿಟ್ಟೆ. ಭಗವಾನ್ ನನ್ನ ಅಪ್ಪನ ಜೊತೆ ಮಾತನಾಡಲಾರಂಭಿಸಿದರು. ನಾನು ಅವರ ವ್ಯಕ್ತಿತ್ವದಲ್ಲಿ ಮುಳುಗಿಹೋಗಿದ್ದೆ. ಅವರು ಮತ್ತು ಅವರ ಪಾದಗಳೇ ನನ್ನ ಬದುಕಿನ ಕೊನೆಯ ನಿಲುಗಡೆ ಎನಿಸಿತು. ಅವರಿಲ್ಲದೆ ನನ್ನ ಬದುಕೇ ಇಲ್ಲ ಎನಿಸಿತು.



ಸ್ವಲ್ಪ ಹೊತ್ತಿನ ನಂತರ "ಶೀಲಾ, ನೀನು ನಾಳೆ ಮಧ್ಯಾಹ್ನ 2:30 ಗಂಟೆಗೆ ಬಾ" ಎಂದರು ಭಗವಾನ್. ಅದು ನನ್ನ ಜೀವನದ ಅತಿ ದೀರ್ಘ ದಿನವಾಗಿತ್ತು. ಅವರನ್ನು ಮತ್ತೆ ನೋಡಲು ಕಾತುರಳಾಗಿದ್ದೆ. ಮಾರನೆ ದಿನ ಅವರನ್ನು ಭೇಟಿ ಆದಾಗ ಅವರು ಹಿಂದಿನ ದಿನಕ್ಕಿಂತ ಸುಂದರವಾಗಿ ಕಂಡರು. 'ನನಗೆ ಊಟ, ನಿದ್ದೆ ಯಾವುದೂ ಬೇಡವಾಗಿದೆ. ನಿಮ್ಮೊಂದಿಗೆ ಇರಬೇಕೆನಿಸುತ್ತಿದೆ' ಎಂದು ನಾನು ಅವರಿಗೆ ಹೇಳಿದಾಗ ಭಗವಾನ್ 'ಶೀಲಾ, ಅದು ಸಹಜ. ಯಾಕೆಂದರೆ ನೀನು ನನ್ನನ್ನು ತುಂಬಾ ಪ್ರೀತಿಸುತ್ತಿದ್ದೀಯ ಮತ್ತು ನಾನೂ ನಿನ್ನನ್ನು ಪ್ರೀತಿಸುತ್ತೇನೆ' ಎಂದರು."

... ಹೀಗೆ ರಜನೀಶರ ಅನುಯಾಯಿ, ಪ್ರೇಯಸಿ ಮತ್ತು ಆಪ್ತ ಸಹಾಯಕಿಯಾದರು ಶೀಲಾ. ಅವತ್ತು ತಮ್ಮ ಆತ್ಮಕಥನದಲ್ಲಿ ಪೂಣೆಯಲ್ಲಿರುವ ರಜನೀಶರ ಆಶ್ರಮದಲ್ಲಿನ ವ್ಯವಸ್ಥೆ ಹೇಗಿತ್ತು ಎಂದೇ ವಿವರಿಸಿದ್ದಾರೆ. ಅದು ಹೀಗಿದೆ:

"ಭಗವಾನ್ ತುಂಬಾ ಚಾಣಾಕ್ಷ ಬಿಸಿನೆಸ್ ಮ್ಯಾನ್ ಆಗಿದ್ದರು. ಅವರಿಗೆ ತಾವು ಮಾರಾಟಮಾಡುತ್ತಿದ್ದ ವಸ್ತುಗಳ ಬೆಲೆ ಚೆನ್ನಾಗಿ ಗೊತ್ತಿತ್ತು. ಆರಂಭದಲ್ಲಿ ತಮ್ಮ ಪ್ರವಚನಗಳಿಗೆ ಶುಲ್ಕವನ್ನು ವಿಧಿಸಿದರು. ಆನಂತರ ವಿವಿಧ ಗುಂಪು ಚಿಕಿತ್ಸೆಗಳಿಗೆ ವಿವಿಧ ರೀತಿಯ ಶುಲ್ಕಗಳನ್ನು ಪಡೆಯಲಾರಂಭಿಸಿದರು. ಹೋಟೆಲ್‌ಗಳಲ್ಲಿ ಮೆನು ಇರುತ್ತದಲ್ಲ ಹಾಗೆಯೇ ವಿವಿಧ ಚಿಕಿತ್ಸಾ ಮಾದರಿಗಳಿದ್ದವು. ಯಾರಿಗೆ ಯಾವುದು ಬೇಕೇ ಅದನ್ನು ಆಯ್ದುಕೊಳ್ಳಬಹುದಿತ್ತು. ಆಶ್ರಮದಲ್ಲಿ ಇತರೆ ವ್ಯವಹಾರಗಳೂ ಪ್ರಾರಂಭವಾದವು. ಹಣದ ಹೊಳೆಯೇ ಹರಿದು ಬರಲಾರಂಭಿಸಿತು.

ವಿವಿಧ ತರಹದ ಸಮಸ್ಯೆಗಳಿಗೆ ಲೈಂಗಿಕತೆಯೇ ಕಾರಣ ಎನ್ನಲಾಗುತ್ತಿದ್ದರಿಂದ ಚಿಕಿತ್ಸಾ ಕ್ರಮಗಳಲ್ಲಿ ಲೈಂಗಿಕತೆಯೇ ಮುಖವಾಗಿತ್ತು. ಆಶ್ರಮದಲ್ಲಿ ಮುಕ್ತ ಲೈಂಗಿಕ ವಾತಾವರಣವಿತ್ತು. ಅದನ್ನು ಕುರಿತು ಯಾರೂ ನೈತಿಕತೆಯನ್ನು ಬೋಧಿಸುತ್ತಿರಲಿಲ್ಲ. ಭಗವಾನ್ ಕೂಡ ಇದರ ಬಗ್ಗೆ ಯಾರೂ ಅಸೂಯೆ ಇಟ್ಟುಕೊಳ್ಳದೆ ಮುಕ್ತಮನಸ್ಸಿನವರಾಗಿರಬೇಕು ಎನ್ನುತ್ತಿದ್ದರು.

ಇಂತಹ ಮುಕ್ತ ಲೈಂಗಿಕತೆಯಿಂದಾಗಿ ಆಶ್ರಮದಲ್ಲಿ ಲೈಂಗಿಕ ರೋಗಗಳು ತಾಂಡವಾಡಲಾರಂಭಿಸಿತು..."

...ರ್ ಮತ್ತು ವಾಚ್‌ಗಳ ವ್ಯಾಮೋಹ

...ನೀಶನಿಗೆ ಐಷಾರಾಮಿ ಕಾರ್ ಮತ್ತು ವಾಚ್‌ಗಳ ...ಸವಿತ್ತು. ಅವನ್ನು ಆತ ತನ್ನ ಭಕ್ತಾದಿಗಳಿಂದ ...ವಿನ್ನ ರೀತಿ ಕುತೂಹಲಕಾರಿಯಾಗಿದೆ.



ಶೀಲಾ ಹೇಳುವ ಪ್ರಕಾರ:

...ಗವಾನ್ ಬಳಿ 93 ರೋಲ್ಸ್ ರಾಯ್ಸ್ ...ದ್ದರೂ ಒಮ್ಮೆ 'ಇನ್ನೊಂದು ತಿಂಗಳಲ್ಲಿ ನನಗೆ ...0 ರೋಲ್ಸ್ ರಾಯ್ಸ್ ಕಾರುಗಳನ್ನು ಖರೀದಿಸು' ...ಆದೇಶ ನೀಡಿದರು. ಆಶ್ರಮದಲ್ಲಿ ಅಷ್ಟೊಂದು ...ಎಂದು ನಾನು ತಕರಾರು ಎತ್ತಿದಾಗ ಭಗವಾನರಿಗೆ ...ಂತು. ಆದರೆ ಮಾರನೆ ದಿನ ಅವರು ನನಗೊಂದು ...ನ್ನ ಕೊಟ್ಟರು. ಅದನ್ನು ನೋಡುತ್ತಿದ್ದಂತೆ ನನ್ನ ಹೃದಯ ಧಸಕ್ಕೆಂದಿತು. ಯಾಕೆಂದರೆ ಆ ಪಟ್ಟಿಯಲ್ಲಿದ್ದವರೆಲ್ಲಾ ...ತ ಅನುಯಾಯಿಗಳು ಮತ್ತು ಅವರಿಗೆಲ್ಲ ಮೋಕ್ಷ ಸಿಕ್ಕಿದೆ ಎಂದು ಭಗವಾನ್ ಘೋಷಿಸಿದರು. ಹೀಗೆ ...ಗಿ ಭಗವಾನರಿಂದ ಮೋಕ್ಷ ಪಡೆದ ಅನುಯಾಯಿಗಳು ಆಶ್ರಮಕ್ಕೆ ದೊಡ್ಡ ಪ್ರಮಾಣದಲ್ಲಿ ದೇಣಿಗೆಯನ್ನು ...ದ್ದರು. ಆ ಹಣದಲ್ಲಿ ತಮಗೆ ಕಾರ್ ಮತ್ತು ಲಕ್ಷಾಂತರ ರೂಪಾಯಿ ಬೆಲೆಬಾಳುವ ವಾಚ್‌ಗಳನ್ನು ...ಕೆಂದು ಭಗವಾನ್ ಹೇಳುತ್ತಿದ್ದರು."

...ಗುತ್ತದೆ' ಎಂದು ಘೋಷಿಸಿದಳು. ನೋಡು ...ದ್ದಂತೆ ಅಮೆರಿಕದ ವಿವಿಧ ಭಾಗಗಳಿಂದ ...ಸಂಖ್ಯೆಯಲ್ಲಿ ಜನ ಬರಲಾರಂಭಿಸಿದರು.

...ಳ ಈ ಯೋಜನೆ ಹಿಂದಿನ ದುರುದ್ದೇಶ ಅರಿತ ...ನರು ಆಕೆಯನ್ನು ತರಾಟೆಗೆ ತೆಗೆದುಕೊಂಡರು. ...ಲಾ ಮಾತ್ರ "ಇದು ಬಡ ಜನರ ಬಗ್ಗೆ ನಮಗಿರುವ ...ವೇ ಹೊರತು ಬೇರೇನಲ್ಲ" ಎಂದು ತನ್ನ ...ರಿಗೆ ತಿರುಗೇಟು ನೀಡಿದಳು.

...ವಾಸ್ಕೋ ಜಿಲ್ಲೆಯಲ್ಲಿ ಒಟ್ಟು ಮತದಾರರ ಸಂಖ್ಯೆ ... ಆದರೆ ಶೀಲಾಳ ಕರಾಮತ್ತಿನಿಂದಾಗಿ ಆಗ ...ಪುರಂ' ಎಂಬ ಸ್ವಘೋಷಿತ ಪಟ್ಟಣದಲ್ಲಿದ್ದ ...ಡಿದ್ದ ಜನರ ಸಂಖ್ಯೆ 7,000. ಇದು ಹೀಗೆ ...ರೆದರೆ ಅನಾಹುತ ಕಟ್ಟಿಟ್ಟಬುತ್ತಿ ಎಂದು ರಾಜ್ಯ ... ಅರ್ಥವಾಯಿತು. ಆಗ ರಾಜ್ಯ ಕಾರ್ಯದರ್ಶಿ ...ಂದು ಮತದಾರರ ಪಟ್ಟಿಯನ್ನು ಪರಿಷ್ಕರಿಸಲು ...ವರು. ಆಗ 'ರಜನೀಶಪುರಂ'ನಲ್ಲಿ ವಾಸಿಸುತ್ತಾ ...ಸರನ್ನು ನೋಂದಾಯಿಸಿದ್ದ ಬಹಳಷ್ಟು ಜನರನ್ನು ...ರ ಪಟ್ಟಿಯಿಂದ ಕೈಬಿಡಲಾಯಿತು.

ಶೀಲಾ ಏನು ಮಾಡಿದಳು ಗೊತ್ತಾ? ತನ್ನ ...'ವನ್ನೆಲ್ಲ ಬದಿಗಿಟ್ಟು ಅನರ್ಹಗೊಂಡ ಸಾವಿರಾರು ಜನರನ್ನು ಆಶ್ರಮದಿಂದ ಒದ್ದೋಡಿಸಿದಳು. ...ಸುತ್ತಮುತ್ತ ಇದ್ದ ನಗರಗಳ ಬೀದಿಪಾಲಾದರು. ...ಸ್ಥಳೀಯ ಪಟ್ಟಣಗಳ ಆಡಳಿತ ವ್ಯವಸ್ಥೆ ಮತ್ತು ಮುಕ್ತಿ ಪಡೆ ಒಂದು ಲಕ್ಷ ಡಾಲರ್‌ಗಳ ವೆಚ್ಚದಲ್ಲಿ ಅವರನ್ನೆಲ್ಲ ತಮ್ಮತಮ್ಮ ಊರುಗಳಿಗೆ ಸಾಗಿಸಬೇಕಾಯಿತು.

ಮೊದಲ ಬಾರಿಗೆ ಶೀಲಾ ಮುಖಭಂಗ ಅನುಭವಿಸಿದಳು. ಆದರೂ ಆಕೆ ತೊಟ್ಟ ಹಟವನ್ನು ಸುಲಭವಾಗಿ ಕೈಬಿಡುವಂತಹ ವ್ಯಕ್ತಿ ಆಗಿರಲಿಲ್ಲ. ಶತಾಯಗತಾಯ ಜಿಲ್ಲೆಯ ಮೇಲೆ ಹಿಡಿತ ಸಾಧಿಸಬೇಕೆಂದು ಹೊರಟಿದ್ದ ಶೀಲಾ ಇನ್ನೊಂದು ಅನಾಹುತಕ್ಕೆ ಕೈಹಾಕಿದಳು. ಆಶ್ರಮದಲ್ಲೇ ಒಂದು ಲ್ಯಾಬರೇಟರಿಯನ್ನು ಸ್ಥಾಪಿಸಿದ್ದ ಆಕೆ ಅಲ್ಲಿ ರೋಗಗಳನ್ನು ಉಂಟುಮಾಡುವ ಸಾಲ್ಮನೆಲ ಎಂಬ ಬ್ಯಾಕ್ಟೀರಿಯಾವನ್ನು ತಯಾರಿಸಿದಳು. ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಯುವ ದಿನ ಆಕೆ ಹತ್ತಾರು ಹೋಟೆಲ್‌ಗಳಿಗೆ ಭೇಟಿ ನೀಡಿ ಅಲ್ಲಿದ್ದ ಕಾಯಿಪಲ್ಯೆಗಳಿಗೆ ಅದನ್ನು ಸುರಿದಳು. ಪರಿಣಾಮವಾಗಿ ಬರೋಬ್ಬರಿ 750 ಜನರಿಗೆ ಕಾಯಿಲೆಯಾಗಿ ಆಸ್ಪತ್ರೆ ಸೇರುವಂತಾಯಿತು. ಇದು ಅಮೆರಿಕದ ಇತಿಹಾಸದಲ್ಲೇ ಪ್ರಪ್ರಥಮ 'ಬಯೋ ಟೆರರಿಸಂ' ಪ್ರಕರಣವಾಯಿತು.

ಚುನಾವಣೆಯಲ್ಲಾದ ಮುಖಭಂಗ, ಬಯಲಾದ ಢೋಂಗಿತನ, ಆಶ್ರಮದ ಸುತ್ತ ತಲೆದೋರಿದ್ದ ವಿವಾದಗಳಿಂದಾಗಿ ಬಹಳಷ್ಟು ಜನ ರಜನೀಶಪುರಂಅನ್ನು ತೊರೆದಿದ್ದರಲ್ಲದೆ, ಆಶ್ರಮಕ್ಕೆ ಬರುತ್ತಿದ್ದ ಆದಾಯವೂ ಕುಸಿಯಲಾರಂಭಿಸಿತ್ತು. ಜೊತೆಜೊತೆಗೆ ಶೀಲಾಳ ಸರ್ವಾಧಿಕಾರಿ ಧೋರಣೆ ವಿರುದ್ಧ ಆಶ್ರಮದಲ್ಲಿ ಮನಸ್ತಾಪ ಹೆಚ್ಚಾಗುತ್ತಿತ್ತು. ಸ್ವತಃ ರಜನೀಶ್ ಕೂಡ ಆಶ್ರಮದ ಮೇಲಿನ ಶೀಲಾಳ ಹಿಡಿತವನ್ನು ಸಡಲಿಸಲು ಮುಂದಾದರು.

ಈ ಹಿಂದೆ ತಾನೇ ಮಾ ಲಕ್ಷ್ಮಿಯನ್ನು ರಜನೀಶರ ಪೂಣೆ ಆಶ್ರಮದಿಂದ ಒದ್ದೋಡಿಸಿದ್ದಂತೆ ತಾನೂ ಸದ್ಯದಲ್ಲೆ ಉಚ್ಚಾಟಿತಳಾಗುತ್ತೇನೆ ಎಂದರಿತ ಶೀಲಾ 1985ರ ಒಂದು ದಿನ ತನ್ನ ಹಲವು ಸಂಗಡಿಗರೊಂದಿಗೆ ಅಮೆರಿಕೆಯ ಆಶ್ರಮದಿಂದ ಓಡಿಹೋದಳು.

ಆದರೆ ರಜನೀಶ್ ಸುಮ್ಮನೆ ಕೂರಲಿಲ್ಲ. ಆಕೆ ಆಶ್ರಮದಿಂದ 55 ಮಿಲಿಯನ್ ಡಾಲರ್‌ಗಳನ್ನು ಕದ್ದಿದ್ದಾಳೆಂದೂ, ಹಲವರ ಹತ್ಯೆಗಳಿಗೆ ಯತ್ನಿಸಿದ್ದಾಳೆಂದು ಆರೋಪಿಸಿದರು. ಶೀಲಾ ಕೂಡ ಸುಮ್ಮನಿರಲಿಲ್ಲ. ರಜನೀಶ್ ಹೇಗೆ ವೀಸಾ ನಿಯಮಗಳನ್ನು ಉಲ್ಲಂಘಿಸಿದ್ದಾರೆಂದೂ, ಅಮೆರಿಕ ಸರ್ಕಾರಕ್ಕೆ ತಮ್ಮ ಬಗ್ಗೆ ತಪ್ಪು ಮಾಹಿತಿ ನೀಡಿದ್ದಾರೆಂದೂ ದೂರಿದಳು.

ಶೀಲಾಳನ್ನು ಬಂಧಿಸಿ, ವಿಚಾರಣೆ ನಡೆಸಲಾಯಿತು. ಆಕೆ ತಪ್ಪೊಪ್ಪಿಕೊಂಡಿದ್ದರಿಂದ ಆಕೆಗೆ ನಾಲ್ಕು ಲಕ್ಷ ಡಾಲರ್‌ಗಳ ದಂಡವನ್ನು ಮತ್ತು ನಾಲ್ಕೂವರೆ ವರ್ಷ ಜೈಲುವಾಸವನ್ನೂ ವಿಧಿಸಲಾಯಿತು. ಆಕೆ ಎರಡೂವರೆ ವರ್ಷ ಜೈಲಿನಲ್ಲಿ ಕಳೆದನಂತರ ಸಣ್ಣ ದೈರಿ ಬಿಡುಗಡೆಗೊಳಿಸಲಾಯಿತು. ಆನಂತರ ಆಕೆ ಯೂರೋಪಿನ ವಿವಿಧ ದೇಶಗಳಲ್ಲಿ ಚಿಕ್ಕಪುಟ್ಟ ಕೆಲಸಗಳನ್ನು ಮಾಡುತ್ತ ಜೀವನ ಸಾಗಿಸಲಾರಂಭಿಸಿದಳು. ಆದರೆ ಅಮೆರಿಕೆಯ ಸರ್ಕಾರ ತನ್ನನ್ನು ಮತ್ತೆ ಬಂಧಿಸುವ ಸಾಧ್ಯತೆಗಳಿವೆ ಎಂದೆನಿಸಿದಾಗ ತನ್ನ ರಕ್ಷಣೆಗೆ ಸ್ವಿಟ್ಜರ್‌ಲ್ಯಾಂಡ್‌ಗೆ ಹೋಗಿ ನೆಲೆಸಿದಳು.

ಇತ್ತ ರಜನೀಶ್ ಪರಿಸ್ಥಿತಿಯೂ ಭಿನ್ನವಾಗಿರಲಿಲ್ಲ. ಆತ ಅಕ್ರಮವಾಗಿ ಅಮೆರಿಕವನ್ನು ಪ್ರವೇಶಿಸಿದ್ದು ಮತ್ತು ಅಲ್ಲಿ ನೆಲೆಸಿದ್ದು ಸಾಬೀತಾಯಿತು. ಆಗ ಆತ ಖಾಸಗಿ ವಿಮಾನವೊಂದನ್ನು ಏರಿ ಬರ್ಮುಡಾಗೆ ಪರಾರಿಯಾಗಲು ಯತ್ನಿಸಿದ. ಇದರ ಸುಳಿವು ಪಡೆದ ಅಮೆರಿಕದ ಅಧಿಕಾರಿಗಳು ಆತನನ್ನು ನಾರ್ತ್ ಕ್ಯಾರೋಲಿನ ಎಂಬ ನಗರದಲ್ಲಿ ತಡೆಹಿಡಿದರು. ಸಾಮಾನ್ಯ ಕೈದಿಯಂತೆ ಆತನ ಕೈಗಳಿಗೆ ಕೋಳಗಳನ್ನು ತೊಡಿಸಿ ಬಂಧಿಸಿದರು. ಕೊನೆಗೆ ಆತನಿಗೂ ದಂಡವಿಧಿಸಿ ಹತ್ತು ವರ್ಷಗಳ ಕಾಲ ಆತ ಅಮೆರಿಕವನ್ನು ಪ್ರವೇಶಿಸುವುದಿಲ್ಲ ಎಂದು ಮಾತು ಕೊಟ್ಟ ನಂತರ ಬಿಡುಗಡೆಮಾಡಿದರು.

ಅಮೆರಿಕೆಯಿಂದ ಹೀಗೆ ಉಚ್ಚಾಟಿತನಾಗಿ ರಜನೀಶ್ ಭಾರತಕ್ಕೆ ಹಿಂದಿರುಗಿದರೂ ಆತ ತನ್ನ ಹಿಂದಿನ ತಾರಾಮೌಲ್ಯವನ್ನು ಕಳೆದುಕೊಂಡಿದ್ದ ಹಲವಾರು ರೋಗಗಳು ಉಲ್ಬಣಿಸಿದ್ದವು. ಅಭಿಮಾನಿಗಳ ಸಂಖ್ಯೆ ಕುಸಿದಿತ್ತು. ವಿವಾದಗಳು ಮೈಗೆ ಮೆತ್ತಿಕೊಂಡಿದ್ದವು...

ಬೃಹತ್ ಆಕಾಂಕ್ಷೆಗಳನ್ನು ಹೊತ್ತು ಅಮೆರಿಕದಲ್ಲಿನ ಮಡ್ಡಿ ರ್‍ಯಾಂಚ್ ಅನ್ನು ಕೊಂಡುಕೊಂಡಿದ್ದ ರಜನೀಶನ ಹೆಸರಿಗೆ ಮಡ್ - ಅಂದರೆ ಮಣ್ಣು - ಮೆತ್ತಿಕೊಂಡಿದ್ದು ಹೀಗೆ...

● ಸಾವಂತ್ರಿ

ರಜನೀಶರ 'ವಿಶ್ವ ಪರ್ಯಟನೆ'

ಓಶೋ ಅಲಿಯಾಸ್ ಭಗವಾನ್ ಶ್ರೀ ರಜನೀಶ್ ಅಲಿಯಾಸ್ ಚಂದ್ರ ಮೋಹನ್ ಹುಟ್ಟಿದ್ದು ಮಧ್ಯಪ್ರದೇಶದ ಒಂದು ಕುಗ್ರಾಮವಾದ ಕುಚವಾಡ ಎಂಬಲ್ಲಿ. ಕೆಲಕಾಲ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರಾಗಿದ್ದ ಓಶೋ 1970ರಲ್ಲಿ ಮುಂಬೈಯಲ್ಲಿ ನೆಲೆಸಿದರು. ಅಲ್ಲಿಂದ ಪ್ರಾರಂಭವಾದ ಅವರ ಆಧ್ಯಾತ್ಮಿಕ ಪಯಣ ಅವರಿಗೆ ಖ್ಯಾತಿ ಮತ್ತು ಕುಖ್ಯಾತಿ ಎರಡನ್ನೂ ತಂದಿತು.

1974ರಲ್ಲಿ ಅವರ ಆಪ್ತ ಸಹಾಯಕಿ ಆಗಿದ್ದ ಮಾ ಲಕ್ಷ್ಮಿ ಎಂಬಾಕೆ ಪೂಣೆಯಲ್ಲಿ ಒಂದಿಷ್ಟು ಭೂಮಿಯನ್ನು ಕೊಂಡುಕೊಂಡರು. ಅದೇ ರಜನೀಶರ ಪ್ರಥಮ ಆಶ್ರಮವಾಯಿತು. ಆ ಆಶ್ರಮದಲ್ಲಿ ರಜನೀಶರು ಪ್ರತಿದಿನ ಪ್ರವಚನಗಳನ್ನು ಹಿಂದಿ ಅಥವಾ ಇಂಗ್ಲಿಷ್‌ನಲ್ಲಿ ನೀಡುತ್ತಿದ್ದರು. ವಿವಿಧ ಧರ್ಮಗಳ ಬಗ್ಗೆ ಆಳವಾದ ಜ್ಞಾನವನ್ನು ಹೊಂದಿದ್ದ ರಜನೀಶರ ಪ್ರವಚನಗಳು ಜನಪ್ರಿಯವಾಗತೊಡಗಿದವು. ಅದರಲ್ಲೂ ವಿದೇಶಿಯರನ್ನು ಅಪಾರ ಸಂಖ್ಯೆಯಲ್ಲಿ ಆಕರ್ಷಿಸಲಾರಂಭಿಸಿತು.



ತಮ್ಮ ಭಾಷಣಗಳಲ್ಲಿ ರಜನೀಶರು ಗಾಂಧಿ ಮತ್ತು ಸೋಷಿಯಲಿಸ್ಟರನ್ನು ಗೇಲಿ ಮಾಡುತ್ತಿದ್ದರು. "ಅವರೆಲ್ಲ ಬಡತನವನ್ನು ವೈಭವೀಕರಿಸುತ್ತಾರೆ. ಬಂಡವಾಳಶಾಹಿ ಸಿದ್ಧಾಂತ ಮತ್ತು ಸುಖೀಜೀವನ ನಡೆಸುವ ಪ್ರವೃತ್ತಿ ಭಾರತಕ್ಕೆ ಬೇಕಿದೆ. ದೇವರು ಎಲ್ಲೆಲ್ಲೂ ಇದ್ದಾನೆ, ನಿಮ್ಮ ಜೀವದಲ್ಲಿ ಕೂಡ" ಎನ್ನುತ್ತಿದ್ದರು. ಶ್ರೀಮಂತ ವಿದೇಶಿಯರು ತಮ್ಮ ಶ್ರೀಮಂತಿಕೆಯ ಬಗ್ಗೆ ಯಾವುದೇ ಮುಜುಗರ ಪಡಬೇಕಿಲ್ಲ ಎಂದು ಹೇಳುತ್ತಿದ್ದರು. ಸಹಜವಾಗಿಯೇ ಇದು ಅವರಿಗೆ ಇಷ್ಟವಾಗುತ್ತಿತ್ತು.

ಆಶ್ರಮದ ನಿಯಮದಂತೆ ವಿದೇಶಿ 'ಸನ್ಯಾಸಿಗಳು' ಕೆಂಪು ಬಟ್ಟೆಯನ್ನು ತೊಡಲಾರಂಭಿಸಿದರು. ಆದರೆ ಅವರು ಅಂತಹ ಅರೆಬರೆ ಬಟ್ಟೆ ತೊಟ್ಟು ಪೂಣೆಯಲ್ಲಿ ಸುತ್ತಾಡಲಾರಂಭಿಸಿದಾಗ ಸ್ಥಳೀಯ ಜನರಲ್ಲಿ ಅಸಹ್ಯವನ್ನು ಹುಟ್ಟಿಸಿದರು. ಅದರಲ್ಲೂ ಆಶ್ರಮದಲ್ಲಿ ಮುಕ್ತ ಲೈಂಗಿಕತೆ ರಾರಾಜಿಸುತ್ತಿದೆ ಎಂದು ಗೊತ್ತಾದಾಗ ಆಶ್ರಮವನ್ನು ವಿರೋಧಿಸಲಾರಂಭಿಸಿದರು.

ಅದೇ ಹೊತ್ತಿಗೆ ರಜನೀಶರು ಮತ್ತು ಅವರ ಆಶ್ರಮ ಕೇಂದ್ರ ಸರ್ಕಾರದ ಕೆಂಗಣ್ಣಿಗೆ ಬಿತ್ತು. ಅಲ್ಲಿಯತನಕ ತೆರಿಗೆಯಿಂದ ರಜನೀಶರ ಆಶ್ರಮಕ್ಕೆ ವಿನಾಯತಿಯನ್ನು ನೀಡಲಾಗಿತ್ತು. 1974ರಲ್ಲಿ ಈ ವಿನಾಯತಿಯನ್ನು ರದ್ದುಪಡಿಸಿದ ಸರ್ಕಾರ ಕೋಟ್ಯಾಂತರ ರೂಪಾಯಿ ತೆರಿಗೆ ಕಟ್ಟಬೇಕೆಂದು ನೋಟಿಸ್ ಕಳುಹಿಸಿತು. ಅದೇ ಹೊತ್ತಿಗೆ ರಜನೀಶರ ಆರೋಗ್ಯ ಕೂಡ ಕುಸಿಯಲಾರಂಭಿಸಿತು. ಭಾರತ ಸರ್ಕಾರದ ಕಿರುಕುಳದಿಂದ ತಪ್ಪಿಸಿಕೊಳ್ಳಲು ಮತ್ತು ತಮ್ಮ ಆರೋಗ್ಯಕ್ಕೆ ಸೂಕ್ತವಾದ ಸ್ಥಳಕ್ಕೆ ಹೋಗಲು ರಜನೀಶ್ ನಿರ್ಧರಿಸಿದರು.

ಆಗ ಅವರು ಹೋದದ್ದು ಅಮೆರಿಕೆಯ ಒರೆಗಾನ್ ರಾಜ್ಯದಲ್ಲಿ ಮಾ ಶೀಲಾ ಕೊಂಡುಕೊಂಡಿದ್ದ ಆಶ್ರಮಕ್ಕೆ. ಅಂದು ರಜನೀಶರು ಅಮೆರಿಕೆಯ ನೆಲದ ಮೇಲೆ ಹೆಜ್ಜೆ ಇಡುವ ಮುನ್ನ "ಅಮೆರಿಕೆ ಇಲ್ಲಿಯತನಕ ಕಾಯುತ್ತಿದ್ದ ವಿಮೋಚಕ ನಾನು" ಎಂದು ತಮ್ಮನ್ನು ತಾವೇ ಬಣ್ಣಿಸಿದ್ದರು.

ಆದರೆ ಐದು ವರ್ಷಗಳಲ್ಲಿ ಅವರ ಕನಸು ನುಚ್ಚುನೂರಾಯಿತು. ಅಮೆರಿಕ ಸರ್ಕಾರ ಅವರ ವಿರುದ್ಧ ಹಲವಾರು ಆರೋಪಗಳನ್ನು ದಾಖಲಿಸಿತು. ಅವರು ಅಮೆರಿಕದಿಂದ ತಪ್ಪಿಸಿಕೊಳ್ಳಲು ಹೊರಟದ್ದಾಗ ಅವರ ವಿಮಾನವನ್ನು ತಡೆಹಿಡಿದ ಅಧಿಕಾರಿಗಳು ರಜನೀಶ್ ಮತ್ತವರ ಹಲವು ಸಂಗಡಿಗರನ್ನು ಬಂಧಿಸಿದರು. ಕೊನೆಗೆ ರಜನೀಶ್ ತಮ್ಮೊಂದಿಗೆ ತೆಗೆದುಕೊಂಡು ಹೋಗುತ್ತಿದ್ದ ಹಣ ಮತ್ತು ಒಡವೆಯನ್ನು ಜಪ್ತಿ ಮಾಡಿದರಲ್ಲದೆ, ನಾಲ್ಕು ಲಕ್ಷ ಡಾಲರ್ ದಂಡವನ್ನೂ ವಿಧಿಸಿದರು. ಜೊತೆಗೆ ಯಾವುದೇ ಕಾರಣಕ್ಕೂ ಹತ್ತು ವರ್ಷಗಳ ಕಾಲ ಅಮೆರಿಕೆಗೆ ಬರುವುದಿಲ್ಲ ಎಂದು ಮುಚ್ಚಳಿಕೆಯನ್ನು ಬರೆಸಿಕೊಂಡ ನಂತರ ಅವರನ್ನು ಬಿಡುಗಡೆ ಮಾಡಿದರು.

ಹೀಗೆ ಅಮೆರಿಕೆಯಿಂದ ಒದ್ದೋಡಿಸಿಕೊಂಡ ರಜನೀಶ್ ಭಾರತಕ್ಕೆ ಹಿಂದಿರುಗಿದರಾದರೂ ಇಲ್ಲಿ ಸ್ವಲ್ಪ ದಿನ ಮಾತ್ರ ಇದ್ದು ನೇಪಾಳಕ್ಕೆ ಹೋದರು. ಅಲ್ಲಿಂದ ತಾವು ವಿಶ್ವ ಪರ್ಯಟನೆ ಮಾಡಲಿದ್ದೇವೆ ಎಂದು ಘೋಷಿಸಿದರು. ಆದರೆ ಅವರ ದುರದೃಷ್ಟಕ್ಕೆ 17 ದೇಶಗಳು ಅವರಿಗೆ ವೀಸಾವನ್ನು ನಿರಾಕರಿಸಿದವಲ್ಲದೆ ಗ್ರೀಸ್ ಮತ್ತು ಉರುಗ್ವೆ ದೇಶಗಳು ಅವರನ್ನು ಬಲವಂತವಾಗಿ ಒಕ್ಕಲೆಬ್ಬಿಸಿದವು. ಕೊನೆಗೆ ವಿಧಿ ಇಲ್ಲದೆ ತಮ್ಮ ಪೂಣೆ ಆಶ್ರಮಕ್ಕೆ ಹಿಂದಿರುಗಿದರು. ಜೊತೆಗೆ ಭಗವಾನ್ ಶ್ರೀ ರಜನೀಶ್ ಎಂಬ ಹೆಸರನ್ನು ತೊರೆದು ತಾವು ಇನ್ನು ಮುಂದೆ 'ಓಶೋ' ಎಂದು ಘೋಷಿಸಿದರು.


1989ರಲ್ಲಿ ಅವರ ಆರೋಗ್ಯ ಕೆಡಲಾರಂಭಿಸಿತು. ಅವರು ಸತ್ತನಂತರ ಅವರ ಭಕ್ತಾದಿಗಳು ಏನು ಮಾಡಬೇಕು ಎಂದು ಕೇಳಿದಾಗ "ನನ್ನನ್ನು ಮಂಚದ ಅಡಿ ದೂಡಿ ನನ್ನ ಬಗ್ಗೆ ಮರೆತು ಬಿಡಿ" ಎಂದು ಉತ್ತರಿಸಿದ್ದರು. 1990ರ ಜನವರಿಯಲ್ಲಿ ಅವರು ಅಸುನೀಗಿದರು.

ಇವತ್ತು ಪೂಣೆಯಲ್ಲಿರುವ ಅವರ ಆಶ್ರಮ ಆಧ್ಯಾತ್ಮಿಕ ಕೇಂದ್ರವಾಗಿ ಮತ್ತೆ ಜನಪ್ರಿಯವಾಗಿದೆ. ಅವರ ಪುಸ್ತಕಗಳು ಹಲವಾರು ಭಾಷೆಗಳಿಗೆ ಅನುವಾದಗೊಂಡಿವೆಯಲ್ಲದೆ ಅಮೆರಿಕೆಯಲ್ಲೂ ಲಭ್ಯವಿವೆ. ದೆಹಲಿಯಲ್ಲಿರುವ ಸಂಸತ್ತು ಭವನದ ಗ್ರಂಥಾಲಯದಲ್ಲಿ ಓಶೋ ಅವರ ಪುಸ್ತಕಗಳಿಗೆ ವಿಶೇಷ ಸ್ಥಾನಮಾನವನ್ನು ನೀಡಲಾಗಿದೆ. ದಿ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯು 20ನೇ ಶತಮಾನದ ಹತ್ತು ಪ್ರಮುಖರಲ್ಲಿ ಓಶೋ ಒಬ್ಬರು ಎಂದು ಪಟ್ಟಿ ಮಾಡಿತ್ತು.

ಚಂದ್ರಮೋಹನ್ ಎಂಬ ವ್ಯಕ್ತಿ ಕೊನೆಗೆ ಓಶೋ ಆದ ಪರಿ ಇದು...

...ನೀಶರ ಅಮೆರಿಕದ ಆಶ್ರಮ ಹೀಗಿತ್ತು

...ಭಾರತವನ್ನು ತೊರೆದು ಅಮೆರಿಕಕ್ಕೆ ...ಹೋದ ರಜನೀಶರಿಗೆ ಅಲ್ಲಿ ತಮ್ಮದೇ ಆದ ...ಾಡೀ ನಗರವನ್ನೇ ಸ್ಥಾಪಿಸುವ ಕನಸಿತ್ತು. ...ನಲ್ಲಿ ಅವರು ಅಮೆರಿಕದ ರಾಜ್ಯವಾದ ...ನಲ್ಲಿ ವಿಸ್ತಾರವಾದ 64,000 ಎಕರೆ ...ವನ್ನು ಕೊಂಡಿದ್ದರು.



...ಯುರೋಪ್ ಮತ್ತು ಅಮೆರಿಕ ದೇಶಗಳಿಂದ ...ಸಾವಿರಾರು ಅನುಯಾಯಿಗಳು ರಜನೀಶರನ್ನು ...ಸಿದರು. ಆ ಆಶ್ರಮಕ್ಕೆ 'ರಜನೀಶಪುರಂ' ... ಹೆಸರಿಟ್ಟು, ಅವರ ಅನುಯಾಯಿಗಳು ...ದಿಂದ ಯಾವುದೇ ಸಂಬಳವನ್ನು ನಿರೀಕ್ಷಿಸದೆ ...ಸುರಿಸಿ ದುಡಿದರು.

...ೋಡುನೋಡುತ್ತಿದ್ದಂತೆ ಬರಡು ಪ್ರದೇಶವಾಗಿದ್ದ ...10 ಎಕರೆಗಳು ಗಿಡಮರಗಳಿಂದ ...ಸಲಾರಂಭಿಸಿತು. ಬರೋಬ್ಬರಿ 350 ಮಿಲಿಯನ್ ...ಗಳಷ್ಟು ನೀರನ್ನು ಹಿಡಿದಿಡಬಲ್ಲಂತಹ ...ವನ್ನು ಮತ್ತು 14 ನೀರಾವರಿ ವ್ಯವಸ್ಥೆಯನ್ನು ...ದರು. ಇಡೀ ಆಶ್ರಮಕ್ಕೆ ಬೇಕಾದಷ್ಟು ಹಣ್ಣು ...ತರಕಾರಿಯನ್ನು ಬೆಳೆಯಲಾರಂಭಿಸಿದರು. ದನಗಳನ್ನು ...ವನ್ನು ಹಾಲಿಗೆ ವ್ಯವಸ್ಥೆ ಮಾಡಿಕೊಂಡರು. ಇದೆಲ್ಲದರ ಜೊತೆಗೆ 10 ಮೆಗಾವಾಟ್ ವಿದ್ಯುತ್ ಕೊಡುವಂತಹ ಸಬ್ ಸ್ಟೇಷನ್ ಒಂದನ್ನು ಸ್ಥಾಪಿಸಿದರು. ಸಾರಿಗೆ ಬಸ್, ಕುಡಿಯುವ ನೀರು, ಒಳಚರಂಡಿಗಳು, ಇತ್ಯಾದಿ ಅಗತ್ಯಗಳನ್ನೂ ನಿರ್ಮಿಸಿಕೊಂಡರು.



ಆಧುನಿಕ ಟೆಲಿಫೋನ್ ವ್ಯವಸ್ಥೆ ಮತ್ತು ಕಂಪ್ಯೂಟರ್ ಸಂಪರ್ಕ ಜಾಲವನ್ನೂ ಆಶ್ರಮ ಹೊಂದಿತ್ತು. ಜೊತೆಗೆ ಒಂದು ಪುಟ್ಟ ನಗರಕ್ಕೆ ಬೇಕಾದಂತಹ ಪೋಸ್ಟ್ ಆಫೀಸ್, ಅಗ್ನಿಶಾಮಕ ದಳ, ಹೋಟೆಲ್‌ಗಳು, ಅಂಗಡಿಗಳು, ಅತಿಥಿಗೃಹಗಳಲ್ಲದೆ 1,300 ಅಡಿ ಉದ್ದನೆಯ ವಿಮಾನ ಹಾದಿಯೂ ಇತ್ತು.


ಇಷ್ಟೆಲ್ಲ ಇದ್ದ ಮೇಲೆ ಇದೆಲ್ಲವನ್ನು ನಿಯಂತ್ರಿಸಲು ಮತ್ತು ಸುವ್ಯವಸ್ಥೆಯನ್ನು ಕಾಪಾಡಲು ಪೊಲೀಸರೂ ಇರಬೇಕಲ್ಲವೇ. ರಜನೀಶಪುರಂನಲ್ಲಿ ಪೊಲೀಸರೂ ಇದ್ದರು. ಅವರೆಲ್ಲ ಯುಜಿ ಎಂಬ ಮೆಷೀನ್ ಗನ್‌ಗಳನ್ನು ಸದಾ ಹೊಂದಿರುತ್ತಿದ್ದರು.

ರಜನೀಶರನ್ನು ಅಮೆರಿಕೆಯಿಂದ ಹೊರದೂಡಲ್ಪಟ್ಟ ನಂತರ ಅವರ ಅನುಯಾಯಿಗಳೂ ಆಶ್ರಮವನ್ನು ತೊರೆದರು. ಈಗ ಈ ರಜನೀಶಪುರಂ ಹಾಳುಬಿದ್ದಿರುವ ಕೊಂಪೆಯಾಗಿದೆ.

ಬಾಗಲಕೋಟೆ: ನಾಯಕರ ಅನೈತಿಕ ಚಟುವಟಿಕೆಗಳು


ಮುರುಗೇಶ್ ನಿರಾಣಿ


ಗೋವಿಂದ ಕಾರಜೋಳ


ಶ್ರೀಕಾಂತ್ ಕುಲಕರ್ಣಿ


ಸಿದ್ದು ಸವದಿ


ಸಿದ್ದು ನ್ಯಾಮೇಗೌಡ

ಸದ್ಯದಲ್ಲೇ ಚುನಾವಣೆಗಳು ಎದುರಾಗುವುದರಿಂದ ಬಾಗಲಕೋಟೆ ಜಿಲ್ಲೆಯ ರಾಜಕಾರಣಿಗಳು ತಮ್ಮ ಜಾತಿ ರಾಜಕೀಯ ಮತ್ತು ಅನೈತಿಕ ಚಟುವಟಿಕೆಗಳನ್ನು ಪ್ರಾರಂಭಿಸಿದ್ದಾರೆ. ಯಾವ ಮಾರ್ಗದಿಂದಲಾದರೂ ಸರಿ ಗೆದ್ದೇ ತೀರಬೇಕೆಂದು ನಿರ್ಧರಿಸಿರುವ ಇಲ್ಲಿನ ಘಟಾನುಘಟಿ ರಾಜಕಾರಣಿಗಳೆಲ್ಲ ತಮ್ಮ ತಮ್ಮ ಪಕ್ಷದ ತತ್ವ ಸಿದ್ಧಾಂತಗಳನ್ನೆಲ್ಲ ಗಾಳಿಗೆ ತೂರಿ ವೈಯುಕ್ತಿಕ ವ್ಯಾಪಾರ ಮತ್ತು ಗುಂಪುಗಾರಿಕೆಯಲ್ಲಿ ತೊಡಗಿದ್ದಾರೆ.

ಬಿಜೆಪಿ ಸರ್ಕಾರದಲ್ಲಿ ಮಂತ್ರಿಗಳಾಗಿರುವ ಮತ್ತು ಜಿಲ್ಲೆಯ ಪ್ರಭಾವಿ ನಾಯಕರೂ ಆಗಿರುವ ಮುರುಗೇಶ್ ನಿರಾಣಿ ಹಾಗೂ ಗೋವಿಂದ ಕಾರಜೋಳರ ಮಧ್ಯೆ ಮೊದಲಿನಿಂದಲೂ ಗುದ್ದಾಟವಿದೆ. ನಿರಾಣಿ ಮೂಲತಃ ಬೀಳಗಿ ಮತ ಕ್ಷೇತ್ರದ ಶಾಸಕನಾದರೂ ಆತನ ಸಕ್ಕರೆ ಕಾರ್ಖಾನೆ ಹಾಗೂ ಮನೆ ಇರುವುದು ಮುಧೋಳದಲ್ಲಿ. ಆದ್ದರಿಂದ ಆತನ ರಾಜಕೀಯ ಚಟುವಟಿಕೆಗಳೆಲ್ಲ ನಡೆಯುವುದು ಮುಧೋಳದಲ್ಲೇ. ಇದು ಗೋವಿಂದ ಕಾರಜೋಳರಿಗೆ ತಲೆನೋವಾಗಿ ಪರಿಣಮಿಸಿದೆ.

ಹೇಗಾದರೂ ಮಾಡಿ ನಿರಾಣಿಯನ್ನು ಹಣಿಯಲೇಬೇಕೆಂದು ತೀರ್ಮಾನಿಸಿದ ಕಾರಜೋಳ ಸಕ್ಕರೆ ಕಾರ್ಖಾನೆಯ ಅಧ್ಯಕ್ಷ ರಾಮಣ್ಣ ತಳೇವಾಡರನ್ನು ಮುಂದಿಟ್ಟುಕೊಂಡು ನಿರಾಣಿಯ ಸಕ್ಕರೆ ಕಾರ್ಖಾನೆಯ ವಿರುದ್ಧ ರೈತರನ್ನು ಎತ್ತಿಕಟ್ಟಿದ್ದರು. ಅದು ಯಾವ ಮಟ್ಟಕ್ಕೆ ಹೋಯಿತೆಂದರೆ ನಿರಾಣಿ ತನ್ನ ಸಕ್ಕರೆ ಕಾರ್ಖಾನೆಯನ್ನೇ ಮುಧೋಳದಿಂದ ಎತ್ತಂಗಡಿ ಮಾಡಬೇಕೆಂದು ರೈತರು ಸರ್ಕಾರದೊಂದಿಗೆ ಹಠಕ್ಕೆ ಬಿದ್ದಿದ್ದರು. ಆಗ ನಿರಾಣಿ ತನ್ನ ಕಾರ್ಖಾನೆಯ ರಕ್ಷಣೆಗೆ ಪೊಲೀಸರು ಹಾಗು ಬೆಂಬಲಿಗರ ಸಹಾಯ ಪಡೆಯಬೇಕಾಯಿತು. ಇದೆಲ್ಲದರ ಪರಿಣಾಮವಾಗಿ ನಿರಾಣಿ ಮುಧೋಳದಲ್ಲಿ ಉಳಿಯುವುದೇ ದುಸ್ತರವಾಗಿತ್ತು.

ಕಾರಜೋಳರ ವಿರುದ್ಧ ತಿರುಗಿ ಬಿದ್ದ ನಿರಾಣಿ ಯಾವುದೇ ಕಾರಣಕ್ಕೂ ಬಾಗಲಕೋಟೆಯ ಉಸ್ತುವಾರಿಯನ್ನು ಕಾರಜೋಳರಿಗೆ ಸಿಗದಂತೆ ಮಾಜಿ ಮುಖ್ಯಮಂತ್ರಿ ಮತ್ತು ನಿರಾಣಿರ ರಾಜಕೀಯ ಗುರು ಯಡಿಯೂರಪ್ಪ ಮೇಲೆ ಇನ್ನಿಲ್ಲದಂತಹ ಒತ್ತಡ ಹಾಕಿ ಅದರಲ್ಲಿ ಯಶಸ್ವಿಯೂ ಆಗಿದ್ದರು. ಆದರೆ ಭ್ರಷ್ಟಾಚಾರದ ಆರೋಪದಡಿ ಯಡ್ಡಿ ಅಧಿಕಾರ ಕಳೆದುಕೊಂಡ ನಂತರ ಕಾರಜೋಳ ಮತ್ತೆ ಜಿಲ್ಲಾ ಉಸ್ತುವಾರಿ ಮಂತ್ರಿಯಾದರು. ಇದು ಸಹಜವಾಗಿಯೇ ನಿರಾಣಿಯ ನಿದ್ದೆ ಕೆಡಿಸಿದೆ.

ಬೀಳಗಿಯ ರೆಡ್ಡಿ ಜನರ ವಿರೋಧ ಕಟ್ಟಿಕೊಂಡು ತಾನು ಅಲ್ಲಿಂದ ಗೆಲ್ಲಲು ಸಾಧ್ಯವಿಲ್ಲ ಎಂಬ ಖಾತ್ರಿಯಾದೊಡನೆ ಯಡ್ಡಿಯ ಕೆಜೆಪಿ ಝುಂಡಾ ಹಿಡಿದು ಜಮಖಂಡಿಗೆ ಎಂಟ್ರಿ ಹೊಡೆದಿರುವ ನಿರಾಣಿ ತನ್ನ ಗೆಲುವಿನಷ್ಟೇ ಕಾರಜೋಳರ ಸೋಲನ್ನೂ ಪ್ರತಿಷ್ಠೆಯಾಗಿ ತೆಗೆದುಕೊಂಡಿದ್ದಾರೆ. ಅದೇ ಕಾರಣಕ್ಕೆ ಮುಧೋಳದ ತನ್ನ ಸ್ವಜಾತಿ ಲಿಂಗಾಯತ ನಾಯಕರನ್ನು ದಲಿತ ಕಾರಜೋಳರ ವಿರುದ್ಧ ಎತ್ತಿ ಕಟ್ಟಲಾರಂಭಿಸಿದ್ದಾರೆ. ಅಷ್ಟೇ ಅಲ್ಲ, ಕಾಂಗ್ರೆಸ್‌ನ ಮಾಜಿ ಸಚಿವ ಆರ್.ಬಿ. ತಿಮ್ಮಾಪೂರಗೆ ಸಕಲ ಸಹಾಯ ಮತ್ತು 'ಸಲಕರಣೆ'ಗಳನ್ನು ಒದಗಿಸುತ್ತಿದ್ದಾರೆ.

ಈಗಲೂ ಅಧಿಕೃತವಾಗಿ ಬಿಜೆಪಿಯಲ್ಲೇ ಮಂತ್ರಿಯಾಗಿರುವ ಈ ನಿರಾಣಿ ಮೊದಲಿಂದಲೂ ತಮ್ಮದೇ ಪಕ್ಷದ ಕಾರಜೋಳರ ವಿರುದ್ಧ ಕಾಂಗ್ರೆಸ್‌ನ ತಿಮ್ಮಾಪುರರನ್ನು ಎತ್ತಿ ಕಟ್ಟುತ್ತಲೇ ಬಂದಿದ್ದಾರೆ. ಈ ಬಾರಿಯ ಚುನಾವಣೆಯಲ್ಲೂ ಕಾರಜೋಳರನ್ನು ಸೋಲಿಸಲು ತಿಮ್ಮಾಪೂರಗೆ ಸಾಕಷ್ಟು ಹಣಬಲ ನೀಡಲು ಸಜ್ಜಾಗಿದ್ದಾರೆ.

ಇನ್ನು ಜಮಖಂಡಿಗೆ ಬಂದರೆ ನಿರಾಣಿಯ ಮತ್ತು ಶ್ರೀಕಾಂತ ಕುಲಕರ್ಣಿ ನಡುವಿನ ಸಂಬಂಧ ಹಳಸಿದೆ. ಈಗ ಇವರಿಬ್ಬರೂ ಒಬ್ಬರನ್ನೊಬ್ಬರು ಸೋಲಿಸುವ ತಯಾರಿ ನಡೆಸಿದ್ದಾರೆ. ಅತ್ತ ತೇರದಾಳ ಶಾಸಕ ಸಿದ್ದು ಸವದಿ ಬಿಜೆಪಿಯಲ್ಲೇ ಉಳಿಯುವುದು ಖಾತ್ರಿಯಾದರೂ ಸದ್ಯ ಜಮಖಂಡಿಯಲ್ಲಿ ಆತನ ಬೆಂಬಲಿಗರೆಲ್ಲ ನಿರಾಣಿಯ ಬೆನ್ನಿಗೆ ನಿಂತಿದ್ದಾರೆ. ಸದಾ ಕುಲಕರ್ಣಿಯ ವಿರುದ್ಧ ಚಟುವಟಿಕೆಗಳನ್ನು ಮಾಡುತ್ತ ಬಂದಿರುವ ಸಿದ್ದು ಸವದಿ ಬೆಂಬಲಿಗರು ಸ್ಥಳೀಯ ಸಂಸ್ಥೆಗಳಲ್ಲಿ ಪ್ರಭಾವಿಗಳಾಗಿದ್ದಾರೆ. ಅವರೆಲ್ಲ ಕುಲಕರ್ಣಿಯನ್ನು ಸೋಲಿಸಲು ನಿರಾಣಿಯ ಬೆನ್ನಿಗೆ ನಿಲ್ಲುವುದು ಶತಸಿದ್ಧ. ಹಾಗಾಗಿ ಶ್ರೀಕಾಂತ ಕುಲಕರ್ಣಿ ಈಗಲೇ ಹತಾಶದ ಮಾತನ್ನಾಡಲಾರಂಭಿಸಿದ್ದಾರೆ.

ಇನ್ನು ಮುಂದಿನ ಸಾರಿ ಕಾಂಗ್ರೆಸ್‌ಗೆ ಬಹುಮತ ಸಿಕ್ಕು ಸರ್ಕಾರ ರಚನೆಯಾದರೆ ಜಿಲ್ಲಾ ಕೋಟಾದಲ್ಲಿ ಮಂತ್ರಿಯಾಗಲು ತಿಮ್ಮಾಪುರ ತನಗೆ ಪ್ರತಿಸ್ಪರ್ಧಿಯಾಗಬಹುದೆಂದು ಭಾವಿಸಿರುವ ಸಿದ್ದು ನ್ಯಾಮಗೌಡ ತಿಮ್ಮಾಪುರಗೆ ಟಿಕೆಟ್ ಸಿಗದಂತೆ ನೋಡಿಕೊಳ್ಳುವ ತಂತ್ರಗಾರಿಕೆಯಲ್ಲಿ ತೊಡಗಿದ್ದಾರೆ. ಒಂದು ತಿಮ್ಮಾಪುರರಿಗೆ ಟಿಕೆಟ್ ಸಿಕ್ಕರೂ ಅವರು ಗೆಲ್ಲಲಾರದಂತೆ ಮಾಡಲು ಮುಧೋಳ ಮತಕ್ಷೇತ್ರದಲ್ಲಿರುವ ತನ್ನ ಸ್ವಜಾ... ಮುಖಂಡರ ಮೇಲೆ ಪ್ರಭಾವ ಬೀರುವ ಕೆಲ... ಮಾಡುತ್ತಿದ್ದಾರೆ.

ಇತ್ತ ಜಮಖಂಡಿ ಕಾಂಗ್ರೆಸ್‌ನಲ್ಲಿ ಪಕ್ಷದ ಟಿಕೆಟ್‌ಗಾ... ಜಗದೀಶ ಗುಡಗುಂಟಿ, ಸಿದ್ದು ನ್ಯಾಮಗೌಡ, ಸುಶೀ... ಕುಮಾರ ಬೆಳಗಲಿ ಮುಂತಾದವರ ಮಧ್ಯೆ ತೀವ್ರವಾ... ಜಟಾಪಟಿ ನಡೆದಿದೆ. ಅತ್ಯಂತ ಜಾತಿವಾದಿ ಹಾಗು ಹಣ... ಹೊಂದಿರುವ ಗುಡಗುಂಟಿ ತನಗೆ ಟಿಕೆಟ್ ಗ್ಯಾರಂಟಿಯಾಗಿ... ಎಂದು ಹೇಳಿಕೊಂಡು ಸುತ್ತುತ್ತಿದ್ದಾರೆ. ಹಾಗೇನಾದರೂ... ಆದರೆ ಒಳಗೊಳಗೆ ನಿರಾಣಿಯನ್ನು ಬೆಂಬಲಿ... ಗುಡಗುಂಟಿಯನ್ನು ಹಣೆಯಲು ಸಿದ್ದು ನ್ಯಾಮಗೌ... ಸಿದ್ಧರಾಗುತ್ತಿದ್ದಾರೆ. ಇನ್ನು ಸಿದ್ದು ನ್ಯಾಮಗೌಡರಿಗೆ ಟಿಕೆ... ಸಿಕ್ಕರೆ ಅವರನ್ನು ವಿರೋಧಿಸಿ ಬೇರೆ ಪಕ್ಷದವರನ್ನು... ಬೆಂಬಲಿಸುವ ಗುಂಪುಗಳು ಕಾಂಗ್ರೆಸ್‌ನಲ್ಲಿ ಸಕ್ರಿಯವಾಗಿ...

ಒಟ್ಟಾರೆಯಾಗಿ ಜಿಲ್ಲೆಯ ಪ್ರಭಾವಿ ರಾಜಕಾರಣಿಗಳ... ತಮ್ಮ ಪಕ್ಷದ ತತ್ವ ಸಿದ್ಧಾಂತಗಳಿಗೆ ತಿಲಾಂಜಲಿ ಇಟ್ಟು... ಸ್ವಂತ ಲಾಭಕ್ಕಾಗಿ ಹಾಗೂ ಜಾತಿಯ ಹಿತಾಸಕ್ತಿಗಾಗಿ ಸ್ವಪಕ್ಷದ... ಮುಖಂಡರನ್ನೇ ತುಳಿಯುವ ಹಾಗು ಬೇ... ಪಕ್ಷದವರೊಂದಿಗೆ ಅನೈತಿಕ ಮೈತ್ರಿಗೆ ಮುಂದಾಗಿದ್ದಾರೆ... ಮುಂದಿನ ಚುನಾವಣೆ ಬರೀ ಹಣಬಲ, ಜಾತಿಬಲ ಹಾಗು... ಸ್ವಂತ ಲಾಭದ ಲೆಕ್ಕಾಚಾರದಲ್ಲೇ ನಡೆಯಲಿದೆ. ಇದರಿಂದಾ... ಪ್ರಜಾಪ್ರಭುತ್ವ ಮತ್ತಷ್ಟು ಇಕ್ಕಟ್ಟಿಗೆ ಸಿಲುಕಿದೆ.


● ಮಹಾಲಿಂಗಪ್ಪ ಆಲಬಾ...

'ಸೆಕ್ಯುಲರ್' ಪತ್ರಿಕೆಗಳ ಕೋಮುವಾದಿ ವರದಿಗಾರರು

'ಮಂಗಳೂರು: ಇಲ್ಲಿನ ಅತ್ತಾವರದಲ್ಲಿನ ಕೆಫೆ ಒಂದರಲ್ಲಿ ಯುವಕರ ಜತೆಗೆ ಸಿಗರೇಟ್ ಸೇದುತ್ತಿದ್ದ ನಾಲ್ವರು ಯುವತಿಯರ ಬಗ್ಗೆ ಬಜರಂಗದಳ ಮತ್ತು ದುರ್ಗಾ ವಾಹಿನಿ ಕಾರ್ಯಕರ್ತರು ಮಾಹಿತಿ ನೀಡಿದ್ದನ್ನು ಆಧರಿಸಿ, ಕ್ಷಿಪ್ರ ಕಾರ್ಯಾಚರಣೆ ನಡೆಸಿದ ಪಾಂಡೇಶ್ವರ ಠಾಣೆ ಪೊಲೀಸರು ಯುವತಿಯರನ್ನು ಠಾಣೆಗೆ ಕರೆತಂದು ಸಂಭಾವ್ಯ ದಾಳಿಯನ್ನು ತಪ್ಪಿಸಿದ ಘಟನೆ ಬುಧವಾರ ನಡೆದಿದೆ.

ರಾಕ್ಸ್ ಕೆಫೆಯಲ್ಲಿನ ಅಂತಸ್ತಿನಲ್ಲಿ ಸಿಗರೇಟ್ ಸೇದುವುದಕ್ಕಾಗಿಯೇ ಸ್ಥಳವನ್ನು ಕಾಯ್ದಿರಿಸಲಾಗಿದೆ. ಅಲ್ಲಿ ಸಿಗರೇಟ್ ಸೇದುವುದು ಸಾರ್ವಜನಿಕರಿಗೆ ಕಾಣಿಸುವಂತಿದೆ. ಇಲ್ಲಿ ಕಾಲೇಜಿಗೆ ಹೋಗುವ ಯುವತಿಯರು ಯುವಕರ ಜತೆಗೆ ಕುಳಿತುಕೊಂಡು ಸಿಗರೇಟ್ ಸೇದುತ್ತಿದ್ದುದನ್ನು ಕಂಡ ಬಜರಂಗದಳ ಮತ್ತು ದುರ್ಗಾ ವಾಹಿನಿಯ ಕಾರ್ಯಕರ್ತರು ಪೊಲೀಸರಿಗೆ ಮಾಹಿತಿ ನೀಡಿದ್ದರು.

ಇಬ್ಬರು ದುರ್ಗಾ ವಾಹಿನಿಯ ಕಾರ್ಯಕರ್ತರು ಮತ್ತು ದೂರು ನೀಡಿದ ಒಬ್ಬರ ಜತೆಗೆ ಕೆಫೆಯೊಳಗೆ ಪೋಗಿ ನಾಲ್ವರು ಯುವತಿಯರನ್ನು ಮತ್ತು ಮೂವರು ಯುವಕರನ್ನು ಜೀಪಿನಲ್ಲಿ ಕುಳ್ಳಿರಿಸಿ ಠಾಣೆಗೆ ಕರೆದೊಯ್ದರು. ಹೀಗಾಗಿ ಅಲ್ಲಿ ಯಾವುದೇ ಅಹಿತಕರ ಘಟನೆ ನಡೆಯಲಿಲ್ಲ, ಇಷ್ಟೆಲ್ಲ ನಡೆಯುತ್ತಿರುವಾಗ




ಕೆಫೆ ಹೊರಗಡೆ ಎರಡೂ ಸಂಘಟನೆಗಳ ಹತ್ತಾರು ಮಂದಿ ಇದ್ದರು. ಯಾರೂ ಯಾರ ಮೇಲೂ ಕೈಮಾಡಿಲ್ಲ, ಕೆಫೆಯ ಸ್ವತ್ತುಗಳಿಗೂ ಹಾನಿ ಮಾಡಿಲ್ಲ...'

ಈ ವರದಿ ಪ್ರಕಟವಾದುದು ಯಾವುದೋ ಕೋಮುವಾದಿ ಪತ್ರಿಕೆಯಲ್ಲಿ ಎಂದುಕೊಳ್ಳಬೇಡಿ. ಬದಲಾಗಿ ರಾಜ್ಯದ ಅತ್ಯಂತ ಜನಪ್ರಿಯ ಮತ್ತು ತಥಾಕಥಿತ ಸೆಕ್ಯುಲರ್ ಎನಿಸಿಕೊಂಡಿರುವ ಪತ್ರಿಕೆಯೊಂದರಲ್ಲಿ (31.01.2013). 'ಧೂಮಪಾನಿ ಯುವತಿಯರಿಗೆ ಪೊಲೀಸ್ ರಕ್ಷಣೆ' ಎಂಬ ತಲೆಬರಹವಿದ್ದ (ಆಶ್ಚರ್ಯ ಚಿಹ್ನೆಯೂ ಇಲ್ಲ ಪ್ರಶ್ನಾರ್ಥಕ ಚಿಹ್ನೆಯೂ ಇಲ್ಲ!) ಸದರಿ ವರದಿಯನ್ನು ಓದುವಾಗ ಪತ್ರಿಕಾಧರ್ಮಕ್ಕೆ ನಿಷ್ಠನಾದ ಓರ್ವ ಪತ್ರಕರ್ತ ಈ ವರದಿಯನ್ನು ಬರೆದಿರಬಹುದು ಎಂದು ನಿಮಗನಿಸುತ್ತದೆಯೇ? ಅದನ್ನು ಓರ್ವ ಸಕ್ರಿಯ ಭಜರಂಗದಳ ಕಾರ್ಯಕರ್ತನೇ ಬರೆದಿರಬಹುದೇನೋ ಎಂಬ ಅನುಮಾನ ಮೂಡುವುದಿಲ್ಲವೇ?

'ಯುವತಿಯರನ್ನು ಠಾಣೆಗೆ ಕರೆತಂದು ಸಂಭಾವ್ಯ ದಾಳಿಯನ್ನು ತಪ್ಪಿಸಿದ ಘಟನೆ ನಡೆದಿದೆ' ಎಂದರೆ ಏನರ್ಥ? 'ಯಾರೂ ಯಾರ ಮೇಲೂ ಕೈಮಾಡಿಲ್ಲ, ಕೆಫೆಯ ಸ್ವತ್ತುಗಳಿಗೂ ಹಾನಿ ಮಾಡಿಲ್ಲ' ಎಂದು ಹೇಳುವಲ್ಲಿ ಕೋಮುವಾದಿ ಶಕ್ತಿಗಳನ್ನು ಬಚಾವು ಮಾಡುವ ವರದಿಗಾರನ ಅತ್ಯುತ್ಸಾಹವನ್ನು ನೋಡಿ. ಅಲ್ಲಿ ಏನು ನಡೆಯಿತು ಎಂದು ವರದಿ ಮಾಡುವುದು ವರದಿಗಾರನ ಕೆಲಸವೇ ಅಥವಾ ಏನು ನಡೆಯಲಿಲ್ಲ ಎಂದು ವರದಿ ಮಾಡುವುದೇ?

ಅಂದಹಾಗೆ, ಖಾಸಗಿ ಜಾಗದಲ್ಲಿ ಸಿಗರೇಟ್ ಸೇದುವುದು ಅನೈತಿಕ ಅಥವಾ ಕಾನೂನುಬಾಹಿರ ಕೆಲಸ ಎನಿಸಿಕೊಂಡಿರುವುದು ಎಂದಿನಿಂದ? ಇದನ್ನು ಪ್ರಶ್ನಿಸಲು ಅಲ್ಲಿ ದಾಳಿ ನಡೆಸಲು ಬಜರಂಗದಳ ಮತ್ತು ದುರ್ಗಾ ವಾಹಿನಿಯವರಿಗೆ ಅಧಿಕಾರ ಕೊಟ್ಟವರು ಯಾರು? ಏನೂ ತಪ್ಪು ಮಾಡಿರದ ಯುವತಿಯರನ್ನು ಪೊಲೀಸ್ ಠಾಣೆಗೆ ಒಯ್ದುದು ಅಹಿತಕರ ಘಟನೆಯಲ್ಲವೇ? ಆದರೆ ಇಲ್ಲಿನ ವರದಿಗಾರನಿಗೆ ಆ ಪ್ರಶ್ನೆಗಳು ಮುಖ್ಯವಾಗುವುದಿಲ್ಲ, ಬದಲಿಗೆ ಅಲ್ಲಿ ಯಾವುದೇ ಅಹಿತಕರ ಘಟನೆ ನಡೆಯಲಿಲ್ಲ ಎಂದು ಪ್ರಮಾಣಪತ್ರ ನೀಡುತ್ತಾನೆ! ಹಾಗಾದರೆ ಅಹಿತಕರ ಘಟನೆಯ ವ್ಯಾಖ್ಯೆಯೇನು? ಇಡೀ ವರದಿಯನ್ನು ಓದುವಾಗ ಇಲ್ಲಿ ಯುವತಿಯರು ಏನೋ ಅನೈತಿಕವಾದುದನ್ನು, ಕಾನೂನುಬಾಹಿರವಾದುದನ್ನು ಮಾಡುತ್ತಿದ್ದರು, ಪೊಲೀಸರು ಮತ್ತು ಕೋಮುವಾದಿ ಸಂಘಟನೆಗಳು ಏನೋ ಮಹಾ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ ಎಂದು ಹೇಳಿದಂತೆ ಅನಿಸುವುದಿಲ್ಲವೇ?

ಕರಾವಳಿಯ ಈ ಭಾಗದಲ್ಲಿ ನಡೆಯುತ್ತಿರುವ ನೈತಿಕ ಪೊಲೀಸ್‌ಗಿರಿಯಲ್ಲಿ ಇಲ್ಲಿನ ಆಡಳಿತ, ಪೊಲೀಸರು ಮತ್ತು ಕೋಮುವಾದಿ ಸಂಘಟನೆಗಳು ಎಷ್ಟು ಹೊಣೆಗಾರರೋ ಇಲ್ಲಿನ ಬಹುತೇಕ ಪತ್ರಿಕೆ ಮತ್ತು ಸುದ್ದಿ ವಾಹಿನಿಗಳೂ ಅಷ್ಟೇ ಹೊಣೆಗಾರರು. ಪತ್ರಿಕಾಧರ್ಮಕ್ಕೆ ನಿಷ್ಠವಾಗಿ, ಜನಪರವಾಗಿ ಮಾಧ್ಯಮಗಳು ಕೆಲಸ ಮಾಡುತ್ತಿದ್ದರೆ ಇಲ್ಲಿನ ಕೋಮುವಾದಿಗಳ ಚಟುವಟಿಕೆಗಳನ್ನು ಬಹುಮಟ್ಟಿಗೆ ಮಟ್ಟ ಹಾಕಬಹುದಿತ್ತು. ವಿಷಾದದ ಸಂಗತಿಯೆಂದರೆ, ವಿಭಿನ್ನ ಕೋಮಿಗೆ ಸೇರಿದ ಯುವಕ ಯುವತಿಯರ ಸ್ನೇಹಸಂಬಂಧಗಳ ವಿಚಾರವಿರಬಹುದು,




ಬುರ್ಖಾ ವಿಚಾರವಿರಬಹುದು, ಗೋಸಾಗಾಟ ವಿಚಾರಬಹುದು ಇಲ್ಲಿನ ಬಹುತೇಕ ಮಾಧ್ಯಮಗಳು ಸತ್ಯವನ್ನು ಹೇಳುವ ಕೆಲಸಕ್ಕೆ ತಿಲಾಂಜಲಿ ಬಿಟ್ಟು ಕೋಮುವಾದಿಗಳ ಚಟುವಟಿಕೆಗಳನ್ನು ಪ್ರೋತ್ಸಾಹಿಸುವ ಕೆಲಸವನ್ನು ಮಾಡಿದ್ದು ಹೆಚ್ಚು. ಕೋಮುವಾದಕ್ಕೆ ತನ್ನ ಬದ್ಧತೆಯನ್ನು ಬಹಿರಂಗವಾಗಿ ಘೋಷಿಸಿಕೊಂಡಿರುವ ಪತ್ರಿಕೆಗಳನ್ನಾದರೂ ಸಹಿಸಿಕೊಳ್ಳಬಹುದು. ಆದರೆ 'ಸೆಕ್ಯುಲರ್' ಮುಖವಾಡದಲ್ಲಿ ಕೋಮುವಾದವನ್ನು ಪೋಷಿಸುವ ಪತ್ರಿಕೆಗಳು ಸಮಾಜಕ್ಕೆ ಖಂಡಿತವಾಗಿಯೂ ಅತ್ಯಂತ ಅಪಾಯಕಾರಿ.

ಶಾಸಕಾಂಗ ಮತ್ತು ಕಾರ್ಯಾಂಗ ಅಷ್ಟೇ ಏಕೆ, ನ್ಯಾಯಾಂಗದ ಮೇಲೂ ಜನತೆ ವಿಶ್ವಾಸವನ್ನು ಕಳೆದುಕೊಳ್ಳುತ್ತಿರುವ ಹೊತ್ತಿನಲ್ಲಿ ಜನತೆಗೆ ಕೊನೆಯ ಭರವಸೆಯಾಗಿ ಇದ್ದುದು ಪ್ರಜಾತಂತ್ರದ ನಾಲ್ಕನೇ ಅಂಗ ಎಂದು ಕರೆಸಿಕೊಂಡ ಪತ್ರಿಕಾರಂಗ. ಆದರೆ ಅದೂ ಈಗ ಎಷ್ಟು ಕುಲಗೆಟ್ಟು ಹೋಗಿದೆ ಎನ್ನುವುದನ್ನು ಕರಾವಳಿಯ ಈ ಭಾಗದಲ್ಲಿ ನೋಡಬಹುದು. ಇಲ್ಲಿನ ಮಾಧ್ಯಮಗಳಲ್ಲಿ ಬಹು ದೊಡ್ಡ ಪ್ರಮಾಣದಲ್ಲಿ ಕೋಮುವಾದಿ ಶಕ್ತಿಗಳು ಒಳಸೇರಿಕೊಂಡಿವೆ. ಪತ್ರಿಕೆ 'ಸೆಕ್ಯುಲರ್' ಆದರೂ ಅದರೊಳಗಿನ ವರದಿಗಾರರು ಕೋಮುವಾದಿ ಮನಸ್ಥಿತಿಯವರು. ಸಂಘಪರಿವಾರದ ಒಲವುಳ್ಳವರು (ಪತ್ರಕರ್ತ ನವೀನ್ ಸೂರಿಂಜೆಯನ್ನು ಜೈಲಿಗೆ ತಳ್ಳಿದಾಗ ಇಲ್ಲಿನ ಬಹುತೇಕ ಪತ್ರಕರ್ತರು ಆತನ ಹಿಂದೆ ಬೆಂಬಲವಾಗಿ ನಿಲ್ಲದಿರಲು ಕಾರಣವೇನು ಎನ್ನುವುದನ್ನು ಅರ್ಥಮಾಡಿಕೊಳ್ಳುವುದು ಕಷ್ಟವೇನಲ್ಲ). ಎದ್ದು ನಿಂತು ಪ್ರತಿಭಟಿಸಬೇಕಾಗಿದ್ದ ಜನ ಮೌನವೇ ಭೂಷಣವೆಂದುಕೊಂಡಿರುವಾಗ, ಸರಕಾರ, ಪೊಲೀಸರು ಮತ್ತು ಮಾಧ್ಯಮಗಳು ಬೆಂಬಲವಾಗಿ ನಿಂತಿರುವಾಗ ಕೋಮುವಾದಿಗಳಿಗೆ ಭಯವಾದರೂ ಏತಕ್ಕೆ? ಕರಾವಳಿಯಲ್ಲಿ ಕೋಮುವಾದಿಗಳ ವಿಧ್ವಂಸಕ ಕಾರ್ಯ ಸಾಂಗವಾಗಿ ಮುಂದುವರಿದಿರುವುದಕ್ಕೆ ಬಹುಮುಖ್ಯ ಕಾರಣವೇ ಇದು.

- ಸಿದ್ಧಾರ್ಥ್, ಮಂಗಳೂರು

ದಾರ್ಶನಿಕ ಆಶಿಷ್ ನಂದಿ ಮತ್ತು ಪ್ರಜಾಪ್ರಭುತ್ವ ಉಳಿಸಲು ಭ್ರಷ್ಟಾಚಾರವೆಂಬ ದಿವ್ಯೋಪಾಯ



ಪುರದಲ್ಲಿ ನಡೆದ ಸಾಹಿತ್ಯ ಸಂಭ್ರಮವನ್ನೂ, ೂರೀ ದೊಡ್ಡ ಬುದ್ಧಿಜೀವಿ ಚಿಂತನೆಗಳನ್ನೂ ವರಿಗೆ ಆಶಿಷ್ ನಂದಿಯೆಂಬ ದಾರ್ಶನಿಕರ ಳಿದಿರುತ್ತದೆ. ಆದರೆ ನಮ್ಮಂತಹವರಿಗೆ ಆಶಿಷ್ ವ್ಯಕ್ತಿ 'ಈ ದೇಶದಲ್ಲಿ ಓಬಿಸಿಗಳು, ದಲಿತ ದಿವಾಸಿಗಳೇ ಹೆಚ್ಚೆಚ್ಚು ಭ್ರಷ್ಟರಾಗುತ್ತಿದ್ದಾರೆ' ಹೇಳಿಕೆಯನ್ನು ನೀಡಿದ್ದಾರೆ ಎಂಬ ಸುದ್ದಿಯ ಪರಿಚಯವಾಗುತ್ತಾರೆ. ಅವರ್‍ಯಾರೋ ಮೇಲ್ಜಾತಿ ತಿವಾದಿ ಇರಬೇಕು ಎಂದು ಂಡು, ಬಯ್ದುಕೊಂಡು ಾವ ಹೊತ್ತಿಗೆ ಪ್ರಕರಣದಲ್ಲಿ ುವು ಒದಗಿ ಬರುತ್ತದೆ. ಾಗೆ ಹೇಳಿಲ್ಲ, ವಾಸ್ತವದಲ್ಲಿ ಳಿದ್ದು ಅಥವಾ ಹೇಳಲು ್ದ ಶೋಷಿತ ಜಾತಿಗಳ ಎಂದು ಆಶಿಷ್ ನಂದಿ ೂಡಗುತ್ತಾರೆ. ಆಶಿಷ್ ರವಾಗಿ ನಾವು ಬಲ್ಲ ದೊಡ್ಡ ರು ವಕಾಲತ್ತು ವಹಿಸುತ್ತಾರೆ. ಟ್‌ನಲ್ಲಿ ಆಶಿಷ್ ರನ್ನು ಬೆಂಬಲಿಸಲೇ ಒಂದು /ಬ್ಲಾಗ್ ಶುರುವಾಗುತ್ತದೆ.

ಲ್ಲಾ ಬೇರೆ ರೀತಿಯ ಈ ತರದ ಮಾತುಗಳು ಸ್ತವೆ.

ಬಹಳ ಸೂಕ್ಷ್ಮವಾಗಿ ಮಾತಾಡುತ್ತಾರೆ, ಅದರ ಭಾವವನ್ನು ನೀವು ಅರ್ಥ ಮಾಡಿಕೊಳ್ಳಬೇಕು', ವಾಯಿಕವಾಗಿ ಮಾತಾಡಿ ಬೆಚ್ಚಿ ಬೀಳಿಸುವ ತಮ್ಮ ಭಾವವನ್ನೂ ನಂದಿ ಈ ಸಾರಿಯೂ ತೋರಿದ್ದಾರೆ', ಮ್ಮ ಜೀವನದುದ್ದಕ್ಕೂ ದಮನಿತ ಸಮುದಾಯಗಳ ಮಾತಾಡಿದ್ದಕ್ಕೆ ನೂರಾರು ಉದಾಹರಣೆಗಳಿವೆ, ಟಾಗಿ ಅವರು ಹೇಳಿರಲಾರರು; ನಮಗೆ ಸೂಕ್ಷ್ಮತೆ ಮಾತ್ರ ನಂದಿಯವರ ನಿಜವಾದ ಚಿಂತನೆ ತ್ತದೆ', 'ವಾಸ್ತವದಲ್ಲಿ ಅವರು ಓಬಿಸಿ, ದಲಿತರ ಮಾತಾಡಿದ್ದಾರೆ', 'ಪ್ರಜಾಪ್ರಭುತ್ವದ ಕುರಿತು ಳನೋಟದ ಮಾತನ್ನು ನಂದಿ ಹೇಳಿದ್ದಾರೆ, ವ್ಹಾ ದಿಯಂಥವರಿಗೆ ಮಾತ್ರ ಇಂಥದ್ದನ್ನು ಹೇಳಲು ದು ಕನ್ನಡದ ಪ್ರಗತಿಪರ ಚಿಂತಕರೆಂದು ವವರೊಬ್ಬರು ಮಾಡಿರುವ ಕಾಮೆಂಟ್)'.

ಗಾದರೆ ಈ ನಂದಿ ಎನ್ನುವ ಮಹಾಶಯರು ೋತ್ತಮರೆಲ್ಲರೂ ಇಷ್ಟೆಲ್ಲ ಶ್ಲಾಘಿಸುವ, ಟವನ್ನೇನೋ ಕೊಟ್ಟಿರಲೇಬೇಕು ಎಂಬ ನಕ್ಕೆ ನಾವು ಬಂದು ಬಿಡಬೇಕಾ? ಅಂತಹ ಾದರೂ ತೀರ್ಮಾನಕ್ಕೆ ಬರುವ ಮುಂಚೆ ಆಶಿಷ್ ವರು ಮೊದಲು ಜೈಪುರದಲ್ಲಿ, ನಂತರ ವಿಯಲ್ಲಿ, ಆ ನಂತರ ಸುಪ್ರೀಂಕೋರ್ಟ್‌ಗೆ ಕೇಸು ಮುನ್ನ ಹಾಗೂ ನಂತರ ಹೇಳಿದ ಮಾತುಗಳನ್ನು ಕೇಳಿಬಿಟ್ಟರೆ ಒಳಿತು. ಹಾಗೆನ್ನಿಸಿ ಅಂತರ್ಜಾಲದಲ್ಲಿ ವ ಎಲ್ಲಾ ವಿಡಿಯೋಗಳನ್ನು ಖುದ್ದಾಗಿ ನೋಡಿದರೆ ಮಯ. ಅಕಟಕಟಾ ಇಷ್ಟೊಂದು ಸೂಕ್ಷ್ಮತೆಯ ಗಳನ್ನು ಅವರು ಹೇಳಿದ್ದು ಈ ಓಬಿಸಿ, ದಲಿತ, ಸಿಗಳಿಗೆ ಅರ್ಥವೇ ಆಗುತ್ತಿಲ್ಲವಲ್ಲಾ? ಭುತ್ವವನ್ನು ಮತ್ತಷ್ಟು ಪ್ರಜಾತಂತ್ರೀಕರಣಗೊಳಿಸುವ ವನ್ನು ಅವರು ಸೂತ್ರೀಕರಿಸಿದ್ದಾರೆ; ಈಗಾಗಲೇ ದೇ ಮಾರ್ಗೋಪಾಯದ ಮೂಲಕ ಗುತ್ತಿರುವ ದಮನಿತ ಸಮುದಾಯಗಳು ಮತ್ತಷ್ಟು ರಣಗೊಳ್ಳಲು ಬೇಕಾದ ಅತ್ಯುತ್ತಮ ತಾತ್ವಿಕತೆಯನ್ನು ದ್ದಾರೆ. ಅಂತಹ ಹಿರಿಯ ಚಿಂತಕರ ಮೇಲೆಯೇ ದೌರ್ಜನ್ಯ ತಡೆ ಕಾಯ್ದೆಯೆಂಬ ಭಯಾನಕ ನಿಯನ್) ಕಾಯ್ದೆಯ ದುರ್ಬಳಕೆಯ ಮೂಲಕ ಹಾಕಲು ಹೊರಟಿದ್ದಾರಲ್ಲಾ ಎಂದು ಣವಾಗದೇ ಇರದು.

ಷ್ಟ ಓಬಿಸಿ, ದಲಿತ, ಆದಿವಾಸಿಗಳು (ಮುಸ್ಲಿಮರನ್ನು ಬಿಟ್ಟು ಬಿಟ್ಟಿದ್ದಾರೆ) ಇಂಟರ್ನೆಟ್‌ನಲ್ಲಿ ನಂದಿಯವರ ಗಳನ್ನು ಕೇಳುವ ಸಾಧ್ಯತೆ ಇಲ್ಲವಾದ್ದರಿಂದ ಅದನ್ನು ಮೊದಲು ಇಲ್ಲಿ ಹೇಳಿಬಿಡುವುದೊಳಿತು. ಮೊದಲನೆಯದಾಗಿ, ಜೈಪುರ ಸಾಹಿತ್ಯ ಸಮ್ಮೇಳನದಲ್ಲಿ ಯಾವ ಸಂದೇಹಕ್ಕೂ ಆಸ್ಪದವಿಲ್ಲದಂತೆ ನಂದಿ ಒಂದು ಮಾತನ್ನು ಹೇಳಿದ್ದಾರೆ. 'ಭ್ರಷ್ಟರಲ್ಲಿ ಹೆಚ್ಚಿನವರು ಓಬಿಸಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟುಗಳಿಂದಲೇ ಬಂದಿದ್ದಾರೆನ್ನುವುದು ವಾಸ್ತವ ಸತ್ಯ'. ಇದನ್ನು ಮುಂದುವರೆಸಿ, 'ಅತ್ಯಂತ ಕಡಿಮೆ ಭ್ರಷ್ಟತೆ ಇರುವ ರಾಜ್ಯಗಳಲ್ಲಿ ಒಂದಾದ ಪಶ್ಚಿಮ ಬಂಗಾಳದ ಉದಾಹರಣೆಯನ್ನು ನಿಮಗೆ ಕೊಡುತ್ತೇನೆ. (ಅಂದರೆ ಅದಕ್ಕೇನು ಕಾರಣವೆಂದರೆ) ಕಳೆದ 100 ವರ್ಷಗಳಲ್ಲಿ ಆ ರಾಜ್ಯದಲ್ಲಿ ಓಬಿಸಿ, ಪರಿಶಿಷ್ಟ ಜಾತಿ ಮತ್ತು ಬುಡಕಟ್ಟುಗಳು ಅಧಿಕಾರದ ಹತ್ತಿರಕ್ಕೂ ಬರಲು ಸಾಧ್ಯವಾಗಿಲ್ಲ, ಅದು ಸಂಪೂರ್ಣವಾಗಿ ಶುದ್ಧ - ಭ್ರಷ್ಟಾಚಾರ ಮುಕ್ತ - ರಾಜ್ಯವಾಗಿದೆ'. ಇದನ್ನು ತಾನು ಅಕಸ್ಮಾತ್ತಾಗಿ ಹೇಳಿದ್ದಲ್ಲವೆಂದೂ, ತನ್ನ ಮನಸ್ಸಿನೊಳಗೆ ಇದ್ದ ಮಾತೇ ಹೊರಬಂದಿತೆಂದು ನಂತರ ಎನ್‌ಡಿಟಿವಿಗೆ ನೀಡಿದ ಸಂದರ್ಶನದಲ್ಲೂ ಸ್ಪಷ್ಟಪಡಿಸಿದ್ದಾರೆ.



ಈ ಮಾತನ್ನೂ ತಾನು ಹೇಳಿಲ್ಲವೆಂದು ಆ ನಂತರದ ದಿನಗಳಲ್ಲಿ ನಂದಿ ಸ್ಪಷ್ಟೀಕರಣ ನೀಡಲು ತಡಕಾಡಿದ್ದಾರೆ. ಆದರೆ ಇದನ್ನು ನಿರಾಕರಿಸಲು ಸಾಧ್ಯವಾಗದಷ್ಟು ಸ್ಪಷ್ಟವಾಗಿ ನಂದಿ ಹೇಳಿದ್ದು ನಿಜ. ಅದರ ಬಗ್ಗೆ ಕೊನೆಯಲ್ಲಿ ಚರ್ಚಿಸೋಣ.

ದಾರ್ಶನಿಕರು ಹೇಳಿದ ಮಾತುಗಳಿಗೆ, ಸ್ವತಃ ಅವರೂ ಮತ್ತು ನಂದಿವಾದಿಗಳೂ ಎರಡು ರೀತಿಯ ವ್ಯಾಖ್ಯಾನ ನೀಡಿದ್ದಾರೆ. ಒಂದು, ತೇಪೆದಾರಿಕೆಯ ವ್ಯಾಖ್ಯಾನ. ಇನ್ನೊಂದು ಪಾಮರರಿಗೆ ಅಷ್ಟು ಸುಲಭವಾಗಿ ದಕ್ಕದ ಸೂಕ್ಷ್ಮ ಒಳನೋಟಗಳ ವ್ಯಾಖ್ಯಾನ. ಮೊದಲನೆಯದ್ದು ಹೆಚ್ಚು ಜನ ಭ್ರಷ್ಟರು ದಮನಿತ ಸಮುದಾಯಗಳವರು




ಎಂದು ಹೇಳಿದ್ದಲ್ಲ; ಸಿಕ್ಕಿ ಹಾಕಿಕೊಳ್ಳುವವರಲ್ಲಿ ಹೆಚ್ಚಿನವರು ಭ್ರಷ್ಟರು ಅಂತ ಅಷ್ಟೇ ನಂದಿ ಹೇಳಿದ್ದು ಎಂದವರು ಹೇಳುತ್ತಿದ್ದಾರೆ. ಈ ಸ್ಪಷ್ಟೀಕರಣವನ್ನು ಅವರು ನಿಲ್ಲಿಸಬೇಕು.

ಏಕೆಂದರೆ ನಂತರದ ಎನ್‌ಡಿಟಿವಿ ಸಂದರ್ಶನದಲ್ಲಿ 'ಅದು ನಾಲಿಗೆ ತಪ್ಪಾಗಿ ಹೇಳಿದ್ದಲ್ಲ, (ಆಕ್ಸಿಡೆಂಟ್ ಸ್ಲಿಪ್ ಅಲ್ಲ, ಫ್ರಾಯ್ಡಿಯನ್ ಸ್ಲಿಪ್) ಮನಸ್ಸಿನೊಳಗೆ ಇದ್ದದ್ದು ಅಕಸ್ಮಾತ್ತಾಗಿ ಹೊರಬಂತು ಅಷ್ಟೇ' ಎಂದು ಸ್ವತಃ ನಂದಿ ಹೇಳಿದ್ದಾರೆ.

ಈಗ ಸೂಕ್ಷ್ಮವಾದ, ವಿಶಿಷ್ಟವಾದ, ನಂದಿಯವರಿಗೆ ಮಾತ್ರ ಸಾಧ್ಯವಾಗಬಹುದಾದ ವ್ಯಾಖ್ಯಾನಕ್ಕೆ ಬರೋಣ. ಅದೇನೆಂದರೆ 'ಭ್ರಷ್ಟರಲ್ಲಿ ಹೆಚ್ಚಿನವರು ಓಬಿಸಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟುಗಳಿಂದಲೇ ಬಂದಿದ್ದಾರೆನ್ನುವುದು ವಾಸ್ತವ ಸತ್ಯ' ಎಂದು ಉಲಿದ ನಂತರ ಪಶ್ಚಿಮ ಬಂಗಾಳದ ಉದಾಹರಣೆಗೆ ಮುಂಚೆ ನಂದಿ ಹೇಳಿದ್ದ ದಿವ್ಯ ವಾಕ್ಯದಿಂದ ವಿಸ್ತರಿಸಬಹುದಾದದ್ದು 'ಇಲ್ಲಿಯವರೆಗೆ ಈ ರೀತಿ ಭ್ರಷ್ಟಾಚಾರ ಇರುತ್ತದೋ, ಅಲ್ಲಿಯವರೆಗೆ ಭಾರತದ ಗಣರಾಜ್ಯ ಉಳಿದುಕೊಳ್ಳುತ್ತದೆ.'

ಈ ಇಡೀ ಮಾತುಕತೆ ಶುರುವಾಗಲು ಕಾರಣವಾದದ್ದು ನಂದಿಯವರಿಗಿಂತ ಮುಂಚೆ ಸಂವಾದದಲ್ಲಿ ಪಾಲ್ಗೊಂಡಿದ್ದ ತರುಣ್ ತೇಜ್‌ಪಾಲ್ ಎಂಬ ತೆಹೆಲ್ಕಾ ಪತ್ರಿಕೆಯ ಸಂಪಾದಕನ ಮಾತಿನಿಂದ. ತನ್ನ ತೆಹೆಲ್ಕಾ ವೆಬ್‌ಸೈಟ್‌ನ ಕುಟುಕು ಕಾರ್ಯಾಚರಣೆಗಳ ಮುಖಾಂತರ ಕುತೂಹಲ ಮೂಡಿಸಿದ್ದ ತೇಜ್‌ಪಾಲ್, ನಂತರ ಹಣ ಸಂಪಾದನೆಯ ವಿಶಿಷ್ಟ ಮಾರ್ಗಗಳನ್ನು ಕಂಡುಕೊಂಡು ನಿರಾಸೆ ಮೂಡಿಸಿದ ವ್ಯಕ್ತಿ. ತೇಜ್‌ಪಾಲ್ ಹೇಳಿದ್ದು 'ಭ್ರಷ್ಟಾಚಾರವೆನ್ನುವುದು ಸಮಾನತೆ ತರಲು ಸಹಾಯ ಮಾಡುತ್ತಿರುವ ಸಾಧನವಾಗಿದೆ. ಈಗಾಗಲೇ ಸಾಕಷ್ಟು ಸಂಪತ್ತು ಹೊಂದಿಲ್ಲದ ವರ್ಗಗಳು ವ್ಯವಸ್ಥೆಯ ಚೌಕಟ್ಟನ್ನು ಮುರಿದು ಭ್ರಷ್ಟಾಚಾರದ ಮೂಲಕ ತಮಗೆ ಬೇಕಾದ್ದನ್ನು ಪಡೆದುಕೊಳ್ಳುತ್ತಿವೆ. ಆ ಮೂಲಕ ಭ್ರಷ್ಟಾಚಾರವು ಸಮತೋಲನ ಕಾಪಾಡಿಕೊಳ್ಳಲು ನೆರವು ನೀಡುತ್ತಿದೆ'. ತಾನು ಎಷ್ಟು ಸಂಪಾದಿಸಬೇಕಿತ್ತೋ, ಅಷ್ಟನ್ನು ಸಂಪಾದಿಸಲು 'ಮೇಲುನೋಟಕ್ಕೆ ಭ್ರಷ್ಟಾಚಾರ ಎಂದು ಕರೆಯಲಾಗದ' ಮಾರ್ಗಗಳಿಂದ ಹಣ ಮಾಡಿರುವ ತೇಜ್‌ಪಾಲ್ ಇದನ್ನು ಹೇಳಿದರು.



ಕೂಡಲೇ ಮೈಕ್ ತೆಗೆದುಕೊಂಡ ಆಶಿಷ್ ನಂದಿ ತಾನು ಹೇಳಬೇಕಾದ್ದನ್ನು ಹೇಳಿದರು. ಈ ನೆಲೆಯಲ್ಲಿ ಅವರು ನಂತರವೂ ವಿವರಿಸುತ್ತಿರುವುದು, 'ಭ್ರಷ್ಟಾಚಾರವೆನ್ನುವುದು ಸಮಾನತೆಯ ಸಾಧನವಾಗಿದೆ'. ಎಂಬುದನ್ನೇ. ಅದಕ್ಕೆ ಅವರು ಜಾರ್ಖಂಡ್‌ನ ಮಾಜಿ ಮುಖ್ಯಮಂತ್ರಿ, ಆದಿವಾಸಿ ಹಿನ್ನೆಲೆಯ ಮಧು ಕೋಡಾರನ್ನೂ ಉದಾಹರಿಸುತ್ತಿದ್ದಾರೆ.

ಮೊದಲನೆಯದಾಗಿ, ಈ ದಾರ್ಶನಿಕ ಚಿಂತಕರು ಭ್ರಷ್ಟಾಚಾರಿಗಳಲ್ಲಿ ಹೆಚ್ಚಿನವರು ಓಬಿಸಿ, ದಲಿತರೆಂದು — ಸಂಖ್ಯೆಯಲ್ಲಿ ಮತ್ತು ಪ್ರಮಾಣದಲ್ಲಿ - ತೀರ್ಮಾನಕ್ಕೆ ಬರಲು ಯಾವ ಸರ್ವೇ ನಡೆಸಿದ್ದಾರೋ ನಮಗೆ ತಿಳಿದು ಬಂದಿಲ್ಲ. ಎನ್‌ಡಿಟಿವಿ ಸಂದರ್ಶನದಲ್ಲಿ ಅದಕ್ಕೂ ಅವರದೊಂದು ಉತ್ತರವಿತ್ತು. 'ನೀವು ಹಾಗೆ ಕೇಳಿದರೆ ನನ್ನಲ್ಲಿ ಡಾಟಾ ಇಲ್ಲ, ಆದರೆ ನನ್ನ ಅಭಿಪ್ರಾಯದಲ್ಲಿ ನೀವು ರೈಲಿನಲ್ಲಿ ಟಿಕೆಟ್ ಇಲ್ಲದೇ ಪ್ರಯಾಣ ಮಾಡುವ ವ್ಯಕ್ತಿಗಳನ್ನು ಲೆಕ್ಕ ಮಾಡಿ ನೋಡಿದರೆ, ನನ್ನ ಅಭಿಪ್ರಾಯ ಸರಿಯೆಂದು ಸಾಬೀತಾಗುತ್ತದೆ' ಎಂದಿದ್ದಾರೆ ನಂದಿ. ಹೇಗಿದೆ ನೋಡಿ ನಂದಿಯ ಭ್ರಷ್ಟಾಚಾರವನ್ನು ಅಳೆಯುವ ಮಾಪನಗಳು! ಓಬಿಸಿ, ದಲಿತರು, ಆದಿವಾಸಿಗಳು ಅಧಿಕಾರದ ಸ್ಥಾನಗಳಲ್ಲಿ ಕೂರಲು ಆರಂಭಿಸುತ್ತಿರುವುದೇ ಕಳೆದ 2-3 ದಶಕಗಳಲ್ಲಿ. ಈ 3 ದಶಕಗಳ ಈ ದೇಶದ ಅತ್ಯಂತ ದೊಡ್ಡ ಹಗರಣಗಳನ್ನು ಪಟ್ಟಿ ಮಾಡಿ ನೋಡಿದರೂ, ಅದರಲ್ಲಿ ಸಂಖ್ಯೆಯಲ್ಲಿ ಮತ್ತು ಪ್ರಮಾಣದಲ್ಲಿ ಈ ಸಮುದಾಯಗಳು 'ತಮ್ಮ ಜನಸಂಖ್ಯೆಗನುಗುಣವಾದ' ಸ್ಥಾನವನ್ನೇನೂ ಪಡೆದಿಲ್ಲ. ಭಾರೀ ದೊಡ್ಡ ಹಗರಣಗಳಲ್ಲಿ ದಲಿತ, ಆದಿವಾಸಿ ಜಾತಿಗಳಿಗೆ ಸೇರಿದ ತಿಮಿಂಗಿಲಗಳು ಕೆಲವರಿದ್ದಾರಾದರೂ, ಮೇಲ್ಜಾತಿಗಳದ್ದು ಮೇಲುಗೈ ಇನ್ನೂ ಇದೆ.

ಆಯಿತು, ತೇಜ್‌ಪಾಲ್ ಮತ್ತು ನಂದಿಯವರ ಪ್ರಕಾರ ಅವರು ಈ ಸಮುದಾಯಗಳ ಪರವಾಗಿಯೇ ವಕಾಲತ್ತು ವಹಿಸಿದ್ದಾರೆಂದೇ ಭಾವಿಸೋಣ. ಅಂದರೆ ಸಮಾನತೆಯನ್ನು ಸಾಧಿಸಲಿಕ್ಕೆ, ದಮನಿತ ಸಮುದಾಯಗಳು ಸಬಲರಾಗಲಿಕ್ಕೆ ಇವರೀರ್ವರ ಪ್ರಕಾರ ಪ್ರಜಾತಂತ್ರದಲ್ಲಿ ಭ್ರಷ್ಟಾಚಾರವನ್ನು ಒಂದು ಸಾಧನ ಮಾಡಿಕೊಳ್ಳಬಹುದು, ಮಾಡಿಕೊಳ್ಳುತ್ತಿದ್ದಾರೆ ಎಂದಾಯಿತು. ಈ ರೀತಿಯ ಭ್ರಷ್ಟಾಚಾರದಿಂದ ದಮನಿತ ಸಮುದಾಯಗಳಲ್ಲಿನ ಶೇಕಡಾವಾರು ಎಷ್ಟು ಪ್ರಮಾಣದ ಜನ ಆರ್ಥಿಕವಾಗಿ ಬಲಾಢ್ಯರಾಗುತ್ತಿದ್ದಾರೆ? ಶೇ.0.5, ಶೇ.1, ಎಷ್ಟೇ ಹಿಗ್ಗಿಸಿದರೂ ಅದು ಶೇ.3ನ್ನು ದಾಟಲಾರದು. ಅದನ್ನು ಶೇ.50-60 ಮಾಡಲೆಂದೇ ನಂದಿ, ಟ್ರೈನ್‌ನಲ್ಲಿ ಟಿಕೆಟ್ಟಿಲ್ಲದೇ ಪ್ರಯಾಣ ಮಾಡುವಂತಹ ಮಹಾನ್ ಭ್ರಷ್ಟಾಚಾರಿಗಳನ್ನೂ ಸೇರಿಸಿದ್ದಾರೆನಿಸುತ್ತದೆ. ಆಗಲೂ ಅದು ಶೇ.50ನ್ನು ಮುಟ್ಟಲು ಸಾಧ್ಯವಿಲ್ಲ. ಅದಕ್ಕೂ ಮುಂಚೆ, ತಮ್ಮ ಭ್ರಷ್ಟಾಚಾರದ ಮಾಪಕಗಳನ್ನು ಯಾವ ಪಾರಂಪರಿಕ ಕಮ್ಮಾರಶಾಲೆಗಳಲ್ಲಿ ಅಥವಾ ನಿಗೂಢ ಪಾಶ್ಚಾತ್ಯ ಫಂಡಿಂಗ್ ಏಜೆನ್ಸಿಗಳ ಥಿಂಕ್ ಟ್ಯಾಂಕ್‌ಗಳಲ್ಲಿ ಸಾಣೆಯಿಡಿಸಿಕೊಂಡು ಬಂದಿದ್ದೀರಿ ಎಂಬ ಪ್ರಶ್ನೆಯನ್ನಂತೂ ತರುಣ ಮತ್ತು ವೃದ್ಧ ಸಂತರಿಬ್ಬರನ್ನೂ ಕೇಳಲೇಬೇಕಾಗುತ್ತದೆ.

ಈ ದೇಶದ ದಮನಿತ ಸಮುದಾಯಗಳಿಗೆ ಮಧು ಕೋಡಾ, ಎ.ರಾಜಾಗಳ ಮಾದರಿಯನ್ನು ಇವರೀರ್ವರು ಮುಂದಿಡುತ್ತಿದ್ದಾರಾ? ಹಾಗಾದರೆ ಪರಿಪೂರ್ಣ ಪ್ರಜಾಪ್ರಭುತ್ವವೆಂಬುದು ಒಂದು ಯುಟೋಪಿಯಾ ಎನ್ನುವ ತಮ್ಮ ಆತ್ಯಂತಿಕ ಸತ್ಯದ ಸಮರ್ಥನೆಗಾಗಿ ಮತ್ತು ಅದು ಎಂದೂ ಎಷ್ಟರ ಮಟ್ಟಿಗಿನ ಪೂರ್ಣತೆಯ ಕಡೆಗೂ ಸಾಗಲಾರದು ಎಂಬ ಪ್ರತಿಪಾದನೆಗಾಗಿ ನಂದಿಗಳು ಇದನ್ನು ಹೇಳಿದ್ದಾರೆಯೇ ಎಂಬ ಅನುಮಾನವೂ ಕಾಡುತ್ತದೆ. ಭ್ರಷ್ಟರಾಗದೇ ನೀವು ಮೇಲೆ ಬರಲು ಸಾಧ್ಯವಿಲ್ಲ ಎಂಬ ಸಂದೇಶವನ್ನು ರವಾನಿಸುತ್ತಿರುವವರು ಆ ಮೂಲಕ ಮೇಲ್ಜಾತಿಗಳು ನಡೆಸುವ ಭ್ರಷ್ಟತೆಗೂ ಸಮರ್ಥನೆ ಹಾಗೂ ಮಾನ್ಯತೆಯನ್ನು ನೀಡುತ್ತಿದ್ದಾರೆ.


ಇವೆಲ್ಲದರ ಆಚೆಗೆ ಜಾತಿಯೆನ್ನುವುದು ಈ ದೇಶದಲ್ಲಿರುವ ಏಕೈಕ ಐಡೆಂಟಿಟಿಯೂ ಅಲ್ಲ; ಜಾತಿ ಜನ ಎನ್ನುವುದು ಒಂದು ಏಕರೂಪೀ ಸಮುದಾಯವೂ ಅಲ್ಲ. ಪ್ರತೀ ಜಾತಿಯೊಳಗೂ ಮೇಲ್ವರ್ಗ, ಮೇಲ್ಮಧ್ಯಮ ವರ್ಗಗಳು ಬೆಳವಣಿಗೆಯಾಗಿವೆ. ಆ ರೀತಿ ದಮನಿತ ಜಾತಿ ಮೂಲದ, ಮೇಲ್ವರ್ಗದ ಕೆಲವು ಮಂದಿ ಮಾಡುವ ಭ್ರಷ್ಟಾಚಾರದ ಕಾರಣಕ್ಕೆ ಇಡೀ ಸಮುದಾಯಗಳನ್ನೇ ಭ್ರಷ್ಟರು ಎನ್ನುವಂತೆ ಹೇಳಿಕೆ ನೀಡುವುದು ಇವರಿಗೆ ಹೇಗೆ ಸಾಧ್ಯವಾಯಿತು? ಇದು ಕೇವಲ ಬೇಜವಾಬ್ದಾರಿ ಹೇಳಿಕೆ ಅಲ್ಲ.

ವಾಸ್ತವದಲ್ಲಿ ಮೇಲ್ಜಾತಿಗಳ ಜನರ ಮನಸ್ಸಿನಲ್ಲಿ 'ಶೋಷಿತ ಜಾತಿಗಳವರು ಅಧಿಕಾರ ಸ್ಥಾನಗಳಲ್ಲಿ ಕೂತು ಸಿಕ್ಕಾಪಟ್ಟೆ ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ' ಎಂದು ಗಾಢವಾಗಿ ಕೂತಿರುವ ಅಭಿಪ್ರಾಯವೇ ಇವರೀರ್ವರಲ್ಲೂ ಒಂದು ಮಟ್ಟಿಗೆ ಇದೆ. ಅದಕ್ಕೆ ಒಂದು ತಾತ್ವಿಕ ಸೂತ್ರೀಕರಣ ನೀಡಲು ಮತ್ತು 'ವಿಶಿಷ್ಟವಾದದ್ದನ್ನು ಹೇಳುವ ಗೀಳಿನ ಭಾಗವಾಗಿಯೂ' ಇಂತಹ ಅಪೂರ್ವ ಸಂಶೋಧನೆಗಳನ್ನು ಮುಂದಿಡುತ್ತಿದ್ದಾರೆ.

ಮಾರ್ಕ್ಸ್‌ವಾದದ ವಿರೋಧಿಗಳೂ, ಮಾರ್ಕ್ಸ್‌ವಾದಿಗಳಾಗಿದ್ದೂ 'ನಾವು ಏಕಮುಖೀ ಚಿಂತನೆಯವರೆಂದು ಬುದ್ಧಿಜೀವಿ, ಅಕ್ಯಾಡೆಮಿಕ್ ವಲಯ ಭಾವಿಸಿಬಿಡುತ್ತದೆ' ಎಂದು ಡಿಫೆನ್ಸಿವ್ ಮಾರ್ಕ್ಸ್‌ವಾದಿಗಳಾಗಿರುವವರೂ ಆಶಿಷ್ ನಂದಿಯಂಥವರನ್ನು ಮೇಲೆತ್ತಿ ಕೂರಿಸಿಕೊಂಡಿದ್ದು ನಿಜ. ಕೆಲವು ಏಕಮುಖಿ, ಒಣ ಹಾಗೂ ಜಡ ಕಮ್ಯುನಿಸ್ಟರು ಮಾಡಿದ ತಪ್ಪುಗಳಿಂದ ನಂದಿಯಂಥವರ ವಾದಗಳಿಗೆ ಪುಷ್ಟಿ ಸಿಕ್ಕಿದ್ದೂ ನಿಜ. ಆದರೆ ನಂದಿ ಬ್ರಾಂಡ್‌ನ ಚಿಂತನೆಯ ಕುರಿತು ಮಾರ್ಕ್ಸ್‌ವಾದಿಗಳು ಆರಂಭದಿಂದಲೂ ಮಾಡಿಕೊಂಡು ಬಂದ ವಿಶ್ಲೇಷಣೆಯು ಸರಿಯಾದ ದಿಕ್ಕಿನಲ್ಲಿತ್ತು ಎಂಬುದನ್ನು ಜೈಪುರದ ಸಂವಾದ ತೋರಿಸಿದೆ.

ಕರ್ನಾಟಕದಲ್ಲಿ ಇಂತಹುದೇ 'ವಿಶಿಷ್ಟ' ಚಿಂತನೆಗಳನ್ನು ಸಂಸ್ಕೃತಿ ಶಿಬಿರಗಳಲ್ಲಿ ಪ್ರಸ್ತುತಪಡಿಸಿ ಈಗ ರಾಷ್ಟ್ರೋತ್ಥಾನ ಬಳಗದಲ್ಲಿ ಪ್ರತಿಷ್ಠಾಪಿತವಾಗಿರುವ ಬಾಲಗಂಗಾಧರನೆಂಬ ಮತ್ತೊಬ್ಬ ಚಿಂತಕನಷ್ಟು ದೂರಕ್ಕೆ ನಂದಿ ಹೋಗದೇ ಇರಬಹುದು. ಆದರೆ ಪಾರಂಪರಿಕ ಸೊಗಡಿನೊಂದಿಗೆ ಆಧುನಿಕ ಸಂದರ್ಭದ ಬಲ ಪುನರುತ್ಥಾನವಾದಕ್ಕೆ ಬೇಕಾದ ತಾತ್ವಿಕ ತಳಹದಿ ರೂಪಿಸಲು ತಮ್ಮ ಪಾಲನ್ನು ನೀಡುವುದರಲ್ಲಿ ಸಂಶಯವಿಲ್ಲ.

ಇವೆಲ್ಲದರ ಆಚೆಗೆ ನಂದಿ ಏನು ಹೇಳಿದ್ದಾರೋ ಅದಕ್ಕೆ ಅವರ ವಿರುದ್ಧ ಎಫ್‌ಐಆರ್ ದಾಖಲಿಸುವುದು, ಜಾತಿ ದೌರ್ಜನ್ಯದ ಕೇಸು ಮಾಡುವುದು ಪರಿಹಾರವಲ್ಲ; ಆದರೆ ನಂದಿಯಂಥವರ ವಾದಗಳನ್ನು ಬಹಳ ಪ್ರಬಲವಾಗಿ ಮುಖಾಮುಖಿಯಾಗುವುದು ಅಗತ್ಯ ಮತ್ತು ಅನಿವಾರ್ಯ.



ಕರ್ನಾಟಕ ಕೋಮು ಸೌಹಾರ್ದ ವೇದಿಕೆಯ ಉಡುಪಿ ಜಿಲ್ಲಾ ಘಟಕವು ಪ್ರತಿ ವರ್ಷ ಜನವರಿ 30ರಂದು 'ಗಾಂಧಿ ಸ್ಮ... ಕಾರ್ಯಕ್ರಮವನ್ನು ಆಚರಿಸುತ್ತದೆ. ಈ ಕಾರ್ಯಕ್ರಮವು ಗಾಂಧೀಜಿಯವರ ಕೊಲೆಗೆ ಕಾರಣವಾದ ರಾಜಕೀಯವನ್ನು... ಅದಕ್ಕೆ ಸಹಮತ ಸೂಚಿಸಿದ ಸಾಮಾಜಿಕ ಮನೋಸ್ಥಿತಿಗಳ ಮೇಲೆ ಬೆಳಕು ಚೆಲ್ಲುವ, ಇಂದಿನವರೆಗೂ ಯಾವ ಬಗೆಯ... ಆ ರಾಜಕೀಯ ಹಾಗು ಸಾಮಾಜಿಕ ಮನೋಸ್ಥಿತಿಗಳು ಜೀವಂತವಾಗಿದ್ದು ಮತೀಯ ವಿದ್ವೇಷಕ್ಕೆ ಕಾರಣವಾಗುತ್ತಿವೆ ಎಂಬ... ಸಂಗತಿಯನ್ನು ನಾಗರಿಕ ಪ್ರಜ್ಞೆಯಲ್ಲಿ ಜಾಗೂರೂಕವಾಗಿಡುವ ಉದ್ದೇಶದಿಂದ ಆಯೋಜಿಸಲಾಗುತ್ತದೆ. ಈ ದೃಷ್ಟಿಯಿಂದ... ಪ್ರತಿವರ್ಷವೂ ಭಿನ್ನ ಬಗೆಯ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ. ಈ ವರ್ಷ, ಅಪ್ರತಿಮ ಕತೆಗಾರ ಸಾದತ್... ಹಸನ್ ಮಾಂಟೊನ ನೂರನೇ ಹುಟ್ಟುಹಬ್ಬದ ನೆನಕೆ ಕಾರ್ಯಕ್ರಮ 'ಸಲಾಂ ಮಾಂಟೊ'ವನ್ನು ಆಯೋಜಿಸಲಾಗಿತ್ತು... ಕಾರ್ಯಕ್ರಮದಲ್ಲಿ ಸಾದತ್ ಹಸನ್ ಮಾಂಟೊನ ಮೂರು ಕತೆಗಳ 'ರಂಗವಾಚಿಕೆ'ಯನ್ನು ಪ್ರತಿಭಾವಂತ ನಿರ್ದೇಶಕ... ಶ್ರೀಪಾದ ಭಟ್ ವಿನ್ಯಾಸಗೊಳಿಸಿ, ನಿರ್ದೇಶಿಸಿದ್ದಾರೆ. ಮಾಂಟೊನ ಮೂರು ಕತೆಗಳನ್ನು -ತೋಬತೇಕ್ ಸಿಂಗ್, ತಂ... ಗೋಷ್ತ್ ಮತ್ತು ಹಾತಕ್- ರಂಗವಾಚಿಕೆಗೆ ಅಳವಡಿಸಿಕೊಳ್ಳಲಾಯಿತು. 'ಸಲಾಂ ಮಾಂಟೊ' ಎಂಬ ಶೀರ್ಷಿಕೆಯ... ಪ್ರಸ್ತುತಪಡಿಸಲಾದ ಈ ಕಾರ್ಯಕ್ರಮಕ್ಕಾಗಿ ಅನುವಾದಿಸಿದ 'ಹಾತಕ್'ನ ಕನ್ನಡ ಅನುವಾದ 'ಸೌಗಂಧಿ' ಇಲ್ಲಿವೆ.



ಸೌಗಂಧಿ

ಸಾದತ್ ಹಸನ್ ಮಾಂಟೋ

ಅನುವಾದ: ಕೆ.ಫಣಿರಾಜ್

ದಿನಪೂರ್ತಿ ಕಸುಬಿನಿಂದ ಸುಸ್ತಾಗಿದ್ದವಳಿಗೆ ಹಾಸಿಗೆಗೆ ತಲೆ ಇಟ್ಟೊಡನೆ ನಿದ್ದೆ ಹತ್ತಿತ್ತು, ಇವಳು ಸೇಠ್ ಎಂದೇ ಕರೆಯುವ, ಕುಡಿದು ಟೈಟಾಗಿದ್ದ ನಗರ ಸಭೆಯ ಆರೋಗ್ಯಾಧಿಕಾರಿ ಈಗಷ್ಟೇ ಇವಳ ಮಗ್ಗುಲ ಬಿಟ್ಟು ಮನೆಗೆ ಹೋಗಿದ್ದ. ಆತ, ಎಂದಿನಂತೆ, ಇವಳ ಎಲುಬು ನಜ್ಜುಗುಜ್ಜಾಗುವ ಹಾಗೆ ಭೋಗಿಸಿ ಹೋಗಿದ್ದ. ತನ್ನನ್ನು ಹೆಂಡತಿ ಅತಿಯಾಗಿ ಹಚ್ಚಿಕೊಂಡಿದ್ದಾಳೆ ಎಂದು ಅವನೇ ಹೇಳುತ್ತಿದ್ದ; ಅವಳ ನೆನಪೊಂದು ಬರದಿದ್ದಲ್ಲಿ ಆತ ಇವಳ ಪಕ್ಕವೇ ಮಲಗಿರುತ್ತಿದ್ದ.

ಅವಳ ಅಂದು ದುಡಿದಿದ್ದ ಬೆಳ್ಳಿ ನಾಣ್ಯಗಳನ್ನು ತನ್ನ ಬಾಡಿಯಡಿ ಭದ್ರವಾಗಿ ತೂರಿಸಿಟ್ಟುಕೊಂಡಿದ್ದಳು. ಎದೆ ಮೇಲೆ ಆರೋಗ್ಯಾಧಿಕಾರಿಯ ಮುತ್ತಿನ ಎಂಜಲ ಹಸಿ ಇನ್ನೂ ಹಾಗೆ ಉಳಿದಿತ್ತು. ನಿದ್ರೆಯಲ್ಲಿ ನೀಳ ಉಸಿರಾಡುವಾಗ ಬಾಡಿಯಡಿ ಹುದುಗಿಸಿಕೊಂಡಿದ್ದ ನಾಣ್ಯಗಳು ಕಿಣಿಕಿಣಿ ಎಂದು ಶಬ್ದ ಮಾಡುತ್ತಿದ್ದವು.

ಮೊದಲು ಕುಡಿದ ಒಂದು ಕ್ವಾರ್ಟರ್ ಬ್ರಾಂದಿ, ಅದು ಖಾಲಿಯಾದ ನಂತರ ನಲ್ಲಿ ನೀರನ್ನು ಬೆರೆಸಿಕೊಂಡು ಕುಡಿದ ಕಳ್ಳಭಟ್ಟಿಯಿಂದಾಗಿ ಅವಳ ಎದೆ ಉರಿಯುತ್ತಿತ್ತು.

ಅವಳು ಅಗಲವಾದ ಕಟ್ಟಿಗೆ ಮಂಚದ ಮೇಲೆ ಬೋರಲಾಗಿ ಮಲಗಿದ್ದಳು. ದೇಹದ ಎರಡು ಬದಿ ಚಾಚಿದ್ದ ಅವಳ ಬೆತ್ತಲೆ ತೋಳುಗಳು ಪೇಪರು ಕಿತ್ತಿ ಹೋದ ಗಾಳಿಪಟದ ಹಂದರದಂತೆ ತೋರುತ್ತಿತ್ತು.

ಅದೊಂದು ಪುಟ್ಟ ಕೋಣೆ. ಅವಳ ಸಾಮಾನುಗಳು ಎಲ್ಲಾ ಕಡೆ ಚೆಲ್ಲಾಪಿಲ್ಲಿಯಾಗಿ ಹರಡಿಕೊಂಡಿದ್ದವು. ಸವೆದುಹೋದ ಮೂರ್ನಾಲ್ಕು ಜೊತೆ ಮೆಟ್ಟುಗಳು ಮಂಚದಡಿ ಬಿದ್ದುಕೊಂಡಿದ್ದವು; ಅವುಗಳ ಮೇಲೆ ತಲೆ ಇಟ್ಟು ನಾಯಿಯೊಂದು ಮಲಗಿತ್ತು. ಹರಕು ಬಣ್ಣಗಳ ಚರ್ಮದ ಆ ನಾಯಿ ದೂರದಿಂದ ಕಿತ್ತುಹೋದ ಕಾಲೊರೆಸುವ ಗೋಣಿ ತಟ್ಟಿನ ಹಾಗೆ ಕಾಣುತ್ತ ಇತ್ತು.

ಅವಳ ಶೃಂಗಾರ ಸಾಧನಗಳಾದ ಪೌಡರು, ಲಿಪ್‌ಸ್ಟಿಕ್ಕು, ಕೆನ್ನೆಗೆ ಹಚ್ಚೋ ಕೆಂಬಣ್ಣ, ಬಾಚಣಿಗೆ, ಹೇರ್‌ಪಿನ್ನುಗಳು ಪುಟ್ಟ ಕಪಾಟಿನ ತುಂಬ ಹರಡಿಕೊಂಡಿದ್ದವು.

ಹಸಿರು ಗಿಳಿ ಇದ್ದ ಪಂಜರವು ಸೂರಿನಿಂದ ಜೋತಾಡುತ್ತಿತ್ತು, ಕೊಕ್ಕನ್ನು ರೆಕ್ಕೆಗಳಡಿ ತೂರಿಸಿ ಗಿಳಿ ಮಲಗಿತ್ತು, ಪಂಜರದ ತುಂಬಾ ನೊಣ, ಸೊಳ್ಳೆಗಳು ಮುತ್ತಿಕೊಂಡ ಪೇರಳೆ ಕಾಯಿ ತುಂಡು, ಕಿತ್ತಳೆ ತೊಳೆಗಳು ಹರಡಿಕೊಂಡಿದ್ದವು.

ಮಂಚದ ಪಕ್ಕ, ತಲೆ ಒರಗುವಲ್ಲಿ ಕಪ್ಪುಗಟ್ಟಿದ್ದ ಒಂದು ಬೆತ್ತದ ಕುರ್ಚಿ ಇತ್ತು, ಅದರ ಪಕ್ಕ ಪುಟ್ಟ ಮೇಜಿನ ಮೇಲೆ ಹಳೆಯ ಹೆಚ್.ಎಂ.ವಿ. ಗ್ರಾಮಾಫೋನು ಇತ್ತು. ಗೋಡೆಯ ಮೇಲೆ ನಾಲ್ಕು ಫೋಟೋಗಳನ್ನು ತೂಗು ಹಾಕಲಾಗಿತ್ತು.

ಅದರಲ್ಲಿ ಒಂದು ಗಣಪತಿಯ ಫೋಟೊ. ಕಮಾಯಿಯ ನಾಣ್ಯಗಳನ್ನು ಸಿಕ್ಕಕ್ಷಣವೇ ಗಣಪತಿಯ ಫೋಟೊಕ್ಕೆ ಉಜ್ಜಿ ಬಾಡಿಯೊಳಗೆ ಜಾರಿಸುವುದು ಅವಳ ಅಭ್ಯಾಸ; ಹಾಗೆ ಮಾಡೋದರಿಂದ ಅದೃಷ್ಟ ಕುಲಾಯಿಸುತ್ತದೆ ಅನ್ನೋದು ಅವಳ ನಂಬಿಕೆ. ಆದರೆ, ಪೂನಾದಿಂದ ಮಧು ಬರುವವನಿದ್ದರೆ, ಅವಳು ಎಲ್ಲಾ ಕಾಸನ್ನೂ ಹಾಸಿಗೆಯಡಿ ಬಚ್ಚಿಡುತ್ತಿದ್ದಳು. ಪ್ರತಿ ಸಾರಿ ಬಂದಾಗಲೂ ಇವಳ ಕಮಾಯಿಯನ್ನೆಲ್ಲ ಮಧು ಕೊಳ್ಳೆ ಹೊಡೆದುಕೊಂಡು ಹೋಗುತ್ತಾನೆಂದು ಬಲ್ಲ ರಾಮಲಾಲ್, ಹೀಗೆ ಕಾಸು ಬಚ್ಚಿಡುವ ಉಪಾಯವನ್ನು ಅವಳಿಗೆ ಅರುಹಿದ್ದ. ಒಂದು ಸಾರಿ ರಾಮಲಾಲ್ ಅವಳಿಗೆ ಹೇಳಿದ್ದ – "ಈ ಬೋಳಿಮಗ ಎಲ್ಲಿ ಸಿಕ್ಕ ನಿಂಗೆ? ಎಂಥ ಪ್ರೇಮಿ ನಿನಗವನು? ವಾರ ವಾರ ಬರ್ತಾನೆ, ಪುಕ್ಕಸಟ್ಟೆ ನಿನ್ನನ್ನು ಭೋಗಿಸಿ ಹೋಗ್ತಾನೆ. ಅದೂ ಸಾಲದೇ ನೀನು ಕಷ್ಟಪಟ್ಟು ಕಮಾಯಿಸಿದ್ದನ್ನು ಎತ್ಕೊಂಡು ಹೋಗ್ತಾನೆ. ಸೌಗಂಧಿ, ಅಂಥದ್ದೇನು ಕಂಡಿಯವ್ವ ಈ ಬೋಳಿಮಗನಲ್ಲಿ, ಇಷ್ಟು ಹಚ್ಚಿಕೊಂಡು ಬಿಟ್ಟೆ ಅವನನ್ನ? ಈ ತಲೆಹಿಡುಕ ದಂಧೆಯಲ್ಲಿ ಏಳು ವರ್ಷದಿಂದ ಇದ್ದೀನಿ. ನೀವೆಂಥ ಚೋಕ್ರಿಗಳು ಅಂತ ನಾನು ಚೆನ್ನಾಗೇ ಬಲ್ಲೆ, ಆದರೆ ಇದೊಂದು ಮಾತ್ರ ನಂಗೆ ನಿಜವಾಗ್ಲೂ ಅರ್ಥವಾಗ್ತಿಲ್ಲ ನೋಡವ್ವ."

ಮಜಾ ಮಾಡಲು ಹಾತೊರೆಯುವ ಗಂಡಸರನ್ನು ಗುರುತು ಹಚ್ಚಲು ರಾಮಲಾಲ್ ಬೀದಿ ಬೀದಿ ಅಲಾಯಿಸುತ್ತಿದ್ದ. ಅವನ ಸುಪರ್ದಿನಲ್ಲಿ ರಾತ್ರಿಯೊಂದಕ್ಕೆ ಹತ್ತು ರೂಪಾಯಿಂದ ಹಿಡಿದು ನೂರು ರೂಪಾಯಿಗಳವರೆಗಿನ ಬೆಲೆಬಾಳುವ ತರಹಾವರಿ ಹೆಂಗಸರಿದ್ದರು. ಅವನು ಅವಳಿಗೆ ಮತ್ತೊಂದು ಸಾರಿ ಹೇಳಿದ್ದ – "ಸೌಗಂಧಿ, ನನ್ನ ಮಾತು ಕೇಳು. ಇವನನ್ನು ನೆಚ್ಚಿಕೊಂಡು ನಿನ್ನ ವ್ಯಾಪಾರ ಹಾಳುಮಾಡಿಕೋ ಬೇಡ. ಹುಷಾರಿರು, ಯಾಮಾರಿಸಿ ನಿನ್ನ ಮೈಮೇಲಿನ ಬಟ್ಟೆಯನ್ನೂ ಕಿತ್ತುಕೊಂಡು ಹೋಗೋ ಕೇಡಿ ನನ್ಮಗ ಅವನು. ಕಾಸನ್ನು ಹಾಸಿಗೆಯಡಿ ಬಚ್ಚಿಡು. 'ನಿನ್ನ ಮೇಲೆ ಆಣೆ ಮಾಡಿ ಹೇಳ್ತೀನಿ, ನನ್ನ ಹತ್ರ ಒಂದು ಕಿಲುಬೂ ಕಾಸೂ ಇಲ್ಲ, ಇವತ್ತು ಊಟಕ್ಕೂ ಗತಿ ಇಲ್ಲದೆ ಹಸಿದುಕೊಂಡಿದೀನಿ. ಬೀದಿ ಆಚೆಯ ಇರಾನಿ ಹೋಟೆಲಿಂದ ತಿನ್ನೋಕೆ ಏನಾದ್ರು ತಿಂಡಿ, ಒಂದು ಕಪ್ಪು ಚಾ ತಂದು ಕೊಡ್ತೀಯ' ಅಂತ ಕೇಳು."

"ನೋಡು ರಾಣಿ ಇದು ಕೇಡುಗಾಲ. ಈ ಕಾಂಗ್ರೆಸ್ ಸರ್ಕಾರ ಬೋಳಿಮಗಂದು ಶರಾಬಿಗೆ ಬಹಿಷ್ಕಾರ ಹಾಕಿರೋದ್ರಿಂದ ಬಜಾರು ತಣ್ಣಾಗಾಗೋಗಿದೆ. ನಿಂಗೆ ಒಂದೆರಡು ತೊಟ್ಟು ಹೇಗಾದ್ರು ಸಿಗ್ತಾನೇ ಇರೊದ್ರಿಂದ ಹೊರಗಿನ ಕಷ್ಟ ನಿಂಗೆ ಗೊತ್ತಾಗಲ್ಲ, ದೇವರ ಮೇಲೆ ಆಣೆ ಮಾಡಿ ಹೇಳ್ತಿನಿ, ನಿನ್ನ ಕೋಣೆಯಲ್ಲಿ ಶರಾಬಿನ ಖಾಲಿ ಬಾಟ್ಲಿ ಕಂಡಾಗೆಲ್ಲ, ನನಾದ್ರೂ ನಿನ್ನ ಜಾಗದಲ್ಲಿ ಇರಬಾರದಿತ್ತ ಅಂತ ಕರುಬ್ತೀನಿ ಕಣೆ" ಅಂತಾನೆ ರಾಮಲಾಲ್.

ರಾಮ್‌ಲಾಲನಿಗೆ ಮಾತ್ರ ಏನು, ಸೌಗಂಧಿಗೂ ಇನ್ನೊಬ್ರಿಗೆ ಸಲಹೆ ಕೊಡೋದು ಇಷ್ಟ. ಅವಳು ತನ್ನ ಗೆಳತಿ ಜಮುನಾಗೆ ಒಂದು ಸಾರಿ ಹೇಳಿದ್ದಳು – "ನನ್ನ ಮಾತು ಕೇಳು. ಹತ್ತು ರೂಪಾಯಿ ಕೊಟ್ಟು ಗಂಡಸು ನಿನ್ನ ಕೋಳಿ ಮಾಂಸ ಜಗದಂಗೆ ಜಗದು ಹಾಕ್ತಾರೆ. ನನ್ನ ನೋಡು. ಯಾವನಾದ್ರು ಮುಟ್ಟಬಾರದಲ್ಲಿ ಮುಟ್ಟಿದ ಅಂದ್ರೆ ಯಾಕಾದ್ರು ಹುಟ್ಟಿದೆ ಅನ್ನೋ ಹಂಗೆ ಮಾಡಿಬಿಡ್ತೀನಿ. ನಿನ್ನೆ ಏನಾಯ್ತು ಗೊತ್ತ? ಬೆಳಗ್ಗೆ ಎರಡು ಗಂಟೆ ಹೊತ್ತಿಗೆ ರಾಮ್‌ಲಾಲ್ ಒಬ್ಬ ಪಂಜಾಬಿನ ಕರ್ಕೊಂಡು ಬಂದ. ಇಬ್ರು ಹಾಸಿಗೆಗೆ ಹೋಗೋವಾಗ ನಾನು ದೀಪ ಆರಿಸಿದೆ. ಆಣೆ ಮಾಡಿ ಹೇಳ್ತೀನಿ ಜಮುನಾ, ಅವನು ಹೆದರಿಕೊಂಡು ಬಿಟ್ಟ! ಏನು ಮಾಡೋಕೆ ಆಗ್ತಿಲ್ಲ ಅವನಿಗೆ! 'ಶುರುವಚ್ಕೊ ನೀ, ಆಗಲೇ ಎರಡಾಗಿದೆ, ಬೇಕೊ ಬೇಡ್ವೋ' ಅಂದೆ ಕಣೆ. ಲೈಟು ಹಾಕು ಸಾಕು ಅಂತಾನೆ! ನಂಗೆ ಜೋರು ನಗು ಬಂತು. 'ಲೈಟುಗಿಯ್ಟು ಹಾಕಲ್ಲಯ್ಯ' ಅಂತ ಕಿಚಾಯಿಸಿದೆ. ನಂತರ ಅವನನ್ನ ಚೂಟಿದೆ ನೋಡು, ಹೌಹಾರಿ ಮಂಚದಿಂದ ಜಿಗಿದು ಹೋಗಿ ಲೈಟ್ ಹಾಕ್ತು ಪ್ರಾಣಿ. 'ಯೋ! ತಲೆಕೆಟ್ಟಗಿಲ್ವಾ' ಅಂದು ಲೈಟ್ ಆರಿಸಿದೆ. ಮತ್ತೆ ನಡುಗೋದಕ್ಕೆ ಶುರುಮಾಡಿದ. ಒಳ್ಳೆ ತಮಾಷೆಯಾಗಿತ್ತು ಕಣೆ. ಲೈಟು ಹಾಕೋದು- ಆರ್ಸೋದು, ಆರ್ಸೋದು- ಹಾಕೋದು. ಬೆಳಗಿನ ಮೊದಲ ಟ್ರಾಮ್ ಕಾರ್ ಸದ್ದು ಕೇಳಿದವನೆ ಆ ಗಂಡಸು ಬಟ್ಟೆ ಹಾಕ್ಕೊಂಡು ಓಡೋದ. ಕಳ್ಳ ನನ್ಮಗ ಜೂಜಲ್ಲಿ ಹಣ ಗೆದ್ಕೊಂಡು ಬಂದಿದ್ದ ಅಂತಾ ಕಾಣುತ್ತೆ, ಇಲ್ಲಿ ಹಿಂಗೆ ಖರ್ಚು ಮಾಡಿದ. ನೋಡು ಜಮುನಾ ನೀನು ಏನು ಅರಿಯದೋಳು. ನನ್ನ ಮಾತು ಕೇಳು, ನಂಗೆ ಗಂಡಸರನ್ನು ಹದ್ದುಬಸ್ತಿನಲ್ಲಿಡೋದು ಹೇಗೆ ಅಂತ ಗೊತ್ತು ಕಣೆ."

ಅವಳಿಗೆ ಗಿರಾಕಿಗಳನ್ನು ಹದ್ದುಬಸ್ತಿನಲ್ಲಿಡೋದು ಗೊತ್ತಿತ್ತು ಅನ್ನೋದು ನಿಜವೆ. ಅವಳು ಅಂತಹ ಅನೇಕ ವರಸೆಗಳನ್ನು ಗೆಳತಿಯರಿಗೆ ಹೇಳುತ್ತ ಇದ್ದಳು: "ಗಿರಾಕಿ ನಡವಳಿಕೆಯಲ್ಲಿ ಸಭ್ಯಸ್ಥನಾಗಿದ್ರೆ, ಪ್ರೇಮದ ಆಟ ಆಡು, ಚೆಂದದ ಮಾತಾಡು, ಚುಡಾಯಿಸು, ಮೈಮೇಲೆ ಕೈಯಾಡಿಸು. ಗಡ್ಡ ಇದ್ರೆ, ನಿನ್ನ ಬೆರಳಿಂದ ಬಾಚು, ಬಾಚುತ್ತ ಒಂದೆರಡು ಕೂದಲು ಕಿತ್ತಿ ಕಿಚಾಯಿಸು. ದಪ್ಪ ಗಂಡಸಾಗಿದ್ರೆ, ಡೊಣಪ ಅಂತ ರೇಗಿಸು. ಮಾಡೋ ಕೆಲಸಕ್ಕೆ ಅವಕಾಶ ಸಿಗದ ಹಾಗೆ ಹೀಗೆ ಆಟ ಆಡಿಸ್ತಾ ಕಾಲ ತಳ್ಳು. ಅವರೂ ಹೋಗೋವಾಗ ಖುಷಿಯಾಗಿ ಹೋಗ್ತಾರೆ, ನಿನ್ನ ಮೈಯೂ ನೋವಾಗದೆ ಉಳಿಯುತ್ತೆ. ಈ ಸಭ್ಯಸ್ಥ ಜನರ ಬಗ್ಗೆ ಎಚ್ಚರ ಇರಬೇಕು ಕಣ್ರೆ, ಅವರು ಕೆಲಸದಲ್ಲಿ ತುಂಬಾ ಒರಟರು ಗೊತ್ತಾ!"

ಆದರೆ ಸೌಗಂಧಿ ಅವಳು ಕೊಚ್ಚಿಕೊಳ್ಳೋಷ್ಟು ಜಾಣೆ ಏನಲ್ಲ, ಅವಳ ಬಳಿ ಬರೋ ಗಿರಾಕಿಗಳ ಸಂಖ್ಯೆಯೂ ದೊಡ್ಡದೇನಲ್ಲ, ಗಂಡಸರ ಸಂಗ ಅವಳಿಗೆ ಇಷ್ಟ; ಹೀಗಾಗಿ ಅವಳ ಜಾಣ ವರಸೆಗಳು ಯಾವೂ ತಕ್ಕ ಸಮಯದಲ್ಲಿ ಬಳಕೆಯಾಗುತ್ತಿರಲಿಲ್ಲ. ಅಕ್ಕರೆಯ ಒಂದೆರಡು ಮಾತುಗಳನ್ನು ನಾಜೂಕಾಗಿ ಕಿವಿಯಲ್ಲಿ ಉಸುರಿದರೆ ಸಾಕು, ಅವಳು ಕರಗಿ ನೀರಾಗುವಳು. ದೇಹದ ಸುಖದಲ್ಲಿ ಏನು ಇಲ್ಲ ಅಂತ ಅವಳಿಗೆ ಗೊತ್ತಿದ್ದರೂ, ದೇಹ ಅವಳ ಹಿಡಿತದಲ್ಲಿ ಇರುತ್ತಿರಲಿಲ್ಲ. ಮಣಿಯುವುದು, ದಣಿಯುವುದು ಅವಳಿಗೆ ಮುದ ನೀಡುತ್ತಿತ್ತು.

ಅವಳು ಚಿಕ್ಕವಳಿದ್ದಾಗ, ಕಣ್ಣಾಮುಚ್ಚಾಲೆ ಆಡೋವಾಗ, ತಂದೆಯ ಮನೆಯಲ್ಲಿ ಮೂಲೆಯೊಂದರಲ್ಲಿದ್ದ ದೊಡ್ಡ ಕಟ್ಟಿಗೆ ಕಪಾಟಿನ ಒಳಗೆ ಅಡಗಿ ಕೂಡುವಳು. ಸಿಕ್ಕುಬಿಟ್ಟೆನೆಂಬ ಹೆದರಿಕೆ, ಸಿಗದೆ ಕಾಡುವೆನೆಂಬ ಮಜಾ ಎರಡೂ ಒಟ್ಟಾಗಿ ಅವಳ ಎದೆ ಜೋರಾಗಿ ಹೊಡೆದುಕೊಳ್ಳೋದು. ಯಾರಿಗೂ ಸಿಗದಂತಹ ಒಂದು ಡಬ್ಬಿಯಲ್ಲಿ, ಯಾರಾದರೂ ಹುಡುಕಿ ಕಂಡುಹಿಡಿಯಲಿ ಎಂಬ ಹಂಬಲದಲ್ಲಿ ಇಡೀ ಬದುಕು ಕಳೀಬೇಕು ಅಂತ ಅವಳಿಗೆ ಒಂದೊಂದು ಸಾರಿ ಅನಿಸೋದು. ಕಳೆದ ಐದು ವರ್ಷಗಳ ಅವಳ ಜೀವನವಂತೂ ಒಂದು ಕಣ್ಣಾಮುಚ್ಚಾಲೆ ಆಟವೇ ಆಗಿತ್ತು, ಒಂದೋ ಯಾರನ್ನಾದರೂ ಅವಳು ಹುಡುಕುವಳು ಇಲ್ಲವೇ ಯಾ... ಅವಳನ್ನರಿಸುವರು. ಯಾವನಾದ್ರು ಗಂಡಸು ಬಂದು 'ಸೌ... ನಾನು ನಿನ್ನ ಪ್ರೀತಿಸ್ತೇನೆ ಕಣೆ' ಅಂದ್ರೆ ಸಾಕು, ಅ... ಕಪಟ ಅಂತ ಗೊತ್ತಿದ್ರು, ಅವಳ ಜಂಗಾಬಲ ಕುಸಿಯುವು... ಪ್ರೇಮ! ಬಲು ಸುಂದರವಾದ ಪದ ಎಂದು ಅವ... ಅನ್ನಿಸುವುದು. ಓಹ್! ಮುಲಾಮಿನ ಹಾಗೆ ಪ್ರೇಮವ... ದೇಹಕ್ಕೆ ಹಚ್ಚುವಂತಿದ್ದರೆ ಎಷ್ಟು ಚೆನ್ನಾಗಿತ್ತು! ತನ್ನ ಕಾ... ಗಿರಾಕಿಗಳಲ್ಲಿ ನಾಲ್ಕು ಜನ ಅವಳಿಗೆ ಪ್ರಿಯವಾಗಿದ್ದ... ಅವರ ಕಟ್ಟು ಹಾಕಿದ ಫೋಟೋಗಳನ್ನು ಅವಳು ... ಕೋಣೆಯ ಗೋಡೆಗೆ ತೂಗು ಹಾಕಿಕೊಂಡಿದ್ದಳು.

ಕಳೆದ ಐದು ವರ್ಷಗಳನ್ನು ಅವಳು ಉತ್ಕಟ... ಬದುಕಿದ್ದಳು. ಬಯಸಿದಷ್ಟು ಸುಖ ದೊರಕಿರ... ಅನ್ನೋದು ನಿಜವಾದರೂ, ದಕ್ಕಿದಷ್ಟರಲ್ಲೇ ಅವ... ಖುಷಿಪಟ್ಟದ್ದಳು. ಹಣ ಗಳಿಸುವ ಆಸೆ ಅವಳಿಗೆ ಇರ... ಒಂದು ಸಾರಿಯ ಸೇವೆಗೆ ಅವಳ ಬೆಲೆ ಹತ್ತು ರೂಪಾ... ಅದರಲ್ಲಿ ಕಾಲು ಭಾಗ ರಾಮ್‌ಲಾಲ್‌ನ ಪಾಲು. ಮಿ... ಅವಳ ಬದುಕಿಗೆ ಸಾಕಾಗಿತ್ತು, ಮಧು ಪೂನಾದಿಂದ ಬಂ... ಅವನ ಉಪಚಾರಕ್ಕೆ ಹತ್ತು ಹದಿನೈದು ರೂಪಾಯಿಯ... ಅವಳು ಖುಷಿಯಿಂದ ಖರ್ಚು ಮಾಡುತ್ತಿದ್ದಳು. ... 'ಅವನಲ್ಲಿ ಏನು ಕಂಡೆ' ಅಂತ ರಾಮ್‌ಲಾಲ್ ಕೇಳಿದ್ದ... ಆ ಭಾವಕ್ಕಾಗಿ ಅವಳು ತೆತ್ತ ಬೆಲೆಯಾಗಿತ್ತೇನೋ.

ಹೌದು, ಸೌಗಂಧಿಗೆ ಇಷ್ಟವಾಗುವಂಥದ್ದು ಏನ... ಮಧುವಿನಲ್ಲಿ ಇತ್ತು. ಅವರಿಬ್ಬರ ಮೊದಲ ಭೇಟಿಯ... ಮಧು ಹೇಳಿದ್ದ: "ಬೆಲೆವೇಶ್ಯೆಯಾಗಿ ಬದುಕುವುದಕ್ಕೆ ನಿ... ನಾಚಿಕೆಯಾಗೋದಿಲ್ವೆ? ನಿನ್ನ ಬೆಲೆ ಹತ್ತು ರೂಪಾ... ಅದರಲ್ಲಿ ಕಾಲುಪಾಲು ರಾಮ್‌ಲಾಲ್‌ಗೆ ಹೋಗು... ಮಿಕ್ಕೋದು ಏಳು ರೂಪಾಯಿ ಎಂಟಾಣೆ ಅಲ್ಲವ? ಬಡಿಗಾಸಿಗೆ ನಿನಗೊಲ್ಲದ್ದನ್ನ ನೀನು ಮಾಡ್ತಿಯ. ನನ್ನ... ಏನು? ಸಿಗಲಾರದ್ದನ್ನ ಹುಡುಕಿಕೊಂಡು ಬಂದಿದ್ದೀನಿ ... ನಂಗೆ ಒಬ್ಬಳು ಹೆಣ್ಣು ಬೇಕು, ನಿಂಗೂ ಒಬ್ಬ ಗಂ... ಬೇಕು ಅಲ್ವಾ? ನನಗೆ ಯಾವ ಹೆಣ್ಣಾದರೂ ಆದೀ... ನಿಂಗೆ ಯಾವ ಗಂಡಾದರೂ ಆದೀತಾ? ನಮ್ಮಿಬ್ಬರ ನ... ಈ ಹತ್ತು ರೂಪಾಯಿ ವ್ಯವಹಾರ ಬಿಟ್ಟರೆ ಏನಿದೆ. ಅದ... ಕಾಲು ಪಾಲು ಆ ರಾಮ್‌ಲಾಲ್‌ಗೆ ದಕ್ಕುತ್ತೆ, ... ನಾವಿಬ್ಬರೂ ಒಬ್ಬರನ್ನೊಬ್ಬರು ಪ್ರೀತಿಸುತ್ತಿದ್ದೇವೆ. ಅದ... ಹೇಗಾದರು ಬಗೆಹರಿಸಬಾರದ? ಆ ಬಗೆಯಲ್ಲಾದ... ನಮ್ಮ ನಮ್ಮ ಆಸೆಗಳನ್ನು ಪೂರೈಸಿಕೊಳ್ಳಬಹುದ... ಒಂಚೂರು ಕೇಳು. ನಾನು ಪೂನಾದಲ್ಲಿ ಪೊಲೀ... ಸಾರ್ಜೆಂಟ್ ಆಗಿದ್ದೇನೆ. ತಿಂಗಳಿಗೊಮ್ಮೆ ಬಂದು ನಾಲ್ಕೈ... ದಿನ ಇದ್ದು ಹೋಗುತ್ತೇನೆ. ಇನ್ನು ಮೇಲೆ ನೀನು ದ... ಮಾಡಬೇಕಾಗಿಲ್ಲ, ನಿನ್ನನ್ನ ನಾನು ನೋಡ್ಕೊಳ್ತೇನೆ. ... ನಿನ್ನ ಕೋಣೆಗೆ ಎಷ್ಟಂದೆ ಬಾಡಿಗೆ?"

ಪೊಲೀಸ್ ಸಾರ್ಜೆಂಟನೊಬ್ಬನ ಮುದ್ದಿನ ಹೆಣ್ಣು ಎ... ಭಾವನೆಯನ್ನು ಮಧು ಅವಳಲ್ಲಿ ತುಂಬಿದ್ದ. ಅ... ಕೋಣೆಯ ರೂಪವನ್ನೂ ಅವನು ಬದಲಾಯಿಸಿದ್ದ. ಅರೆ... ಹೆಣ್ಣುಗಳ ಪೋಸ್ಟರುಗಳನ್ನು ಅವಳು ಗೋಡೆಗೆ ಅಂಟಿಸಿದ್ದ... ಅವನು ಅವುಗಳನ್ನು ಅವಳನ್ನು ಕೇಳದೆ ಕಿತ್ತಿ ಹರಿ... ಬಿಸಾಡಿದ್ದ. "ನನ್ನ ಮುದ್ದು ಸೌಗಂಧಿ, ಇದೆಲ್ಲ ನ... ಸರಿಬರೋದಿಲ್ಲ. ಈ ಕೊಳಕು ಹೂಜಿಯನ್ನು ನೋಡ... ಅದನ್ನು ತೊಳೆದು ಸ್ವಚ್ಛ ಮಾಡಬಾರದೆ. ಮತ್ತೇ ಅದೇ... ಅಲ್ಲಿ ಬಿದ್ದುಕೊಂಡಿರೊ ಕೊಳಕು ಚಿಂದಿಬಟ್ಟೆಗಳು; ಅ... ತೆಗೆದೆಸೆಯಬಾರದೆ? ತಲೆ ಸ್ನಾನ ಮಾಡಿ ಎಷ್ಟು ದಿನವಾಯ... ನೋಡು ಕೂದಲು ಹೇಗೆ ಜಡೆಗಟ್ಟಿದೆ...ಮತ್ತೇ...ಮತ್ತೇ... ಹೀಗೆ ಅವನ ಹುಕುಂ ನಡೆದಿತ್ತು.

ಮೊದಲ ಭೇಟಿಯ ಮೂರು ತಾಸಿನ ಮಾತುಕತೆಯ... ಬಹುಪಾಲು ಮಧುವಿನ ಮಾತೇ ಇತ್ತು, ಆದರ... ಸೌಗಂಧಿಗೆ ಆತನ ಜೊತೆ ತನಗೆ ಬಹುಕಾಲದ ಸಂಬಂಧವಿ... ಎಂಬ ಭಾವನೆ ಮೂಡಿತ್ತು, ಹಿಂದೆಂದೂ ಯಾರು ... ಬಗೆಯಲ್ಲಿ ಅವಳ ಜೊತೆ ಮಾತಾಡಿರಲಿಲ್ಲ, ಆ ಕೋ... ಅವಳ ಮನೆ ಎಂಬ ಭಾವನೆ ಹುಟ್ಟಿಸಿರಲಿಲ್ಲ, ಅ... ಸಂಗ ಮಲಗಲು ಬಂದ ಗಂಡಸರು ಯಾರೂ ... ಮೇಲಿನ ಬೆಡ್‌ಶೀಟು ಕೊಳಕಾಗಿದೆ ಅನ್ನೋದನ್ನ... ಗಮನಿಸಿರಲಿಲ್ಲ, ಎಂದೂ ಯಾರೂ ಅವಳಿಗೆ ...

ವಂತಿದೆ. ಮದ್ವಿನ ವ್ಯವಸ್ಥೆ ಮಾಡುತ್ತೇನೆ ತಾಳು" ತ್ವಸದ ಮಾತುಗಳನ್ನು ಆಡಿರಲಿಲ್ಲ. ಮಧು ಬೇರೆಯಾಗಿದ್ದ; ಯಾರೂ ಅವಳ ಜೊತೆ ಮಾತುಗಳನ್ನು ಆಡಿದ್ದ. ಅವನು ತನಗೆ ಎಂದು ಅವಳಿಗೆ ಅನಿಸಿಬಿಟ್ಟಿತ್ತು.

ತಿಂಗಳಿಗೊಮ್ಮೆ ಬರುತ್ತಿದ್ದ. ಹೋಗುವ ಸೌಗಂಧಿ, ನೋಡು ನೀನು ನಿನ್ನ ಹಳೆ ದಂಧೆ ಕೊಂಡರೆ, ನನ್ನನ್ನು ಕಳೆದುಕೊಳ್ಳುತ್ತೀಯ. ನಿನ್ನ ರ್ಚನ್ನು ಪೂನಾಗೆ ಹೋದಾಕ್ಷಣವೆ ಕಳಿಸುವೆ" ಳಿ ಹೋಗುವನು.

ಎಂದೂ ಅವಳಿಗೆ ಹಣ ಕಳಿಸಲಿಲ್ಲ, ಅವಳು ತನ್ನ ದಂಧೆ ಮುಂದುವರೆಸಿಕೊಂಡು ಹೋದಳು. ಅವನಿಗೆ "ಇಂಥ ಉದ್ರಿ ಮಾತೆಲ್ಲ ಬೇಡ. ಪೂ ಕವಡೆ ಕಾಸು ಕಳಿಸಿದೀಯ ಹೇಳು" ಎಂದು ಅವನೂ, ಹೊಟ್ಟೆಪಾಡಿಗೆ ಏನು ಮಾಡುತ್ತಿದ್ದೀಯ ತನ್ನು ಕೇಳಲಿಲ್ಲ. ಇದು ನಟನೆ ಎಂದು ಇಬ್ಬರಿಗೂ ಹಾಗಿರುವುದೇ ಇಬ್ಬರಿಗೂ ಸುಖವೆನಿಸಿತ್ತು. ು ಸಾರಿ ಸೌಗಂಧಿ ತನ್ನ ಜೊತೆ ತಾನೇ ವಾದ ್ಳೋಳು: ಅಷ್ಟು ಚಿನ್ನ ಕೊಳ್ಳಲಾಗದೆ ಇರುವಾಗ ಬಂಗಾರದಲ್ಲೇ ಯಾಕೆ ತೃಪ್ತಿ ಪಡಬಾರದು.

ಈಗ ಅವಳು ಗಾಢ ನಿದ್ರೆಯಲ್ಲಿದ್ದಳು. ಮಂಚದ ್ಲೆಗೆ ಕುಕ್ಕುವ ಹಾಗೆ ಉರಿಯುತ್ತಿದ್ದ ಲೈಟನ್ನು ವ್ಯವಧಾನ ಇಲ್ಲದಷ್ಟು ಅವಳು ದಣಿದಿದ್ದಳು. ೋ ಅವಳ ಕೋಣೆಯ ಬಾಗಿಲು ತಟ್ಟುತ್ತಿದ್ದರು. ಅವಳಿಗೆ ಎಲ್ಲೋ ದೂರದಿಂದ ಬರುತ್ತಿರುವಂತೆ ಕೇಳುತಿತ್ತು, ಈಗ ಬಾಗಿಲನ್ನು ದಬದಬನೆ ತ್ತಿದ್ದರು. ಅವಳಿಗೆ ಎಚ್ಚರಾಗಿ ಎದ್ದು ಕೂತಳು. ಾಬಿನ ಕಹಿ ಉಳಿದಿದ್ದ, ಜೊಲ್ಲು ಬಾಯನ್ನು ಡಳು. ಮಂಚದಡಿ ನೋಡಿದಳು, ನಾಯಿ ಅವಳ ಟ್ಟಿಗೆ ತಲೆಯೊರಗಿಸಿ ಮಲಗಿತ್ತು. ಗಿಳಿಯೂ ತನ್ನ ರೆಕ್ಕೆಯಡಿ ತುರುಕಿಕೊಂಡು ಪಂಜರದೊಳಿತ್ತು. ತ್ತೊಮ್ಮೆ ಅಸಹನೆಯ ಬಾಗಿಲು ಬಡಿತ. ಅವಳು ಟ್ಟು ಎದ್ದಳು. ತಲೆ ವಿಪರೀತ ಸಿಡಿಯುತ್ತಿತ್ತು. ಂದ ಒಂಚೂರು ನೀರು ಬಾಯಿಗೆ ಹಾಕಿಕೊಂಡು ಕುಡಿದಳು. ಮತ್ತೊಂದು ಲೋಟ ಬಗ್ಗಿಸಿಕೊಂಡು ಟುಕಿಗೆ ಕುಡಿದಳು. ಅನುಮಾನದಿಂದ ಬಾಗಿಲು ರಾಮ್‌ಲಾಲ್?' ಎಂದು ಪಿಸುಗುಟ್ಟಿದಳು.

ಲು ಬಡಿಬಡಿದು ರೋಸಿ ವಾಪಸು ವನಿದ್ದ ರಾಮ್‌ಲಾಲ್ ರೇಗಿ "ಹಾವು ಕಚ್ಚಿದೋರ ದ್ಕೊಂಡಿಯಲ್ಲ, ಒಂದು ತಾಸಿನಿಂದ ಬಾಗಿಲು ನಿ, ಕೇಳಲ್ವ?" ಅಂದ. ಮತ್ತೆ ದನಿ ತಗ್ಗಿಸಿ ಕೇಳಿದ- ಾದ್ರು ಗಿರಾಕಿ ಇದೆಯಾ?" ಅವಳು ಇಲ್ಲವೆಂದು ತಿಸಿ ಅವನನ್ನು ಒಳಗೆ ಬಿಟ್ಟುಕೊಂಡಳು. "ನಿಮ್ಮನ್ನ ಂದ ಎಬ್ಬಿಸೋಕೆ ಒಂದು ತಾಸು ಒದ್ದಾಡಬೇಕು ನಾನು ಬೇರೆ ದಂಧೆ ನೋಡ್ಕೋಳೊದೆ ವಾಸಿ ಣುತ್ತೆ. ಏನು ಹೆಂಗಸ್ರೋ ನೀವು. ನನ್ನ ಮುಖ ಡ್ತಾ ನಿಂತಿದೀಯ? ಹೋಗು ಹೂವಿನ ಚಿತ್ತಾರ ಒಳ್ಳೆ ಸೀರೆ ಉಟ್ಕೊಂಡ್ಬು, ಮುಖಕ್ಕೆ ಪೌಡರ್ ತು, ತುಟಿಗೆ ಲಿಪ್‌ಸ್ಟಿಕ್ ಬಳ್ಕೊಂಡು ತಯಾರಾಗು. ಕಾರಲ್ಲಿ ಸಾವಕಾರ ಸೇಠುಗಳು ನಿಂಗೋಸ್ಕರ ಇದ್ದಾರೆ" ಎಂದ ರಾಮ್‌ಲಾಲ್.

ನ ಅವಸರ ಲೆಕ್ಕಕ್ಕಿಲ್ಲವೆಂಬಂತೆ ಸೌಗಂಧಿ ಹೋಗಿ ರ್ಚಿಯಲ್ಲಿ ಕುಸಿದಳು. ತಲೆನೋವಿನ ಮುಲಾಮಿನ ಗೆತ್ತಿಕೊಂಡು ಮುಚ್ಚಳ ತೆಗೆಯುತ್ತ "ರಾಮ್‌ಲಾಲ್ ುಷಾರಿಲ್ಲ" ಎಂದಳು.

ೊದ್ದೆ ಹೇಳೋಕೆ ಏನಾಗಿತ್ತು ನಿಂಗೆ?"

ನೋವಿನ ಮುಲಾಮನ್ನು ಹಣೆಗೆ ನೀವಿಕೊಳ್ಳುತ್ತ "ನಂಗೆ ಹುಷಾರಿಲ್ಲ ಅಂದೆನಲ್ಲ, ಜಾಸ್ತಿ ಕುಡಿದಿದ್ದಕ್ಕೆ ದೆ ಅನ್ಸುತ್ತೆ" ಅಂದಳು.

ಮ್‌ಲಾಲ್‌ನ ಮಾತಿನ ವರಸೆ ಬದಲಾಯಿತು. ಏನಾದ್ರು ಉಳಿದಿದೆಯ? ನಂಗೊಂದೆರಡು ಕೊಡು" ಅಂದ.

ಲಾಮನ್ನು ಟೇಬಲ್ ಮೇಲೆ ಇಡುತ್ತ ಸೌಗಂಧಿ ಉಳಿದಿದ್ರೆ ನಾನೇ ಹಾಕ್ಕೊಂಡು ಈ ದರಿದ್ರ ವನ್ನು ಶಮನ ಮಾಡ್ಕೋತ್ತಿದ್ದೆ. ನೋಡು ಲಾಲ್, ಆ ಮನುಷ್ಯನ್ನ ಇಲ್ಲಿಗೆ ಕರ್ಕೊಂಡು ಬಾ" .

ಗಲ್ಲ, "ಅವನು ದೊಡ್ಡ ಮನುಷ್ಯ. ಓಣಿ ತುದಿಗೆ ನಿಲ್ಲಿಸಿಕೊಂಡಿರೋಕು ಅವನಿಗೆ ಇಷ್ಟ ಇರ್ಲಿಲ್ಲ, ಬೇಗ ಸಿಂಗಾರ ಮಾಡ್ಕೊ, ಹೊರಟು ಬಿಡೋಣ. ನಿಂಗೆ ನಿರಾಶೆಯಾಗೊಲ್ಲ" ಅಂದ ರಾಮ್‌ಲಾಲ್.

ವನು ಈಗ ಕುದುರಿಸಿರೋದು ಮಾಮೂಲಿ ಾದ ಏಳು ರೂಪಾಯಿ ಎಂಟಾಣೆಗೆ. ಸೌಗಂಧಿಗೆ ತುರ್ತು ಇಲ್ಲದಿದ್ರೆ, ಬಿಲ್ ಖುಲ್ ಆಗಲ್ಲ ಅಂತ ಲಾಲ್‌ನ್ನ ಓಡಿಸಿಬಿಡೋಳು. ಇವಳ ಪಕ್ಕದ ಯಲ್ಲಿ ಮದುಸ್ಸಿಗೆ ಬಂದ ಮಗಳ ಜೊತೆ ಒಬ್ಬ ಹೆಂಗಸು ವಾಸಕ್ಕೆ ಇದ್ದಾಳೆ. ಆಕೆಯ ಗಂಡ ಗಳ ಹಿಂದೆ ಅಪಘಾತದಲ್ಲಿ ತೀರಿಕೊಂಡಿದ್ದ. ತಾಯಿ, ಬ್ಬರು ಮದ್ರಾಸಿಗೆ ವಾಪಾಸು ಹೋಗಬೇಕು ್ತಾರೆ. ಆದರೆ ಆಕೆಯ ಹತ್ತಿರ ರೈಲು ಟಿಕೇಟಿಗೂ "ಚಿಂತೆ ಮಾಡ್ಬೇಡ ಅಕ್ಕ, ನನ್ನ ಗಂಡಸು

ಪೂನೆಯಿಂದ ಬರುವವನಿದ್ದಾನೆ. ಅವನು ನನಗೆ ಒಂದಷ್ಟು ಕಾಸು ಕೊಡ್ತಾನೆ. ಆ ಕಾಸು ಸಿಕ್ಕಕೂಡಲೇ ನಿಮ್ಮನ್ನ ಕಳಿಸೋ ವ್ಯವಸ್ಥೆ ಮಾಡ್ತೀನಿ" ಅಂತ ಸೌಗಂಧಿ ಆ ಮದ್ರಾಸಿ ಹೆಂಗಸಿಗೆ ಭರವಸೆ ಕೊಟ್ಟಿದ್ದಳು. ಮಧುವೇನೋ ಬರುವವನಿದ್ದ ಅನ್ನೋದು ಸರಿ. ಆದರೆ ಹಣವನ್ನು ಸೌಗಂಧಿಯೇ ಹೊಂದಿಸಬೇಕಿತ್ತಲ್ಲ. ಹೀಗಾಗಿ ಒಲ್ಲದ ಮನಸ್ಸಿನಿಂದ ಎದ್ದು, ಹೂವಿನ ಪ್ರಿಂಟು ಇರೊ ಸೀರೆ ಉಟ್ಟು ಸಿಂಗಾರ ಮಾಡಿಕೊಂಡಳು. ಹೂಜೆಯಿಂದ ಒಂದು ಲೋಟ ನೀರು ಕುಡಿದು ಹೊರಟಳು.

ಓಣಿ ನಿಶಬ್ಧವಾಗಿತ್ತು. ಯುದ್ಧ ಕಾಲವಾದ್ದರಿಂದ ಬೀದಿದೀಪಗಳನ್ನು ಆರಿಸಲಾಗಿತ್ತು. ಮಬ್ಬು ಬೆಳಕಿನಲ್ಲಿ ಅವಳಿಗೆ ಓಣಿ ತುದಿಯ ಕಾರಿನ ಆಕೃತಿ ಕಂಡಿತು. ಇಬ್ಬರು ಕಾರಿನ ಸಮೀಪ ನಡೆದು ನಿಂತರು.

ರಾಮ್‌ಲಾಲ್ ಮುಂದೆ ಹೋಗಿ ಕಾರಲ್ಲಿದ್ದವನಿಗೆ "ಇಲ್ಲಿದ್ದಾಳೆ ನೋಡಿ. ನಯವಿನಯದ ಹುಡುಗಿ. ದಂಧೆಗೆ ಹೊಸಬಳು" ಎಂದು ಹೇಳಿ, ಸೌಗಂಧಿ ಕಡೆ ತಿರುಗಿ "ನೋಡು! ಇಲ್ಲಿ ಬಾ. ಸೇಠ್ ಸಾಹೇಬರು ಕಾಯ್ತ ಇದ್ದಾರೆ" ಎಂದ.

ಅವಳು ಅಳುಕುತ್ತಲೇ ಕಾರಿನ ಸಮೀಪ ಹೋದಳು. ಹಠಾತ್ ಪ್ರಖರವಾದ ಟಾರ್ಚಿನ ಲೈಟು ಅವಳ ಮುಖದ ಮೇಲೆ ಬಿದ್ದು, ಅವಳಿಗೆ ಏನೂ ಕಾಣದಂತಾಯಿತು. ಕಾರಿನಲ್ಲಿದ್ದವನು "ಥತ್!" ಎಂದು ಮತ್ತೊಂದೂ ಮಾತನಾಡದೆ ಕಾರನ್ನು ಚಾಲು ಮಾಡಿ ಹೋಗಿಬಿಟ್ಟ.

ಮುಖದ ಮೇಲೆ ಬಿದ್ದ ಪ್ರಖರ ಬೆಳಕಿಂದಾಗಿ ಅವಳಿಗೆ ಪ್ರತಿಕ್ರಿಯೆ ನೀಡಲೂ ಸಮಯವಿರಲಿಲ್ಲ, ಕಾರಲ್ಲಿದ್ದವನ ಮುಖವನ್ನು ಅವಳಿಗೆ ನೋಡಲಾಗಲಿಲ್ಲ. "ಥತ್" ಎಂಬ ಧ್ವನಿ ಮಾತ್ರ ಕೇಳಿತು. ಅವನ ಈ ಉದ್ಗಾರದ ಅರ್ಥವೇನು ಅನ್ನೋದು ಅವಳಿಗೆ ತಿಳಿಯಲಿಲ್ಲ.

ರಾಮ್‌ಲಾಲ್ "ನಿಮಗೆ ಇವಳು ಹಿಡಿಸಲಿಲ್ಲ, ನನ್ನ ಎರಡು ತಾಸು ಹಾಳಾಯ್ತು" ಎಂದು ಗೊಣಗುತ್ತ ಅವಳಿಗೆ ಏನು ಹೇಳದೆ ಹೊರಟುಹೋದ. ಸೌಗಂಧಿ ನಡುಗುತ್ತಿದ್ದಳು. ಸನ್ನಿವೇಶಕ್ಕೆ ಹೊಂದಿಕೊಳ್ಳಲು ಹೆಣಗುತ್ತಿದ್ದಳು. "ಥೂ ಅಂದ್ರೆ ಏನರ್ಥ? ಅವನಿಗೆ ನಾನು ಹಿಡಿಸ್ಲಿಲ್ಲ ಅಂತನಾ? ಸೂಳೆ ಮಗನ್ನ ತಂದು..."

ಕಾರು ಹೊರಟುಹೋಗಿತ್ತು. ಹಿಂಬದಿಯ ಲೈಟಿನ ಕೆಂಪು ಬಣ್ಣ ದೂರದೂರಾಗುತ್ತ ಮಸುಕಾಗುತ್ತಿತ್ತು. "ನಿಲ್ಲಿ, ವಾಪಸ್ಸು ಬನ್ನಿ... ವಾಪಸ್ಸು ಬನ್ನಿ.." ಎಂದು ಅವಳಿಗೆ ಚೀರಬೇಕೆನಿಸಿತು. ನಿರ್ಜನ ಬಜಾರಿನ ಬೀದಿಯಲ್ಲಿ ಅವಳು ಏಕಾಂಗಿಯಾಗಿ ನಿಂತಿದ್ದಳು. ಅವಳುಟ್ಟ ಬೂದುಬಣ್ಣದ ಹೂವುಗಳ ಪ್ರಿಂಟಿನ ಸೀರೆ ರಾತ್ರಿಯ ಗಾಳಿಗೆ ಹಾರಾಡುತ್ತಿತ್ತು. ನಿಧಾನಕ್ಕೆ ಮನೆ ಕಡೆ ಹೆಜ್ಜೆ ಹಾಕತೊಡಗಿದಳು.

ಆದರೆ ರಾಮ್‌ಲಾಲ್ ಮತ್ತು ಕಾರಲ್ಲಿದ್ದ ಮನುಷ್ಯನ ಬಗ್ಗೆ ಯೋಚನೆ ಬಂದದ್ದೇ ನಿಂತುಬಿಟ್ಟಳು. ಸೇಠುಗೆ ಅವಳು ಹಿಡಿಸಲಿಲ್ಲ ಅಂದನಲ್ಲ ರಾಮ್‌ಲಾಲ್; ಹಿಡಿಸದೇ ಇದ್ದದ್ದು ಅವಳು ಚೆಂದವಿಲ್ಲ ಎಂಬ ಕಾರಣಕ್ಕೆ ಅಂತ ಏನು ಹೇಳಲಿಲ್ಲವಲ್ಲ, ಏನೀಗ? ಅವಳಿಗೂ ಸುಮಾರು ಜನ ಹಿಡಿಸೋದಿಲ್ಲ, ತನ್ನ ಮಗ್ಗುಲಿಗೆ ಬರುವ ಹಲವರನ್ನು ಅವಳು ಅಸಡ್ಡೆ ಮಾಡೋದಿದೆ. ಮೊನ್ನೆ ರಾತ್ರಿ ಬಂದವನೊಬ್ಬ ಎಂಥಾ ಕುರೂಪಿಯಾಗಿದ್ದ ಅಂದ್ರೆ, ಅವನು ಅವಳ ಮಗುಲಲ್ಲಿ ಮಲಗಿದಾಗ ಅವಳಿಗೆ ವಾಂತಿ ಬಂದ ಹಾಗಾಯ್ತು. ಆದರೆ ಅವಳು ಆ ಅಸಹ್ಯವನ್ನು ತೋರಿಸಲಿಲ್ಲ ಅಷ್ಟೆ.

ಆದರೆ, ಕಾರಲ್ಲಿದ್ದೋನು? ಅವನು ಅವಳ ಮುಖಕ್ಕೆ ನೇರ ಉಗಿದನಲ್ಲ! 'ರಾಮ್‌ಲಾಲ್! ಯಾವ ಬಿಲದಿಂದ ಈ ಹುಳನಾ ಹುಡುಕಿ ಗಂಧ ಪೂಸಿ ಕರ್ಕೊಂಡು ಬಂದೆಯಯ್ಯ? ಇವಳಿಗೆ ಹತ್ತು ರೂಪಾಯಿ ಬೆಲೆಯಾ! ಇವಳಿಗೆ? ಥೂ!' ಅಂತ ಅವನ ನಡುವಳಿಕೆಯ ಅರ್ಥ ಅಲ್ಲವಾ.


ಅವಳಿಗೆ ತನ್ನ ಮೇಲೂ ಮತ್ತು ಬೆಳಗಿನ ಎರಡು ಗಂಟೆಗೆ ಎಬ್ಬಿಸಿದ ರಾಮ್‌ಲಾಲ್‌ನ ಮೇಲೂ ಕೋಪ ಬಂದಿತ್ತು. ಅವನಾದರೂ ಇವಳಿಗೆ ಒಳ್ಳೆದಾಗಲಿ ಅಂತಲೇ ಎಬ್ಬಿಸಿದ್ದು ಅಂತಲೂ, ತನ್ನದೂ ಏನು ತಪ್ಪಿಲ್ಲ ಅಂತಲೂ ಅವಳಿಗೆ ಗೊತ್ತಿತ್ತು. ಆದರೂ ಇಡೀ ಪ್ರಸಂಗ ಮತ್ತೊಮ್ಮೆ ನಡೀಬೇಕು, ಅವಳು ಕಾರಿನ ಹತ್ತಿರ ನಿಧಾನಕ್ಕೆ ಹೋಗಬೇಕು, ಮುಖದ ಮೇಲೆ ಟಾರ್ಚಿನ ಬೆಳಕು ಬೀಳಬೇಕು, ಕಾರೊಳಗಿನ ಮನುಷ್ಯ 'ಥತ್' ಅನ್ನಬೇಕು, ತಾನು ಅವನ ಕೂದಲು ಹಿಡಿದು ಕಾರಿಂದ ಹೊರಗೆಳೆದು ತನಗೆ ಸುಸ್ತಾಗುವವರೆಗೂ ಮುಖ ಮೋರೆ ನೋಡದೆ ಚಚ್ಚಬೇಕು ಅನ್ನೋಷ್ಟು ಕೋಪ ಬಂದಿತ್ತು.

ಸೌಗಂಧಿ ನೀನೇನು ಕುರೂಪಿಯಲ್ಲ ಎಂದು ಅವಳು ತನಗೆ ತಾನೆ ಹೇಳಿಕೊಂಡಳು. ಹೌದು ಹರೆಯದ ಬಿಗುವು ಉಳಿದಿಲ್ಲ, ಆದರೂ ಎಂದೂ ಯಾರೂ ತನ್ನನ್ನು ಕುರೂಪಿ ಅಂದದ್ದಿಲ್ಲ, ಗಂಡಸರು ಹಿಂತಿರುಗಿ ಮತ್ತೊಮ್ಮೆ ನೋಡಬೇಕು ಅನ್ನೋವಷ್ಟು ಚೆಲುವೆ. ಗಂಡಸರು ಬಯಸುವಂಥದ್ದೆಲ್ಲ ತನ್ನಲ್ಲಿದೆ ಅನ್ನೋದು ಅವಳಿಗೆ ಗೊತ್ತಿತ್ತು. ಇನ್ನೂ ಯೌವನವಿದೆ, ಕಟ್ಟುಮಸ್ತು ದೇಹವಿದೆ, ಮುದ ನೀಡುವ ನಾಜೂಕಿನ ನಡವಳಿಕೆ ಇದೆ. ಕಳೆದ ಐದಾರು ವರ್ಷಗಳಲ್ಲಿ ಅವಳ ಸಂಗ ಮಾಡಿದವರೆಲ್ಲ ಖುಷಿಯಾಗಿ ಹೋಗಿದ್ದಾರೆ.

ಅವಳದು ಮೃದು ಹೃದಯ. ಹೋದ ಕ್ರಿಸ್ಮಸ್ ಹಬ್ಬದ ವೇಳೆ, ಅವಳು ಗೋಲ್‌ಪೀಠ್ ಪ್ರದೇಶದಲ್ಲಿದ್ದಾಗ, ಹೈದ್ರಾಬಾದಿನಿಂದ ಬಂದ ಯುವಕನೊಬ್ಬ ಅವಳ ಜೊತೆ ರಾತ್ರಿ ಮಲಗಿದ್ದ. ಬೆಳಗ್ಗೆ ಎದ್ದಾಗ ಅವನ ಪರ್ಸ್ ಕಾಣೆಯಾಗಿತ್ತು. ಕಳ್ಳಬುದ್ಧಿಯ ಕೆಲಸದ ಹುಡುಗ ಪರ್ಸ್ ಹಾರಿಸಿಕೊಂಡು ಪರಾರಿಯಾಗಿದ್ದ. ರಜೆಯ ಮಜೆಗಾಗಿ ಬಾಂಬೆ ತನಕ ಬಂದಿದ್ದ ಆ ಯುವಕ ಊರಿಗೆ ವಾಪಾಸು ಹೋಗಲೂ ಕಾಸಿಲ್ಲದೆ ಕಕ್ಕಾಬಿಕ್ಕಿಯಾಗಿದ್ದ. ಅವಳು ರಾತ್ರಿ ಅವನು ತನಗೆ ಕೊಟ್ಟಿದ್ದ ಕಾಸನ್ನು ವಾಪಸು ಕೊಟ್ಟು ಕಳುಹಿಸಿದ್ದಳು.

ಅವಳಿಗೆ ಮನೆಗೆ ಹಿಂತಿರುಗಿ, ತಣ್ಣಗೆ ಕುಡಿದು, ಹಾಯಾಗಿ ನಿದ್ದೆ ಮಾಡಬೇಕೆನಿಸಿತು. ಮನೆಯ ಕಡೆ ನಡೆಯತೊಡಗಿದಳು. ಆದರೆ ಕೋಣೆಯ ಬಾಗಿಲ ಬಳಿ ಬರುವ ಹೊತ್ತಿಗೆ, ನೋವು ಅವಮಾನಗಳು ಮತ್ತೆ ಅವಳನ್ನು ಮುತ್ತಿದವು. ನಡೆದದ್ದನ್ನು ಮರೆಯೋದಕ್ಕೆ ಆಗುತ್ತಿರಲಿಲ್ಲ, ಅವಳನ್ನು ಬೀದಿಗೆ ಕರೆಸಿ ಕಪಾಳಕ್ಕೆ ಬಾರಿಸಿದ್ದರು. ಅವಳನ್ನು ಮಾರಾಟಕ್ಕಿಟ್ಟ ಪ್ರಾಣಿಯಂತೆ ಕಂಡಿದ್ದರು. ಮುಖದ ಮೇಲೆ ಟಾರ್ಚ್ ಬಿಟ್ಟು ಏನು ಮೈಕೈ ತುಂಬಿಕೊಂಡವಳೋ ಇಲ್ಲ ನರಪೇತಲವೋ ಅಂತ ನೋಡಿದರಲ್ಲ. ನೋಡಿ ಬಿಟ್ಹಾಕಿ ಹೋದ್ರಲ್ಲ.

ಆ ಮನುಷ್ಯ ವಾಪಸು ಬಂದರೆ, ಬಟ್ಟೆ ಎಲ್ಲ ಕಿತ್ತಾಕಿ ಅವನೆದುರು ನಿಂತು 'ನೋಡೋ, ನಿಂಗೆ ಬೇಕಾದ್ದು ಇದೆ ಅಲ್ಲವಾ? ಬಾ ಪುಕ್ಕಟೆ ಭೋಗಿಸಿ ಹೋಗು. ಆದರೆ ಈ ದೇಹದ ಒಳಗಿರೋ ಹೆಣ್ ಹೆಂಗಸನ್ನು ನೀನೆಂದೂ



ತಟ್ಟಲಾರೆಯೋ!' ಎಂದು ಚೀರಬೇಕು ಅಂತ ಅವಳಿಗೆ ಅನಿಸಿತು.

ಕೋಣೆಯ ಬಾಗಿಲ ಬೀಗ ತೆರೆಯಲು ತನ್ನ ಬಾಡಿಯ ಅಡಿ ಇಟ್ಟುಕೊಂಡಿದ್ದ ಬೀಗದ ಕೈ ಹೊರತೆಗೆದಳು. ಆದರೆ ಬೀಗವಾಗಲೇ ತೆರೆದಿತ್ತು. ಮೆಲ್ಲಗೆ ಬಾಗಿಲು ದೂಡಿದಳು. ಬಾಗಿಲು ಕಿರುಗುಟ್ಟಿತು. ಒಳಗಿನಿಂದ ಹಾಕಿದ್ದ ಚಿಲಕ ತೆರೆಯಿತು. ಅವಳು ಒಳಗೆಹೋದಳು.

ಮಧು ತನ್ನ ಪೊದೆಮೀಸೆಯೊಳಗಿಂದ ನಗುತ್ತ ಜತನದಿಂದ ಚಿಲಕ ಹಾಕಿ "ಕೊನೆಗೂ ನನ್ನ ಮಾತು ಪಾಲಿಸಿದೆ ನೋಡು. ಬೆಳಗಿನ ಜಾವದ ವಾಕಿಂಗ್ ಮಾಡಿ ಬಂದೆಯಲ್ಲವಾ. ದೇಹದ ಆರೋಗ್ಯಕ್ಕೆ ಬೆಳಗಿನ ವಾಕಿಂಗ್‌ಗಿಂತ ಉತ್ತಮವಾದ ಬೇರೆ ಮದ್ದಿಲ್ಲ ಕಣೆ. ದೇಹದ ಆಯಾಸ ಹೀಗೇ ಮಾಯ ಆಗಿಬಿಡ್ತದೆ. ಮತ್ತೆ ನಿನ್ನನ್ನು ಕಾಡೊ ಬೆನ್ನುನೋವೂ ಗುಣವಾಗ್ತದೆ ಗೊತ್ತ. ಹೂಂ, ಎಷ್ಟು ದೂರ ಹೋಗಿದ್ದೆ? ವಿಕ್ಟೋರಿಯ ಗಾರ್ಡನ್ನಿನ ತನಕ ಹೋಗಿಬಂದೆಯ?" ಅಂತ ಕೇಳಿದ.

ಸೌಗಂಧಿ ಉತ್ತರಿಸಲಿಲ್ಲ, ಮಧುವಿಗೂ ಉತ್ತರ ಬೇಕಿರಲಿಲ್ಲ. ಅವನು ತನ್ನ ಮಾತುಗಳನ್ನು ಅವಳು ಕೇಳಬೇಕೆನ್ನುವವನೇ ಹೊರತು ತಿರುಗಿ ಅವಳ ಮಾತನ್ನು ಕೇಳುವ ಕಿವಿ ಇದ್ದವನಲ್ಲ.

ಮಧು, ಈಗಾಗಲೇ ಅವನ ತಲೆಕೂದಲ ಎಣ್ಣೆಯಿಂದ ಮೇಣಗಟ್ಟಿ ಕಪ್ಪಾಗಿದ ಬೆತ್ತದ ಕುರ್ಚಿಯಲ್ಲಿ ಕಾಲಮೇಲೆ ಕಾಲು ಹಾಕಿಕೊಂಡು, ಒಂದು ಕಾಲನ್ನು ಅಲ್ಲಾಡಿಸುತ್ತ ಪೊದೆ ಮೀಸೆಯ ಜೊತೆ ಆಟವಾಡುತ್ತ ಕೂತ. ಸೌಗಂಧಿ ಮಂಚದ ಮೇಲೆ ಕೂತಳು. "ಇವತ್ತು ನಿನಗಾಗಿ ಕಾಯ್ತ ಇದ್ದೆ" ಅಂದಳು.

ಮಧು "ಕಾಯ್ತ ಇದ್ದೆಯಾ?" ಅಂತ ಅಚ್ಚರಿ ತೋರುತ್ತ "ನಾನು ಇವತ್ತು ಬರ್ತೀನಿ ಅಂತ ನಿಂಗೆ ಹ್ಯಾಗೆ ಗೊತ್ತಾಯ್ತು?" ಅಂತ ಕೇಳಿದ.

ಸೌಗಂಧಿ ನಸುನಕ್ಕು ಹೇಳಿದಳು "ನಿನ್ನೆ ರಾತ್ರಿ ನಿನ್ನ ಕನಸು ಕಂಡೆ. ಬೆಳಗ್ಗೆ ಎದ್ದು ನೋಡಿದ್ರೆ ನೀನು ಇರ್ಲಿಲ್ಲ, ಎದ್ದು ವಾಕಿಂಗ್ ಹೋದೆ."

"ನೀನು ತಿರುಗಿ ಬಂದಾಗ ನಾನು ಹಾಜರ್" ಎಂದು ಮಧು ಖುಷಿಯಲ್ಲಿ ಹೇಳಿದ. "ದೊಡ್ಡೋರ ಮಾತೆ ಇದೆಯಲ್ಲ-ಪ್ರೇಮಿಗಳ ಹೃದಯ ಒಟ್ಟಿಗೆ ಮಿಡಿತದೆ ಅಂತ! ಎಷ್ಟು ಹೊತ್ತಿಗೆ ನನ್ನ ಕನಸು ಕಂಡೆ?" ಅಂದ.

ಸೌಗಂಧಿ "ಈಗ್ಗೆ ಎರಡು ತಾಸಿನ ಹಿಂದೆ" ಅಂದಳು.

ಮಧು "ಆಹಾ! ಸರಿಸುಮಾರು ಅದೇ ಹೊತ್ತಿಗೆ ನೀನೂ ನನ್ನ ಕನಸಲ್ಲಿದ್ದೆ, ಹೂವಿನ ಚಿತ್ತಾರದ ಸೀರೆ ಉಟ್ಟಿದ್ದೆ, ಇದೇ ಈಗ ಉಟ್ಟಿದಿಯಲ್ಲ ಇದೇ ಸೀರೆ! ಮತ್ತೆ ನಿನ್ನ ಕೈಲ್ಲಿ ಏನೋ ಇತ್ತು, ಏನು ಅಂತಿಯ! ಕಾಸು ತುಂಬಿದ್ದ ಪುಟ್ಟ ಚೀಲ! ಮತ್ತೆ ನೀನಂದೆ 'ಮಧು ನೀನ್ಯಾಕೆ ಹಣದ ಬಗ್ಗೆ ಅಷ್ಟು ತಲೆಕೆಡಿಸ್ಕೋತಿಯ! ಈಗೋ ನಂದೆಲ್ಲಾ ನಿಂದೇ ಅಲ್ಲವಾ!' ನಿನ್ನ ಮೇಲೆ ಆಣೆ ಇಟ್ಟು ಹೇಳ್ತೀನಿ. ಕನಸಿಂದ ಎದ್ದೋನೆ ಪೂನಾದಿಂದ ಸೀದ ಬಾಂಬೆಗೆ ಬಂದೆ ನೋಡು. ಆದ್ರೆ ಒಂದು ಕೆಟ್ಟ ಸುದ್ದಿ ಇದೆ. ನಾನು ಕಷ್ಟಕ್ಕೆ ಸಿಕ್ಕಿದ್ದೇನೆ. ಮಾಡಬೇಕಾದ ತನಿಖೆಯೊಂದನ್ನು ನೆಟ್ಟಗೆ ಮಾಡ್ಲಿಲ್ಲ. ಈಗ ಇನ್ಸ್‌ಪೆಕ್ಟರಿಗೆ ಇಪ್ಪತ್ತೊ-ಮೂವತ್ತೋ ಲಂಚ ಕೊಡದೆ ಹೋದ್ರೆ ಕೆಲಸ ಕಳ್ಕೋಳೊ ಪರಿಸ್ಥಿತಿ ಬಂದಿದೆ. ಇರಲಿ, ಈಗ ಅದೆಲ್ಲಾ ಬಿಡು. ನೀನು ದಣಿದಿದ್ದೀಯ ಅಂತ ಕಾಣುತ್ತೆ, ಒಂಚೂರು ಮಲಗಿ ಆರಾಮ ಮಾಡು ಚಿನ್ನ, ನಾನು ನಿನ್ನ ಕಾಲು ಒತ್ತೇನೆ. ಅಭ್ಯಾಸವಿಲ್ಲದೆ ಇದ್ರೆ ವಾಕಿಂಗ್ ಮಾಡಿ ಸುಸ್ತಾಗುತ್ತೆ. ಎಲ್ಲಿ ಮೈಚಾಚಿ ನಿನ್ನ ಕಾಲನ ಈಚೆ ಕೊಡು" ಅಂದ.

ಸೌಗಂಧಿ ತನ್ನ ತೋಳ ಮೇಲೆ ತಲೆ ಇಟ್ಟು ಮಲಗಿದಳು. ಅವಳದಲ್ಲದ ದನಿಯಲ್ಲಿ "ಮಧು, ನಿನ್ನನ್ನು ಕಷ್ಟಕ್ಕೆ ದೂಡಿರುವ ಆ ಜನ ಯಾರು? ನೀನು ಕೆಲಸ ಕಳೆದುಕೊಂಡು, ಜೈಲು ಸೇರುವಂತಹ ಸ್ಥಿತಿ ಇದ್ದಲ್ಲಿ ನನಗೆ ತಿಳಿಸು. ಅಂಥ ಪರಿಸ್ಥಿತಿಯಲ್ಲಿ ಹೆಚ್ಚು ಲಂಚ ಕೊಟ್ಟರೆ ನೀನು ಕ್ಷೇಮವಾಗಿರಬಹುದು. ನೀನು ನಿನ್ನ ನೌಕರಿಯ ಬಗ್ಗೆ ಕೆಟ್ಟ ಸುದ್ದಿ ಹೇಳಿದಾಗಿನಿಂದ ನನ್ನ ಎದೆಹೊಡೆದುಕೊಳ್ಳುತ್ತಿದೆ. ಅದು ಒತ್ತಟಿಗಿರಲಿ. ನೀನು ಯಾವಾಗ ವಾಪಾಸು ಹೋಗುತ್ತಿ?" ಎಂದು ಕೇಳಿದಳು. ಮಧು ಅವಳ ಬಾಯಿಂದ ಹೊರಟ ಶರಾಬಿನ ವಾಸನೆ ಹಿಡಿದು, ಗಾಳ ಹಾಕಲು ಇದೆ ಒಳ್ಳೆ ಸಮಯವೆಂದರಿತು "ಮಧ್ಯಾಹ್ನದ ಹೊತ್ತಿಗೆ ಹೊರಡಬೇಕು. ಸಂಜೆಯೊಳಗೆ ಇನ್ಸ್‌ಪೆಕ್ಟರ್ ಕಿಸೆಯಲ್ಲಿ ಐವತ್ತೋ ನೂರೋ ತುರುಕಬೇಕು" ಅಂದ.

"ಐವತ್ತು ರೂಪಾಯಿಯಾ!" ಅಂದು ಸೌಗಂಧಿ ಹಾಸಿಗೆ ಬಿಟ್ಟು ಎದ್ದಳು. ಗೋಡೆಗೆ ತೂಗು ಹಾಕಿದ್ದ ಫೋಟೋಗಳ ಎದುರು ಹೋಗಿ ನಿಂತಳು. ಸಾಲಿನಲ್ಲಿ ಮೂರನೆಯದು ಮಧುವಿನ ಫೋಟೋವಾಗಿತ್ತು. ಅದರಲ್ಲಿ ಅವನು ಎರಡು ಕೈಗಳನ್ನು ತೊಡೆ ಮೇಲಿಟ್ಟು ಕುರ್ಚಿಯಲ್ಲಿ ಕೂತಿದ್ದ. ಹಿನ್ನೆಲೆಯಲ್ಲಿ ಪೇಂಟನಿಂದ ಹೂವಿನ ಚಿತ್ತಾರ ಬರೆದಿರುವ ಕಪ್ಪು ಪರದೆ ಇತ್ತು. ಹಾಕಿದ ಕೋಟಿನ ಎದೆಯಲ್ಲಿ ಗುಲಾಬಿ ಸಿಕ್ಕಿಸಿಕೊಂಡಿದ್ದ. ಕುರ್ಚಿ ಪಕ್ಕದಲ್ಲಿದ್ದ ಗಿಡ್ಡ ಮೇಜಿನ ಮೇಲೆ ಎರಡು ದಪ್ಪನೆ ಪುಸ್ತಕಗಳನ್ನು ಜೋಡಿಸಿಡಲಾಗಿತ್ತು. ಕ್ಯಾಮರಾವನ್ನೇ ದಿಟ್ಟಿಸುವ ಅಸಹಜ ವಕ್ರ ಮುಖಚರ್ಯೆಯೊಂದಿಗೆ ಮಧು ಪೋಸು ಕೊಟ್ಟಿದ್ದ.

ಸೌಗಂಧಿ ನಗತೊಡಗಿದಳು. "ಯಾಕೆ ನಗುವಂಥದ್ದೇನಿದೆ ಫೋಟೋದಲ್ಲಿ?" ಎಂದು ಮಧು ಕೇಳಿದ.

ಸೌಗಂಧಿ ಸಾಲಿನಲ್ಲಿ ಮೊದಲನೆಯದಾಗಿದ್ದ ಮುನ್ಸಿಪಾಲಿಟಿ ಆರೋಗ್ಯಾಧಿಕಾರಿಯ ಫೋಟೋಕ್ಕೆ ಕೈಹಾಕಿದಳು. "ಇವನ ಮುಖ ನೋಡು. ಒಬ್ಬ ರಾಣಿ ತನ್ನ ಮೋಹಪಾಶಕ್ಕೆ ಬಿದ್ದಿದ್ದಳು ಅಂತ ಇವನು ಹೇಳ್ಕೊತಾನೆ ಗೊತ್ತಾ! ಈ ಮುಖಕ್ಕೆ ರಾಣಿ ಬೇರೆ ಕೇಡು" ಎಂದು ಗಾರೆ ಕಿತ್ತುಬರುವಷ್ಟು ರಭಸದಲ್ಲಿ ಗೋಡೆಯಿಂದ ಫೋಟೋವನ್ನು ಕಿತ್ತು ನೆಲಕ್ಕಪ್ಪಳಿಸಿದಳು. "ಬೆಳಗ್ಗೆ ಕಸ ಗುಡಿಸೋ ನಮ್ಮ ರಾಣಿ ಬಂದು, ಈ ರಾಜನನ್ನು ಬಾಕಿ ಕಸದ ಜೊತೆ ಎತ್ಕೊಂಡು ಹೋಗ್ತಾಳೆ" ಅಂದು ಹುರುರವಾಗಿ ನಗತೊಡಗಿದಳು. ಆ ನಗು ಬೇಸಿಗೆಯ ಮೊದಲ ಮಳೆಯಂತಿತ್ತು. ಮಧು ಕಷ್ಟದಲ್ಲಿ ಕಿರುನಗೆ ಹೊಮ್ಮಿಸಿ ನಂತರ ಬಲವಂತದಿಂದ ಗಹಗಹಿಸಿ ನಗತೊಡಗಿದ.

ಅಷ್ಟರಲ್ಲಿ ಸೌಗಂಧಿ ಸಾಲಿನಲ್ಲಿದ್ದ ಎರಡನೇ ಫೋಟೋವನ್ನು ಕಿತ್ತು ಕಿಟಕಿಯಿಂದ ಬೀದಿಗೆ ಬಿಸಾಡಿದಳು. ಈಗ ಮಧುವಿನ ಫೋಟೋಕ್ಕೆ ಕೈಹಚ್ಚಿ "ಈ ಬೋಳಿಮಗ ಇಲ್ಲೇನು ಮಾಡ್ತಿದ್ದಾನೆ. ಹ್ಯಾಪು ಮೋರೆ ಖದಿಮರು ಈ ಗೋಡೆಯಲ್ಲಿ ಮೆರೆಯೋದು ನಂಗೇನೂ ಇಷ್ಟವಿಲ್ಲ. ಇದು ನೀನಾ ಮಧು!" ಅಂದಳು. ಮಧು ಪೆದ್ದುಪೆದ್ದಾಗಿ ನಕ್ಕ.

ಅವಳು ರುಮಾಲು ಸುತ್ತಿಕೊಂಡಿದ್ದ ಗಂಡಸಿನ ನಾಲ್ಕನೇ ಫೋಟೋವನ್ನು ಕಿತ್ತಿ, ನಂತರ ಮಧು ಆತಂಕದಿಂದ ನೋಡುತ್ತಿರುವಂತೆಯೇ ಅವನ ಫೋಟೋವನ್ನೂ ಗೋಡೆಯಿಂದೆಳೆದು, ಎರಡನ್ನೂ ಕಿಟಕಿಯಾಚೆ ಬೀದಿಗೆಸೆದಳು. ನೆಲಕ್ಕಪ್ಪಳಿಸಿ ಗಾಜು ಪುಡಿಪುಡಿಯಾದ ಶಬ್ದ ಇಬ್ಬರಿಗೂ ಕೇಳಿತು. ಇಷ್ಟಾದರೂ ಮಧು ಸಾವರಿಸಿಕೊಂಡು "ಒಳ್ಳೇ ಕೆಲಸ ಮಾಡಿದೆ! ನಂಗೂ ಆ ನನ್ನ ಫೋಟೋ ಒಂಚೂರು ಇಷ್ಟವಿರಲಿಲ್ಲ" ಅಂದ.

ಸೌಗಂಧಿ ನಿಧಾನಕ್ಕೆ ಅವನ ಸಮೀಪ ಬಂದಳು. "ಹೂಂ! ನಿನ್ನ ಫೋಟೊ ನಿನಗೇ ಇಷ್ಟವಾಗಿರ್ಲಿಲ್ಲ ಅಲ್ವಾ? ನಿನ್ನಲ್ಲಿ ಇಷ್ಟಪಡೋಂಥದ್ದು ಏನಿದೆ ಹೇಳಯ್ಯ? ಈ ನಿನ್ನ ದೊಣ ಮೂಗೊ! ಕೂದಲು ತುಂಬಿಕೊಂಡ


>>> 16

15ನೇ ಕಂತು ಸೌಗಂಧಿ

ಇಷ್ಟು ಹಸೆಯೋ! ಊದಿಕೊಂಡಿರೊ ಆ ಮೂಗಿನ ತೊಳ್ಳೆಗಳೋ! ಸೊಟ್ಟಗಿನ ಕಿವಿಗಳೋ! ಗಬ್ಬು ಉಸಿರೋ! ಕೊಳಕಾದ ಮೈಯೋ! ತೊಪ್ಪೆ ಎಣ್ಣೆ ಮೆತ್ತಿಕೊಂಡಿರೋ ಈ ನಿನ್ನ ಕೂದಲೋ! ಆಹಾ! ಆ ನಿನ್ನ ಫೋಟೊ ನಿಂಗೆ ಇಷ್ಟ ಇರ್ಲಿಲ್ಲ ಅಲ್ವೇನಯ್ಯ?" ಅಂದಳು.

ಮಧು ಮೆಲ್ಲಗೆ ಗೋಡೆಗೆ ಬೆನ್ನು ತಾಗುವವರೆಗೂ ಅವಳಿಂದ ದೂರ ಹಿಮ್ಮೆಟ್ಟಿದ. ಧ್ವನಿಯಲ್ಲಿ ಒಂಚೂರು ದರ್ಪ ತಂದುಕೊಂಡು "ನೋಡು ಸೌಗಂಧಿ... ನೀನು ನಿನ್ನ ಹಳೆ ದಂಧೆಗೆ ಮತ್ತೆ ಜಾರಿದ್ದೀಯ ಅಂತ ಕಾಣ್ತದೆ. ಕೊನೆ ಸಾರಿಗೆ ಹೇಳ್ತಿದ್ದೇನೆ..." ಅನ್ನತೊಡಗಿದ.

ಸೌಗಂಧಿ "ನೀನು ಆ ನಿನ್ನ ಆ ಹೊಲಸು ದಂಧೆಗೆ ಮತ್ತೇ ಜಾರಿದರೆ, ಅಲ್ಲಿಗೆ ಕತೆ ಮುಗಿತು. ಇನ್ನೊಬ್ಬನ ಜೊತೆ ನೀನು ಹಾಸಿಗೆಯಲ್ಲಿ ಮಲಗಿದ್ದು ಕಂಡ್ರೆ, ಮುಡಿ



ಹಿಡಿದು ದರದರ ಎಳ್ಕೊಂಡು ಹೋಗಿ ಬೀದಿಗೆಸೆಯುತ್ತೇನೆ. ನಿಂಗೆ ತಿಂಗಳ ಖರ್ಚಿಗೆ ಕಾಸು ಬೇಕು ತಾನೇ! ಪುಣೆಗೆ ಹೋದ ತಕ್ಷಣವೇ ಮನಿ ಆರ್ಡರ್ ಕಳಿಸ್ತೇನೆ. ಈ ನಿನ್ನ ಕೋಣೆಗೆ ಎಷ್ಟು ಬಾಡಿಗೆ ಅಂದೆ?" ಎಂದು ಅವನನ್ನು ಅಣಕಿಸತೊಡಗಿದಳು.

ಮಧು ಹೌಹಾರಿ ಕೇಳುತ್ತಿದ್ದ.

ಸೌಗಂಧಿ ಮಾತಿನ್ನೂ ಮುಗಿದಿರಲಿಲ್ಲ, "ನನ್ನ ತಿಂಗಳ ಖರ್ಚು ಎಷ್ಟು ಅಂತ ಕೇಳ್ತಿಯಾ? ಹದಿನೈದು ರೂಪಾಯಿ. ಮತ್ತೆ ನನ್ನ ಮೈಗೆಷ್ಟು ಬಾಡಿಗೆ ಅಂತ ಕೇಳ್ತಿಯಾ? ಹತ್ತು ರೂಪಾಯಿ. ಅದರಲ್ಲಿ ರಾಮ್‌ಲಾಲ್‌ಗೆ ಬರೋಬರಿ ಎರಡು ರೂಪಾಯಿ ಎಂಟಾಣೆ ಹೋಗುತ್ತೆ. ಮಿಕ್ಕೋದು ಏಳು ರೂಪಾಯಿ ಎಂಟಾಣೆ. ಇಷ್ಟಕ್ಕೆ ನಾನು ಗಂಡಸರಿಗೆ ಮೈಯೊಡ್ಡಿನಿ. ನಮ್ಮಿಬ್ಬರ ನಡುವಿನ ಸಂಬಂಧ ಏನಯ್ಯ? ಹತ್ತು ಬರಿ ಹತ್ತೇ ರೂಪಾಯಿ ಸಂಬಂಧ. ಪ್ರತಿ ಸಾರಿ ಬರ್ತೀಯ, ಹಣ ಸೇರ್ದ ಹಾಗೆ ಎಲ್ಲನೂ ದೋಚಿ ಹೋಗ್ತಿಯ. ಸಂಬಂಧ ಹತ್ತು ರೂಪಾಯಿದಿತ್ತು, ಅದಿವತ್ತು ಐವತ್ತು ರೂಪಾಯಿದಾಗಿದೆ" ಅನ್ನುತ್ತ ತನ್ನ ಒಂದೇ ಬೆರಳಿಂದ ಅವನ ತಲೆಯ ಮೇಲಿನ ಟೋಪಿ ಎಗುರಿಸಿದಳು. ಅದು ಎಗರಿ ನೆಲಕ್ಕೆ ಬಿತ್ತು.

"ಸೌಗಂಧಿ" ಎಂದು ಮಧು ಬೊಬ್ಬೆ ಹಾಕಿದ.

ಅವಳು ಕ್ಯಾರೇ ಅನ್ನಲಿಲ್ಲ, ಅವನ ಕಿಸೆಯಿಂದ ದಸ್ತಿ ಹೊರಗೆಳೆದು ತನ್ನ ಮೂಗಿನ ಹತ್ತಿರ ಹಿಡಿದು ವಾಕರಿಕೆ ಮುಖ ಮಾಡಿ "ಕೊಳಕು ನಾರ್ತದೆ! ನೀನು, ನಿನ್ನ ಟೊಪ್ಪಿ ನೀನು ಬಟ್ಟೆ ಅಂತ ತೊಟ್ಟರೊ ಚಿಂದಿ, ಎಲ್ಲಾ ಕೊಳಕು ನಾರ್ತವೆ. ಈಗ್ಲೇ ಇಲ್ಲಿಂದ ತೊಲಗು" ಅಂದಳು.

ಅವನು ಮತ್ತೊಮ್ಮೆ "ಸೌಗಂಧಿ" ಎಂದು ಚೀರಿದ.

ಅವಳು ತಿರುಗಿ ಹೊಡೆದಳು – "ಹುಳ, ಹುಳ ನೀನು! ಯಾಕಯ್ಯ ಬರ್ತೀಯ ಇಲ್ಲಿಗೆ? ನಿನ್ನ ಖರ್ಚಿಗೆ ಕಾಸು ಕೊಡೊಕೆ ನಾನೇನು ನಿನ್ನ ಹಡೆದ ತಾಯಿನ? ಆಹಾ! ನಾನು ನಿನ್ನ ಮೋಹಪಾಶದಲ್ಲಿ ಬೀಳೋಕೆ ನೀನೇನು ಮೋಹನಾಂಗನೆನ್ನಯ್ಯ? ಕಂತ್ರಿ ನಾಯಿ ನೀನು. ನನ್ನ ಮೇಲೆ ದರ್ಪ ತೋರಿಸ್ತೀಯ! ನೀನೇನೂ ಅಲ್ಲ ನಂಗೆ. ನೀನೊಬ್ಬ ತಿರುಬೋಕಿ. ಏನಯ್ಯ ನಿನ್ನ ಯೋಗ್ಯತೆ? ನಿನ್ನೊಬ್ಬ ಕನ್ನ ಹಾಕೋ ಕಳ್ಳನಾ, ಕಿಸೆಗಳ್ಳನಾ? ಈ ಹೊತ್ತಲ್ಲದ ಹೊತ್ತಲ್ಲಿ ಈ ಮನೆಗೆ ಯಾಕ್ ಬಂದಿದೀಯ? ಪೊಲೀಸರನ್ನ ಕರಿಲಾ? ಪೂಣೆಯಲ್ಲಿ ನಿನ್ನ ಮೇಲೆ ಕೇಸು ಇದೆಯೋ ಇಲ್ವೋ ಬಾಂಬೆಯಲ್ಲಂತು ಒಂದು ಕೇಸು ಬೀಳುತ್ತೆ ಹುಷಾರ್!"

ಮಧು ಪದರುಗುಟ್ಟತೊಡಗಿದ. "ಸೌಗಂಧಿ! ಏನು ಮೆಟ್ಕೊಂಡಿದಿಯೇ ನಿನ್ನ?" ಅಂದ.


"ನೀನ್ಯಾವನಯ್ಯ ಅದನ್ನ ಕೇಳೋಕೆ? ಈಗ್ಲೇ ಇಲ್ಲಿಂದ ತೊಲಗು" ಎಂದು ಗುರಾಯಿಸಿದಳು. ಅಷ್ಟು ಹೊತ್ತು ತೆಪ್ಪಗೆ ಮಲಗಿದ್ದ ಅವಳ ನಾಯಿ ಚಂಗನೆ ಎದ್ದು ಬಂದು ಮಧುವಿಗೆ ಬೊಗಳತೊಡಗಿತು. ಸೌಗಂಧಿ ಮೈಮೇಲೆ ಬಂದವರ ಹಾಗೆ ನಗತೊಡಗಿದಳು.

ಮಧು ನೆಲದ ಮೇಲೆ ಬಿದ್ದಿದ್ರೊ ತನ್ನ ಟೊಪ್ಪಿಯನ್ನು ಎತ್ತಿಕೊಳ್ಳೋಕೆ ಬಗ್ಗಿದ. "ಮುಟ್ಟ ಬೇಡ! ಅಲ್ಲೇ ಬಿದ್ದಿರ್ಲಿ ಅದು. ನೀನು ಪುಣೆ ಸೇರಿದಾಕ್ಷಣ ಅದನ್ನು ನಿಂಗೆ ಮನಿ ಆರ್ಡರ್ ಮಾಡ್ತೀನಿ" ಅಂತ ಅವಳು ಗದರಿ ಮತ್ತೆ ನಗತೊಡಗಿದಳು. ನಗುನಗುತ್ತಾ ಕುರ್ಚಿಯಲ್ಲಿ ಕುಸಿದುಕೂತಳು. ಆ ಹೊತ್ತಿಗೆ ನಾಯಿಯು ಮಧುವನ್ನು ಬೆನ್ನತ್ತಿ ಬೀದಿಗೆ ತಳ್ಳಿ, ತನ್ನ ವಿಕಾರ ಮೋಟು ಬಾಲ ಅಲ್ಲಾಡಿ ಸುತ್ತಾ ಕಿವಿ ನಿಮಿರಿಸಿಕೊಂಡು ಬಂದು ಸೌಗಂಧಿಯ ಕಾಲ ಬಳಿ ಕೂತಿತು. ಸುತ್ತಲ ವಾತಾವರಣವೆಲ್ಲ ಸ್ತಬ್ಧವಾಗಿತ್ತು, ಆರೆಗಳಿಗೆ ಸೌಗಂಧಿ ಭಯದಲ್ಲಿ ನಡುಗಿದಳು. ಪ್ರಯಾಣಿಕರನ್ನೆಲ್ಲ ಇಳಿಸಿ, ನಿಲುಗಡೆ ತಾಣದಲ್ಲಿ ನಿಂತಿರುವ ರೈಲು ಬೋಗಿಯ ಹಾಗೆ ತಾನೂ ಖಾಲಿಯಾದಂತೆ ಸೌಗಂಧಿಗೆ ಅನಿಸಿತು.

ಹಾಗೆ ತುಂಬ ಹೊತ್ತು ಕುರ್ಚಿಯಲ್ಲಿ ಕೂತಿದ್ದಳು. ನಂತರ ಮೆಲ್ಲನೆ ಎದ್ದಳು. ನಾಯಿಯನ್ನು ಎತ್ತಿ ತುಂಬ ಜತನದಿಂದ ಮಂಚದ ಮೇಲೆ ಮಲಗಿಸಿದಳು. ಅದರ ಪಕ್ಕ ಮಲಗಿ, ಅದರ ದರಿದ್ರ ಮೈಮೇಲೆ ತೋಳು ಹಾಕಿ ನಿದ್ದೆ ಹೋದಳು.

ಗಿರಡ್ಡಿಯವರು ಸಾಹಿತ್ಯ ಸಂಭ್ರಮದ ಕುರಿತ ತಮ್ಮ ದೃಷ್ಟಿ ಧೋರಣೆಗಳ ಬಗ್ಗೆ ಕಿಂಚಿತ್ತೂ ವಿಷಾದವಿಲ್ಲದ ರೀತಿಯಲ್ಲಿ ಆ ಸಮಾವೇಶದ ಸಮಾರೋಪದಲ್ಲಿ ಮಾತಾಡಿದ್ದು ನೋಡಿದಾಗ ಸಾರ್ವಜನಿಕರ ತಿಳಿವಳಿಕೆಯಲ್ಲಿ ಅವರ ನಿಲುವು-ಮಾತುಗಳೇ ಅಂತಿಮವಾದವು ಎಂಬ ಕಾರಣಕ್ಕೆ ಸ್ವಲ್ಪ ವಿವರಣೆ ಕೊಡುವ ರೀತಿಯ ಬರಹ ಇಲ್ಲಿದೆ.

— ಅಶೋಕ ಶೆಟ್ಟರ್



ಸಾಹಿತ್ಯ ಸಂಭ್ರಮ: ಮಳೆ ನಿಂತ ಮೇಲೆ ಕೆಲವು ಮರದ ಹನಿಗಳು

ಧಾರವಾಡದಲ್ಲಿ 'ಧಾರವಾಡ ಸಾಹಿತ್ಯ ಸಂಭ್ರಮ' ಎಂಬ ಖಾಸಗಿ ನೋಂದಾಯಿತ ಸಂಸ್ಥೆಯೊಂದು ಆಯೋಜಿಸಿದ್ದ ಅದೇ ಹೆಸರಿನ ಸಮಾವೇಶ ಮುಗಿದಿದೆ. ಅಲ್ಲೇನಾಯ್ತೋ, ಏನಿಲ್ಲವೋ, ಏನು ಸಾಧಿತವಾಯಿತೋ ಗೊತ್ತಿಲ್ಲ. ಅದರ ವರದಿಗಳನ್ನು ಓದಿದ ನಮಗೆ – ಅಂದರೆ ತಾತ್ವಿಕವಾದ ನೆಲೆಗಳಲ್ಲಿ ಆ ಸಮಾವೇಶದ ಧಾಟಿ ಧೋರಣೆಗಳೊಂದಿಗೆ ಭಿನ್ನವಾಗಿ ಯೋಚಿಸಿ ಅದರಿಂದ ದೂರ ಉಳಿದವರಿಗೆ- ಅದರ ಕುರಿತು ಸಂಭ್ರಮವೂ ಇಲ್ಲ, ಸಂಕಟವೂ ಇಲ್ಲ, ನಾವು ಆ ಕುರಿತ ನಮ್ಮ ಚಿಂತನೆಯಲ್ಲಿ ತುಂಬ ಸೂಕ್ಷ್ಮವಾಗಿದ್ದೇವೆಂಬುದನ್ನು ಮಾತ್ರ ನಾನಿಲ್ಲಿ ಹೇಳಬಯಸುತ್ತೇನೆ. ಅಲ್ಲಿ ಭಾಗವಹಿಸಿದ ನಮ್ಮ ನಾಡಿನ, ಭಾಷೆಯ ಹಿರಿಯ ಲೇಖಕರನ್ನು ನಮ್ಮ ಪ್ರಜ್ಞಾವಲಯದ ಕಪ್ಪು ಪಟ್ಟಿಯಲ್ಲಿರಿಸುವ ಅಥವಾ ಖಳರೆಂಬಂತೆ ನೋಡುವ ಸಣ್ಣತನ ನಮ್ಮದಲ್ಲ. ಕೋಮುವಾದಿ ಚಿಂತನೆಯ ವಿಷ ನಿಧನಿಧಾನವಾಗಿ ನಮ್ಮ ಸಾಮಾಜಿಕ, ರಾಜಕೀಯ ಬದುಕಿನ ತುಂಬ ವ್ಯಾಪಿಸುತ್ತಿರುವಾಗ ಅದರ ವಿರುದ್ಧ ದಿಟ್ಟ ನಿಲುವು ತಳೆಯುತ್ತ ಬಂದಿರುವ ಯು.ಆರ್. ಅನಂತಮೂರ್ತಿಯವರಾಗಲಿ, ಗಿರೀಶ್ ಕಾರ್ನಾಡ್ ಅವರಾಗಲಿ ಧಾಸಾಸಂನಲ್ಲಿ ಭಾಗವಹಿಸುವ ಸಂಪನ್ಮೂಲ ವ್ಯಕ್ತಿಗಳ ಯಾದಿಯಲ್ಲಿ ಇದ್ದರೆಂದ ಮಾತ್ರಕ್ಕೆ ನಮಗೆ ಅದು ಹೇಗೆ ಅಪಥ್ಯರಾದಾರು? ನಮ್ಮ ವಿಮರ್ಶೆಗೆ ಹೊಸ ಜೀವ ತುಂಬಿದ ಜಿ.ಎಸ್.ಆಮೂರ್, ಸಿ.ಎನ್.ರಾಮಚಂದ್ರನ್ ಮುಂತಾದವರು ಅದು ಹೇಗೆ ನಮಗೆ ಆ ಕಾರಣಕ್ಕೆ ತ್ಯಾಜ್ಯರಾಗುತ್ತಾರೆ? ಇಂಥ ಎಲ್ಲ ವಿಷಯಗಳ ಕುರಿತು ನಾವು ಮುಕ್ತವಾಗಿ, ಗಂಭೀರವಾಗಿ ಚರ್ಚಿಸಿದ್ದೇವೆ. ಇದೇ ರೀತಿಯ ಒಂದು ಘನತೆಯನ್ನು, ಗಾಂಭೀರ್ಯವನ್ನು, ಸಜ್ಜನಿಕೆಯನ್ನು ಈ ಉದ್ದಕ್ಕೂ ಧಾಸಾಸಂನ ಅಧಿಕೃತ ವಕ್ತಾರರಾಗಿರುವ ಅದರ ಅಧ್ಯಕ್ಷ ಶ್ರೀಯುತ ಗಿರಡ್ಡಿ ಗೋವಿಂದರಾಜರಿಂದ ನಾವು ನಿರೀಕ್ಷಿಸಿದ್ದೆವು. ದುರದೃಷ್ಟವಶಾತ್ ಆ ನಮ್ಮ ನಿರೀಕ್ಷೆಯನ್ನು ಶ್ರೀಯುತರು ಹುಸಿಗೊಳಿಸಿದ್ದಾರೆ. ಧಾಸಾಸಂ ಸಮಾವೇಶದ ಸಮಾರೋಪ ಸಮಾರಂಭದಲ್ಲಿ ಮಾತನಾಡುತ್ತ ಸಂಭ್ರಮ ಆರಂಭಿಸುವ ಮುನ್ನ ಹಾಗೂ ನಂತರವೂ ಎದುರಾದ ಎಲ್ಲಾ ತರಹದ ವಿರೋಧವನ್ನು ಮುಕ್ತವಾಗಿ ಸ್ವಾಗತಿಸುವುದಾಗಿ ಅವರು ಹೇಳಿದ್ದನ್ನು ಮೆಚ್ಚುತ್ತಿರುವಾಗಲೇ "ವಿರೋಧದ ಹಿಂದೆ ಕೆಡಿಸುವ ಮನಸ್ಸಿರಬಾರದು" ಎಂದೂ ಸೇರಿಸಿದ್ದನ್ನು ಕೇಳಿ ನಾವು ಬೇಸರಗೊಂಡಿದ್ದೇವೆ.

ನಮ್ಮ ಕೆಡಿಸುವ ಮನಸ್ಥಿತಿಯ ಕುರಿತ ಗಿರಡ್ಡಿಯವರ ಗುಮಾನಿ ಏನೆಂದರೆ ನಾವು ಸದಾ ಫೋನ್ ಕರೆ ಮಾಡಿ ಇದರಲ್ಲಿ ಪಾಲ್ಗೊಳ್ಳದಂತೆ ಸಂಪನ್ಮೂಲ ವ್ಯಕ್ತಿಗಳ ಮೇಲೆ, ಆಮಂತ್ರಿತರ ಮೇಲೆ ಒತ್ತಡ ತರುತ್ತಿದ್ದೇವೆಂಬುದು. ಸಾಕಷ್ಟು ವಿನಮ್ರವಾಗಿ ನಾನು ಹೇಳಬಯಸುವುದೇನೆಂದರೆ ಆ ಸಂಭ್ರಮದಲ್ಲಿದ್ದ ಸಂಪನ್ಮೂಲ ವ್ಯಕ್ತಿಗಳ ಅಥವಾ ಅತಿಥಿಗಳ ಯಾದಿಯಲ್ಲಿದ್ದು ಅದರಲ್ಲಿ ಭಾಗವಹಿಸಬೇಕಾಗಿದ್ದ ಡಾ.ಯು.ಆರ್.ಅನಂತಮೂರ್ತಿ, ಟಿ.ಎಸ್.ನಾಗಾಭರಣ, ನಾಗತಿಹಳ್ಳಿ ಚಂದ್ರಶೇಖರ, ಸುಮತೀಂದ್ರ ನಾಡಿಗ, ಸಿದ್ದಲಿಂಗಯ್ಯ ಅಬ್ದುಲ್ ರಶೀದ್, ಜೋಗಿ, ಬೋಳುವಾರು ಮೊಹಮ್ಮದ್ ಕುಂಞ, ಕೆ.ಸತ್ಯನಾರಾಯಣ, ಮುಖ್ಯಮಂತ್ರಿ ಚಂದ್ರು ಮೊದಲಾದವರು ಭಾಗವಹಿಸದೇ ಇರುವುದಕ್ಕೆ ನಾವು ಕಾರಣರಲ್ಲ, ಅಂಥ ಮಟ್ಟಗಿನ ಪ್ರಭಾವ ನಮಗಿಲ್ಲ, ಜೋಗಿ ಸ್ವತಃ ಸಂಭ್ರಮದ ದಿಕ್ಕು ದೆಸೆಗಳನ್ನು ಸಂದೇಹಿಸಿ ಪಾಲ್ಗೊಳ್ಳುವದಿಲ್ಲ ಎಂದು ಘೋಷಿಸಿದವರು. ವಿಶೇಷ ಆಹ್ವಾನಿತರಾಗಿ ಇರಬೇಕಾಗಿದ್ದ ನಾನು, ಜಗದೀಶ ಮಂಗಳೂರುಮಠ, ಎಂ.ಡಿ.ವಕ್ಕುಂದ ವೈಯಕ್ತಿಕವಲ್ಲದ, ತಾತ್ವಿಕ-ಸೈದ್ಧಾಂತಿಕ ಇತ್ಯಾದಿಯಾಗಿ ಹೆಸರಿಸಬಹುದಾದ ಕಾರಣಗಳಿಗಾಗಿ ಹೊರಗುಳಿದವರು. ಇನ್ನು ಕುಂ.ವೀರಭದ್ರಪ್ಪ ರಹಮತ್ ತರೀಕೆರೆ ಮೊದಲಾದವರು ನಮ್ಮ ಆಗ್ರಹ ಕಾರಣವಾಗಿ ಭಾಗವಹಿಸಲಿಲ್ಲ ಎಂದರೆ ಅದು ಅವರ ಗ್ರಹಿಕೆ, ವಿವೇಕ ಮತ್ತು ಸ್ವಂತ ತೀರ್ಮಾನ ಕೈಗೊಳ್ಳುವ ಶಕ್ತಿಯನ್ನು ಅವಮಾನಿಸಿದಂತೆ.

ಹಾಂ, ಹಿಂದೆ ವಿವಿಧ ಸಂದರ್ಭಗಳಲ್ಲಿ ಸಾಹಿತ್ಯಿಕವಾಗಿ, ಸಾಮಾಜಿಕವಾಗಿ ಚಳವಳಿಗಳು ಭುಗಿಲೆದ್ದಾಗ ಜೊತೆಯಾಗಿದ್ದ ನಮ್ಮ ಸಮಾನಮನಸ್ಕರು ಎಂದು ನಾವು ಭಾವಿಸಿಕೊಂಡಿದ್ದ ಹಿರಿಯರೊಬ್ಬರಿಗೆ ನಾವು ಫೋನ್ ಕರೆ ಮಾಡಿ ಸಂಭ್ರಮದಲ್ಲಿ ಭಾಗವಹಿಸುವ ತಮ್ಮ ನಿರ್ಧಾರವನ್ನು ಪುನಃ ಪರಿಶೀಲಿಸುವಂತೆ ಆಗ್ರಹಿಸಿದ್ದು ನಿಜ. ಅದು ನಮ್ಮ ಹಕ್ಕೂ ಹೌದು. ನಮ್ಮ ಆಗ್ರಹವನ್ನು ನಿರಾಕರಿಸಿ, ಸಂಭ್ರಮದಲ್ಲಿ ಪಾಲ್ಗೊಂಡು ತಮ್ಮ ಯಥಾಪ್ರಕಾರದ ಶೈಲಿಯಲ್ಲಿ ಯಾರನ್ನೋ ಚಿಂತಾಜನಕಮೂರ್ತಿಯೆಂದು ಕರೆದು ಶ್ರೋತೃಗಣವನ್ನು ನಗಿಸಿದ ಸದರಿ ಕರುಣಾಜನಕಮೂರ್ತಿ ಹಿರಿಯರು ನಮ್ಮ ಸಮಾನಮನಸ್ಕರೆಂಬ ಭಾವನೆಯು ನಮ್ಮ ಭ್ರಮೆ ಎಂದೂ ಅದನ್ನು ಆದಷ್ಟೂ ಬೇಗ ಕಳಚಿಕೊಳ್ಳಬೇಕೆಂದೂ ಪ್ರಗತಿಪರರು ಮನಗಂಡಿದ್ದಾರೆ. ಗಿರಡ್ಡಿಯವರಿಗೆ ಗೊತ್ತಿರಬೇಕು. ಈ ಪ್ರಗತಿಪರರು ಸಂಭ್ರಮ ಸಮಾವೇಶವನ್ನು ಕೆಡಿಸುವ ಮನಸ್ಥಿತಿಯವರಾಗಿದ್ದರೆ, ಕಲಬುರ್ಗಿಯವರ ಮನೆಯಲ್ಲಿ ನಡೆದ ಸಂಧಾನ ಸಭೆಯಲ್ಲಿ, ಗಿರಡ್ಡಿಯವರ ಸಮ್ಮುಖದಲ್ಲೇ, ಸಂಭ್ರಮ ನಡೆಯುವ ದಿನಗಳಿಗೆ ಪರ್ಯಾಯವಾಗಿಯೇ ಸಮಾವೇಶ ನಡೆಸುವ ಸಿದ್ಧತೆಯ ದಾರಿಯಲ್ಲಿ ಆದಾಗಲೇ ಬಹು ದೂರ ಕ್ರಮಿಸಿದ್ದ ತಮ್ಮ



ನಿರ್ಧಾರವನ್ನು ಅವರು ಕೈಬಿಡುತ್ತಿರಲಿಲ್ಲ, ಕೈ ಹಿಡಿದು ಪ್ರೀತಿಯಿಂದ ಹೇಳಿದ ಹಿರಿಯರ ಮಾತಿಗೆ ಪ್ರಗತಿಪರರು ಕೊಟ್ಟ ಗೌರವಕ್ಕೆ ಪ್ರತಿಯಾಗಿ ಗಿರಡ್ಡಿಯವರೂ ಸ್ವಲ್ಪ ಮಟ್ಟಗಿನ ಗೌರವವನ್ನು ಕೃತಜ್ಞತೆಯನ್ನು ಅವರ ಕುರಿತು ಇಟ್ಟುಕೊಳ್ಳಬಹುದಿತ್ತು.

ಸಂಭ್ರಮದ ಎರಡನೇ ದಿನದ ನಡಾವಳಿಗಳು ಪೂರ್ಣಗೊಂಡ ನಂತರದ ತಮ್ಮ ಬ್ರೀಫಿಂಗ್‌ನಲ್ಲಿ ಗಿರಡ್ಡಿಯವರು "ನಾಡಿನ ಹಿರಿಯ ಸಾಹಿತಿಗಳು ಪಾಲ್ಗೊಳ್ಳುತ್ತಿರುವ ಈ ಸಂಭ್ರಮದಲ್ಲಿ ಯಾವುದೇ ಹಣದ ಅಪವ್ಯಯಕ್ಕೆ ಆಸ್ಪದವಿಲ್ಲ, ಈ ಎರಡೂ ದಿನಗಳಲ್ಲಿ ಅದು ಸಂಭವಿಸಲೂ ಇಲ್ಲ ಎಂಬುದು ಗಮನಾರ್ಹ. ಆದರೆ, ಕೆಲವು ವಿಶಿಷ್ಟ ಹಿತಾಸಕ್ತಿಗಳು ಈ ಸಂಭ್ರಮದ ವಿರುದ್ಧ ಅಪಪ್ರಚಾರ ಮಾಡುತ್ತಿರುವುದು ಧಾರವಾಡ ಸಾಂಸ್ಕೃತಿಕ ಪರಿಸರಕ್ಕೆ ಮಾಡುತ್ತಿರುವ ದೊಡ್ಡ ಅಪಚಾರವೆಂದೇ ಭಾವಿಸಿದ್ದೇನೆ" ಎಂದದ್ದು ದಿನಪತ್ರಿಕೆಯೊಂದರಲ್ಲಿ ವರದಿಯಾಗಿದೆ. ಯಾರು ಈ ಕೆಲವು ವಿಶಿಷ್ಟ ಹಿತಾಸಕ್ತಿಗಳು? ಇದರ ಧಾಟಿ ಧೋರಣೆಯನ್ನು ಸಕಾರಣವಾಗಿಯೇ ಪ್ರಶ್ನಿಸಿದ ಪಾಟೀಲ್ ಪುಟ್ಟಪ್ಪನವರೇ? ಸಾಹಿತ್ಯವೆಂಬುದು ಶ್ರೀಮಂತರಿಗಷ್ಟೆ ಎಂದು ಧಾಸಾಸಂನವರು ಭಾವಿಸಿದ್ದಾರೆಂದು ತೋರುತ್ತದೆ ಎಂದು ಪತ್ರಿಕೆಯೊಂದರ ತಮ್ಮ ಅಂಕಣದಲ್ಲಿ ಸಂದೇಹ ವ್ಯಕ್ತಪಡಿಸಿದ ಕಥೆಗಾರ ಜೋಗಿಯೆ? ಅಂತರ್ಜಾಲ ತಾಣಗಳಲ್ಲಿ ಇದರ ಕುರಿತು ಬರೆದು ಇದರಲ್ಲಿ ಎಲೀಟಿಕರಣದ ಅಪಾಯವನ್ನು ಕಂಡ ಕೆ.ವಿ.ತಿರುಮಲೇಶ್ ಅಥವಾ ಹೆಚ್.ಎಸ್.ರಾಘವೇಂದ್ರ ರಾವ್ ಅವರೇ? ಧಾರವಾಡದ ಸಾಂಸ್ಕೃತಿಕ ಪರಿಸರದ ಠೇಕೆದಾರಿಕೆಯ ಅಹಮಿಕೆಗಳನ್ನೇ ಪ್ರಶ್ನಿಸಿದ ನಾನೆ? ಸಂಭ್ರಮದಲ್ಲಿ ಪಾಲ್ಗೊಳ್ಳಲು ನಿರಾಕರಿಸಿ ಬರೆದ ಕುಂ.ವೀರಭದ್ರಪ್ಪ, ರಹಮತ್ ತರೀಕೆರೆ ಮುಂತಾದವರೆ? ಧಾರವಾಡದಲ್ಲಿ ಗೌರವಾನ್ವಿತರಾದ, ಸಂಭ್ರಮ ನೋಂದಾಯಿತ ಸಂಸ್ಥೆಯ ಗೌರವಾಧ್ಯಕ್ಷರುಗಳಾದ ಕೆಲ ಹಿರಿಯರು ಸಂಭ್ರಮದ ಆಕ್ಷೇಪಾರ್ಹ ಲಕ್ಷಣಗಳಿಗೆ ಕುರುಡಾದ ಕುರಿತು ಬೇಸರ ನೋವು ತೋಡಿಕೊಂಡ ಕರ್ನಾಟಕ ವಿದ್ಯಾವರ್ಧಕ ಸಂಘ[...] ಕಾರ್ಯದರ್ಶಿ ಶಂಕರ ಹಲಗತ್ತಿಯವರೇ? ಅಥವ[...] ಇನ್ನುಳಿದಂತೆ ಇದರ ವಿರುದ್ಧ ತಾತ್ವಿಕ ನೆಲೆಗಳ[...] ಪ್ರಶ್ನೆಗಳನ್ನೆತ್ತಿದ, ಡಾ. ಬರಗೂರು ರಾಮಚಂದ್ರ[...] ಡಾ.ಎಚ್.ಎಸ್.ಅನುಪಮಾ, ಜಿ.ಎನ್.ಮೋಹನ[...] ಬಸವರಾಜ ಸೊಳ್ಳಿಬಾವಿ, ಡಾ.ಎಂ.ಡಿ.ವಕ್ಕುಂದ[...] ಕುಂ.ಸಿ.ಉಮೇಶ್, ಬೇಳೂರು ಸುದರ್ಶನ, ಸಿದ್ದನಗೌ[...] ಪಾಟೀಲ್, ಡಾ. ಸಂಜೀವ ಕುಲಕರ್ಣಿ ಮೊದಲಾದವ[...]

ಸಾಹಿತ್ಯ ಸಮಾಜ, ಸಂಸ್ಕೃತಿಗಳ ಸಂಬಂಧದ ಕು[...] ಗಂಭೀರ ಸಂವಾದದ ಸಾಧ್ಯತೆಯೊಂದನ್ನು ಜೀವನಪೂ[...] ಸಾಹಿತ್ಯದ ಪಾಠ ಮಾಡಿದ ಗಿರಡ್ಡಿಯವರು ಹೀ[...] ಟ್ರಿವಿಅಲೈಜ್ ಮಾಡುವುದು ನೋವಿನ ಸಂಗತಿ. ಅವ[...] ಅದನ್ನು ತಮ್ಮ ವ್ಯಕ್ತಿನಿಷ್ಠ ಯಾವುದೋ ಕಟ್ಟುಪಾಡುಗಳ[...] ಬದ್ಧರಾಗಿ ಟ್ರಿವಿಅಲೈಜ್ ಮಾಡುತ್ತಿದ್ದಾರೆಂಬು[...] ಅನುಮಾನವಲ್ಲ ಆರೋಪ. "ಶಿಸ್ತನ್ನು ಕಾಪಾಡಿಕೊಳ್ಳ[...] ಉದ್ದೇಶದಿಂದ ಕೆಲ ನಿಬಂಧನೆಗಳನ್ನು ವಿಧಿಸಿದ್ದು ಸ್ವಾಭಾವಿ[...] ಇವುಗಳನ್ನು ತೀರ ಗಂಭೀರವಾಗಿ ತೆಗೆದುಕೊಂಡು ಟೀ[...] ಅಪಹಾಸ್ಯಗಳನ್ನು ಮಾಡುತ್ತಿದ್ದುದು ನಿಜಕ್ಕೂ ವಿಷಾದನೀಯ[...] ಎನ್ನುತ್ತಾರೆ ಗಿರಡ್ಡಿಯವರು. ಅಂದರೆ ತಾವೇ ವಿಧಿಸಿ[...] ನಿಯಮ ನಿಬಂಧನೆಗಳ ಕುರಿತು ಸ್ವತಃ ಇವರ[...] ಗಂಭೀರವಾಗಿರಲಿಲ್ಲ ಅಂದರೆ ಇವು ಇವರ ಇನ್‌ಸ್ಟಂ[...] ಪ್ರಚಾರದ ಗಿಮಿಕ್ಕೆ? ಇದನ್ನು ಯಾಕೆ ಕೇಳಬೇಕಾಗಿ[...] ಎಂದರೆ ಸಮಾರೋಪ ಸಮಾರಂಭದಲ್ಲಿ ಗಿರಡ್ಡಿಯವ[...] "ಸಂಭ್ರಮದ ಯಶಸ್ಸಿಗೆ ನಮ್ಮ ವಿರೋಧಿಗಳು ಕಾರ[...] ಏಕೆಂದರೆ ನಮಗೆ ಪ್ರಚಾರದ ಅಗತ್ಯವೇ ಬೀಳಲಿಲ್ಲ, ನಮ[...] ಪ್ರಚಾರವನ್ನು ನಮ್ಮ ವಿರೋಧಿಗಳೇ ಒದಗಿಸಿಬಿಟ್ಟರು[...] ಎಂದರೆಂದು ಅದರಲ್ಲಿ ಭಾಗವಹಿಸಿದವರು ನಮ[...] ಹೇಳಿದರು. ವಿರೋಧಿಗಳು ಪ್ರಧಾನವಾಗಿ ಪ್ರಶ್ನಿಸಿದ್ದೇ [...] ಇವರ ಹಾಸ್ಯಾಸ್ಪದ ನಿಯಮ[...] ನಿಬಂಧನೆಗಳನ್ನು. ಅದು ಹೋಗ[...] ಸಮಾರೋಪ ಸಮಾರಂಭದ ಅತಿಥಿಗಳಾಗಿ[...] ವಿಮರ್ಶಕ ಜಿ.ಎಚ್.ನಾಯಕ್ ಅವರು ಸ[...] ಹುಕುಂ ಸ್ವರೂಪದ ಆ ನಿಯಮಗಳ ಕುರಿ[...] ತಮ್ಮ ಆಕ್ಷೇಪವನ್ನು ಎತ್ತಿದರು ಎಂಬುದ[...] ನಮಗೆ ಗೊತ್ತಿದೆ. ಹೌದು, ಸಂಭ್ರಮ[...] ಯಶಸ್ಸಿನ ಒಂದು ಪಾಲಿಗೆ ನಾ[...] ಕಾರಣಕರ್ತರಾಗಿದ್ದೇವೆ. ಆದರೆ ಅ[...] ಗಿರಡ್ಡಿಯವರು ವ್ಯಂಗ್ಯವಾಗಿ ಹೇಳುವ [...] ಕಾರಣಕ್ಕಾಗಿ ಅಲ್ಲ. ಅದು ಪ್ರತಿನಿಧಿ ಶು[...] ಸಾವಿರದೈನೂರು ರೂಪಾಯಿಗಳಿಂದ ಕೇವ[...] ಐನೂರು ರೂಪಾಯಿಗಿಳಿದು ಆ ಕಾರಣ[...] ಹೆಚ್ಚಿನ ಸಂಖ್ಯೆಯಲ್ಲಿ ಪ್ರತಿನಿಧಿಗಳ[...] ನೋಂದಾಯಿಸಿಕೊಳ್ಳಲು ಅನುವಾಯಿತೆನ್ನುವ ಕಾರಣ[...] ಈ ಕಾರ್ಯಕ್ರಮಕ್ಕೆ ಕರ್ನಾಟಕ ಸರಕಾರ ಹತ್ತು ಲ[...] ರೂಪಾಯಿ ನೀಡಿತ್ತೆನ್ನುವ ಹಿನ್ನೆಲೆಯಲ್ಲಿ "ಸಾಹಿತ್ಯ ಸಂಭ್ರಮ[...] ಪ್ರವೇಶ ನೀಡುವದನ್ನು ಕಾಯ್ದಿರಿಸಲಾಗಿದೆ" ಎಂಬುದನ[...] ಪ್ರಗತಿಪರರು ವಿರೋಧಿಸಿದ್ದು ಕಾರಣವಾಗಿ ಆ ನಿಬಂಧ[...] ಸಡಿಲು ಗೊಂಡು ಜನರಿಗೆ ಮುಕ್ತ ಪ್ರವೇಶ ದೊರೆತ[...] ಸಭಾಭವನ ತುಂಬಿ ಶೋಭಿಸಿತು ಎಂಬ ಕಾರಣಕ್ಕ[...] ಸಂಭ್ರಮದ ಯಶಸ್ಸಿನ ಆ ಕ್ರೆಡಿಟ್ ಅನ್ನು ನಾವ[...] ತೆಗೆದುಕೊಳ್ಳುತ್ತೇವೆ ಏಕೆಂದರೆ ಸಾಮಾನ್ಯ ಸಾಹಿತ್ಯಾಸಕ್ತರಿಗ[...] ವಿದ್ಯಾರ್ಥಿಗಳಿಗೆ ಅದರಿಂದ ಪ್ರಯೋಜನವಾಗಿರುವುದ[...] ಸಾಧ್ಯವಿದೆ. ಆದರೆ ಸಂಭ್ರಮದ ಲೋಪಗಳಿಗೆ, ದೋಷಗಳಿಗ[...] ವೈಫಲ್ಯಗಳಿಗೆ ಸಂಘಟಕರೇ ಕಾರಣ. ಉದಾ: ಸಮಾರೋಪ[...] ಸಮಾರಂಭದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ವಿಮರ್ಶ[...] ಟಿ.ಪಿ.ಅಶೋಕ್ "ಬರೀ ಹಿರಿಯ ತಲೆಮಾರಿನ ಸಾಹಿತಿಗಳ[...] ಚರ್ಚೆ, ಕಾವ್ಯವಾಚನ, ವಿಮರ್ಶೆ ಕೇಳುವಂತಾಗಿತ್ತು, ಇದರ[...] ಜೊತೆಗೆ ಈ ತಲೆಮಾರಿನ ಹೊಸ ಹುಡುಕಾಟಗಳ[...] ತುಡಿತಗಳ ಯುವ ಬರಹಗಾರರಿಗೂ ಅವಕಾಶ[...] ನೀಡಬೇಕಿತ್ತು" ಎಂದು ಎತ್ತಿ ತೋರಿಸಿದ ಓರೆ-ಕೋರೆ[...] ಆ ಲೋಪವನ್ನು ಸಂಘಟಕರ ಭುಜಗಳಿಗೆ ವರ್ಗಾಯಿಸು[...] ತ್ತೇವೆ. ಹಾಗೇ ಸಾಹಿತ್ಯದ ಆತ್ಮವಾದ ಮನುಷ್ಯನನ್ನು, ಅವನ[...] ಬದುಕನ್ನು, ಸಮಾಜವನ್ನು ಅದರಿಂದ ಕರುಳ ಬಳ್ಳಿಯನ್ನು ಕಿತ್ತೆಸೆದಂತೆ ಮೂರು ದಿನ ಕಿತ್ತೆಸೆಯಲಾಯಿತು ಎಂಬುದಕ್ಕೆ ಸಮಾಜದ ಕುರಿತು, ಅದನ್ನು ಬಾಧಿಸುತ್ತಿರುವ ಸಮಕಾಲೀನ ಅಪಾಯಗಳ ಕುರಿತು, ವರ್ತಮಾನದ ಸಂಕಷ್ಟಗಳು, ತಬ್ಬಲಿತನಗಳು, ತಲ್ಲಣಗಳ ಕುರಿತು ಅವುಗಳಿಗೆ ಸಾಹಿತ್ಯ, ಸಾಹಿತಿಯ ಸ್ಪಂದನೆಯ ಕುರಿತು ಯಾವ ಚರ್ಚೆಯೂ ಆಗಲಿಲ್ಲ ಎಂಬುದಕ್ಕೂ ಕಾರಣರು ನಾವಲ್ಲ..!

ಇನ್ನುಳಿದಂತೆ ಧಾರವಾಡದ ಸಾಂಸ್ಕೃತಿಕ ಪರಿಸರಕ್ಕೆ ದೊಡ್ಡ ಅಪಚಾರವೆಂಬುದು ಆಗುತ್ತಿದೆಯೇ ಆಗುತ್ತಿದ್ದರೆ ಅದನ್ನು ಯಾರು ಬಗೆಯುತ್ತಿದ್ದಾರೆಂಬುದನ್ನು ಸಾರ್ವಜನಿಕ[...] ವಿವೇಕಕ್ಕೇ ಬಿಡುವುದು ಒಳಿತು.

ಶೋಭಾ ಕರಂದ್ಲಾಜೆ ಹೋದ್ಲು, ಕರಂಟೂ ಹೋಯ್ತುತ್ತಗೆ!

ಬಯಲುಸೀಮೆ ಕಟ್ಟೆಪುರಾಣ

• ಬಿ.ಚಂದ್ರೇಗೌಡ

...ನ್ನಿ ಯರಡು ತಿಂಗಳು ಬುಟಗಂಡು ಹ್ವಡಿಯೋ ...ಜಗ್ಗೆ ಹ್ವಡಿತಾ ಅದಲ್ಲ, ಕತೆಯೇನೂ ಅಂತ" ...ಉಗ್ರಿ.

...ನ್ನೇನು ಬಿಸ್ಲಲ್ಲಿ ವಣಾಗಿದ್ದೆ ಬತ್ತು" ಎಂದ ಸೀರ. ...ತ ಬಿಸಲಲ್ಲಿ ಮೈಸೂರಿಂದ ಬೆಂಗಳೂರುಗುಂಟ ... ವಂಟವುನಲ್ಲ ಎಡೂರಪ್ಪ, ಅವುನ ಕತಿಯೇನೂ ...ಗ್ಯದೆ."

...ಡೂರಪ್ಪಾಕೆ ನ್ಯಡಕಂಡು ವಂಟ್ಸಾ?" ಎಂದ ...ವ.

...ರ್ನಾಟಕಕ್ಕೆ ಅಂತ ಗಂಡಾಂತರ ಬಂದದೆ ಕಣಮಾವ. ...ನೀರು ಇರ್ಲಿ ಇಲ್ದೆಯಿರ್ಲಿ ತಮಿಳುನಾಡಿಗೆ ನೀರು ... ಇರಬೇಕು ಅಂತ ನ್ಯಾಯ ಮಂಡ್ಳಿ ...ಕೊಟ್ಟದಂತೆ. ಅದು ಜಾರಿಯಾದ್ರೆ ನಮ್ಮೂರು ...ಮುಂದ ತಮಿಳುನಾಡಿಗೆ ನೀರಗಂಟ ಕ್ಯಲಸ ...ಡು ಕುಂತಿರಬೇಕಾಯ್ತದೆ. ಅಂಥಾ ತೀರ್ಪು ಅದು."

...ಾವನ್ನ ಅಂತ ತೀರ್ಮಾನ ಕೊಟ್ಟೋನು?"

...ರ ಹಂಚಿಗಳಕ್ಕೆ ಅಂತ ನೇಮಕ ಮಾಡಿದ್ದೋರು ...ನಿಯಾಳ ತೀರಮಾನ ಕೊಟ್ಟವುರೆ ಕಣಮಾವ."

...ಮುಳನಾಡ ರೈತರು, ನಾವು ಕುತಗಂಡು ತೀರಮಾನ ...ತ್ತಿವಿ. ಹೊಳೆ ನೀರಿಗೆ ದೊಣ್ಣೆನಾಯಕನ ಅಪ್ಪಣೆ ...ಿ ದಿಲ್ಲಿ ಮುಂಡೆ ಮಕ್ಕಳಿಗೆ ಹೇಳಬೇಕಾಗಿತ್ತು ...

...ೇಳಬೌವುದು ಆದ್ರೆ ನಮ್ಮ ರೈತರು ರಡಿಯಿದ್ರೂ ...ಾಡಿನ ರೈತರು ಬರದಿಲ್ಲ, ಆಮ್ಯಾಲೆ ಸರ್ಕಾರಗಳು ...ಗ, ನ್ಯಾಯಾಲಯ ಇರುವಾಗ ಅದರಾಚೆ ನಾವು ...ತಕ್ಕೆ ಅವುರು ಬುಡದಿಲ್ಲ ಕಣಮಾವ."

...ಬುಡದಿಲ್ಲ ಅಂದ್ರೆ ನಮಿಗೆ ಅನ್ಯಾಯವಾಗೊ ...ನ ಯಂಗೆ ಬತ್ಲೆ?"

...ಯಂಗೆ ಅಂದ್ರೆ ನಮ್ಮೊರು ಯಾವನೊ ಲಾಯರಿ ... ಅವುನಿಗೆ ಪೀಜ ಕೊಟ್ಟು ಕೈ ತೊಳಕತ್ತರೆ. ಆದೇ ...ನಾಡಲ್ಲಿ ರಾಜ್ಯ ಸರ್ಕಾರದೋರು, ಕೇಂದ್ರದ ...ಗಳು ಯಲ್ಲಾ ಸೇರಿ ಹೋರಾಡೊ ಲಾಯರ ನೇಮಕ ...ಹಗಲುರಾತ್ರಿ ಯಂಗೆ ವಾದ ಮಾಡಬೇಕು ಅಂತ ... ಮಾಡ್ತರೆ. ಆಗ ಪಾಯಿಂಟು ಮುಖ್ಯನೇ ವರತು ...ಡಿ ನಮ್ಮದು ನಾವು ನೀರು ಬುಡದಿಲ್ಲ ಅನ್ನೊ ...ನಿಲ್ಲದಿಲ್ಲ ಕಣಮಾವ. ಈಗ್ಲೂ ಅಂಗೆ ಆಗಿ ...ನಾಡಿನೋರೆ ಸರಿಯಾಗಿ ನೀರ್ಕೊಡಕಂಡ್ರು."

...ಲ್ಲೊಂದು ಸರಿಯಾದ ಸರ್ಕಾರವೇ ಇಲ್ದೆಯಿರುವಾಗ ...ದೆ ಇನ್ನೇನು ಮಾಡ್ತರ್ಲ. ಪೂರ ಕನ್ನಂಬಾಡಿ ನೀರೆ ...ು ಅಂತರೆ" ಎಂದ ಕಾಳಮಾವ.

...ಾನೆ ಹಿಂದೊಂಸತಿ ಹೇಳಿರಲಿಲ್ವೆ, ಪೂರಾ ನೀರು ... ಆತ್ಲಿಂದ ಬತ್ತ ಈಸಗಳದು ವಳ್ಳೆದು ಅಂತ" ... ಸೀರ ನಕ್ಕ.

...ಕನ್ನಂಬಾಡಿ ಕಟ್ಟದಕ್ಕಿಂತ ಮದ್ಲು ಮಂಡ್ಯ ಜಿಲ್ಲೇಲಿ ...ಉಳ್ಳಿ ಬೆಳಕತಿದ್ರಂತೆ. ಮುಂದೆ ನ್ಯಾಯಮಂಡಳಿ ತೀರಪು ಜಾರಿಯಾದ್ರೆ ತಿರಗ ಆರ್ಕ ಉಳ್ಳಿ ಗಿದ್ದರಾಗಿ ಬೆಳೆನೆ ಗತಿ."


"ಆ ನಂಜೇಗೌಡಾರ ಇದ್ರೆ ಹೋರಾಡೋನು."

"ದ್ಯಾವೇಗೌಡ್ರು ಅವುನಿಗಿಂತ ತಿಳಕಂಡವುರೆ ಕಣಮಾವ. ಆದ್ರೇನು ಮಾಡಿ. ಅವುರಿಗೆ ಕಾವೇರಿ ನೀರಿಗಿಂತ ಬ್ಯಾರೆ ಸಮಸ್ಯೆ ಬೆನ್ನುಬಿದ್ದವೆ."

"ಎಜ್ಜಾಟ್ಲಿ ಕರಟ್ ಕಣೊ ಉಗ್ರಿ. ನಾನು ಒಂದು ತಮಾಸಿ ನೋಡಿಬಂದೆ" ಎಂದುಕೊಂಡು ವಾಟಿಸ್ಸೆ ಬಂದ.

"ಅದ್ಯಾವು ತಮಾಸಿನ್ಲ?" ಎಂದಳು ಜುಮ್ಮಿ.

"ತಮಾಸಿ ನಮಗೆ ಕಣಕ್ಕ. ಆದ್ರೆ ದೇವೇಗೌಡ್ರು ಭಾಗಕ್ಕೆ ಅದು ದುಃಖದ ಸಮಾಚಾರ. ಏನವ್ವ ಅಂದ್ರೆ ಅಲ್ಲೊಂದು ಲೈಟ್ ಕಂಬದಲ್ಲಿ ಒಂದು ಪ್ಲೆಕ್ಸ್ ನ್ಯಾತಾಕಿದ್ರು. ಅದರಲ್ಲಿ ದೇವೇಗೌಡ್ರು, ಕುಮಾರಣ್ಣನ ಫೋಟೋ ಇತ್ತು, ಅದರ ಕ್ಯಳಗಡೆ ದುಃಖತಪ್ತರು ಅಂತ ಬರದಿತ್ತು, ಇದ ಏನಂತ ತಿಳಕಳನಾ?"



"ನ್ಯಾತಾಕಿದೋರಿಗೇ ಗೊತ್ತು ಬುಡು."

"ಕರಟ್ಟಾಗಿ ಹೇಳಿದೆ ಕಣಕ್ಕ, ಚುಂಚನಗಿರಿ ಸ್ವಾಮಿ ತೀರಿ ಕಂಡಿದ್ರಿಂದ ನಮಿಗೆ ದುಃಖ ಆಗಿದೆ ಅಂತ ಜನಗಳಿಗೆ ಹೇಳಬೇಕು, ಇಲ್ಲ ಅಂದ್ರೆ ದುಃಖ ಆಗಿಲ್ಲ ಅಂತ ತಿಳಕತ್ತರೆ ಅಂತ ತಿಳಕಂಡು ದೇವು ಅಂಡ್ ಸನ್ ಪ್ಲಾನ್ ಮಾಡಿ ದುಃಖತಪ್ತರು ಅಂತ ಪ್ಲೆಕ್ಸ್ ಮಾಡಿ ಲೈಟ್‌ಕಂಬಕೆ ನೇತಾಕಿದ್ರು. ಇದರಿಂದ ಯಾವ ಕಾರಣಕ್ಕೂ ಇವರಿಗೆ ದುಃಖ ಆಗಿಲ್ಲ ಅನ್ನದು ಸಾಬೀತಾಯ್ತು."

"ನಿನ್ನ ಕಣ್ಣಿಗೆ ವಳ್ಳೆದು ಕಾಣದೆ ಇಲವೆ?"

"ಇನ್ನೊಂದು ಪ್ಲೆಕ್ಸ್ ನೋಡಿದೆ ಕಣಕ್ಕ, ಎಡೂರಪ್ಪನಿಗೆ ತೊಂದರೆ ಕೊಡ್ತಾಯಿರೊ ಹಲ್ಲು ಬೀರಣ್ಣ ಕೈಮುಕ್ಕಂಡಿದ್ದ. ಆರೆ ಇವುನಿಗೇನಾಗಿತ್ತು, ಚನ್ನಾಗೇ ಇದ್ನಲ್ಲಾ ಅನ್ನಂಗಿತ್ತು ಆ ಪ್ಲೆಕ್ಸು! ಅಲ್ಲೇ ಇನ್ನೊಂದು ಪ್ಲೆಕ್ಸ್ ನೋಡಿದೆ. ದ್ಯಾವೇಗೌಡ್ರು ಸಾಬರ ಟೋಪಿ ಹಾಯ್ಕಂಡು ತರಾವರಿ ಪೋಜು ಕೊಟ್ಟದ್ರು. ಜೊತಲೇ ಕುಮಾರಣ್ಣನ ತಲೇಲೂ ಸಾಬರ ಟೋಪಿ ಇತ್ತು. ಇಬ್ರೂ ಯಂಗೆ ಕಾಣತಿದ್ರೂ ಅಂತೀ. ಚರ್ಮದ ವ್ಯಾಪಾರಿಗಳ ತರ ಕಾಣತಿದ್ರು. ಈ ತರ ಪ್ಯಾನ್ಸಿ ಡ್ರೆಸ್ಸಾಯ್ಕಂಡು ಜನ ಮರುಳು ಮಾಡದಕಿಂತ ಕಾವೇರಿ ನ್ಯಾಯಮಂಡಳಿ ತೀರ್ಪು ಏನು ಮಾಡ್ತದೆ ಅಂತ ನೋಡಬೇಕಿತ್ತು."

"ಅವುರಿಬ್ರೆ ಯಾಕ್ಲ ನೋಡಬೇಕು? ಉಳದೋರಿಗೇನಾಗ್ಯದೆ?"

"ಯಾಕೆ ಅಂದ್ರೆ ಕಾವೇರಿ ಅಚ್ಚುಕಟ್ಟು ಜಾಗದೋರ್ಯಲ್ಲಾ ಜೆಡಿಎಸ್‌ಗೆ ಓಟು ಮಾಡ್ತರೆ ದೊಡಪ್ಪ, ಕಾರಣ ಕೇಳಿದ್ರೆ ಮಣ್ಣಿನ ಮಗನ ಪಾರ್ಟಿಗೆ ಓಟು ಮಾಡದೆ ಇನ್ಯಾರಿಗೆ ಮಾಡನ ಅಂತರೆ. ಅದು ನ್ಯಾಯವೇ ಅಂತ ಉಳದೋರು ಸುಮ್ಮನಿರುವಾಗ ದ್ಯಾವೇಗೌಡ್ರು ಕಾವೇರಿ ಇಶ್ಯೂನ ಸೀರಿಯಸ್ಸಾಗಿ ಹ್ಯಾಂಡ್ಲು ಮಾಡಬೇಕಾಗಿತ್ತು."

"ವಾಟಿಸ್ಸೆ ಹೇಳದು ನಿಜ ಕಣಮಾವ. ಕಾವೇರಿ ವಿಷಯದಲ್ಲಿ ಆ ಜಗದೀಶ್ ಶೆಟ್ರುನಾಗ್ಲಿ, ಬಮ್ಮಾಯಿನಾಗ್ಲಿ ನಂಬಿಕೊಂಡು ಕುಂತಗಳಕ್ಕಾದತೇ? ಹೇಳಿಕೇಳಿ ಅವು ಸರ್ಕಾರವೇ ಅಲ್ಲದ ಸರ್ಕಾರದಲ್ಲಿ ಮುಖ್ಯಮಂತ್ರಿ, ನೀರಾವರಿ ಮಂತ್ರಿಗಳಾಗಿ ಅವುರದೇ ಸಮಸ್ಯೆಲಿ ಮುಳುಗೋಗ್ಯವುರೆ. ಅದ್ಕೆ ಕಾವೇರಿ ನೀರಲ್ಲಿ ನಮ್ಮ ಮುಳಗಿಸಿದ್ರು" ಎಂದ ಉಗ್ರಿ.

"ಅಂಗಂತಿಯಾ?"

"ಊ ಮತ್ತೆ, ಆ ಶೋಭಾ ಕರಂದ್ಲಾಜೆಗಾದ್ರೂ ಆ ಖಾತೆ ಕೊಟ್ಟದ್ರೆ ಹೋಗಿ ಜಯಲಲಿತನ ಜೊತೆಲಾರ ಮಾತಾಡತಿದ್ಲು."

"ನಿಜ ಕಣೊ ಉಗ್ರಿ. ನಮ್ಮ ಶೋಭಾ ಹೋದ್ಲು, ಅವಳ ಜೊತೆ ಕರಂಟೂ ಹೋಯ್ತು, ಅಂಥೋರ್ಯಾರೂ ಈಗ ಬದುಕಿರೊ ಸರ್ಕಾರದಲ್ಲಿ ಇಲವಲ್ಲ ಹೇಳು!"

"ಕರಂಟು ಯಾರಿಗೂ ಗೊತ್ತಾಗದಂಗೆ ಬಂದು ವಂಟೋಯ್ತಾ ಅದೆ ಕಂಡ್ಯ. ತಿರಗ ನಾವು ಮದ್ಲಿನಂಗೆ ದೀಪಾ, ಲ್ಯಾಂಪು ತಗಿದಂಗೆ ನೋಡಿಕತಿದ್ಲು, ಈಗ ದಿಕ್ಕಿಲ್ಲದ ಆ ಖಾತೆಗೆ ಅಧಿಕಾರಿಗಳೇ ಅಧಿಪತಿಗಳು. ಅಂಗಾಗಿ ಹಳ್ಳಿ ಕಡೆ ಕರಂಟ್ ತಗದು ಸಿಟಿಕಡೆಗೆ ಮಾತ್ರ ಕೊಡ್ತಾ ಅವುರೆ. ಹಳ್ಳಿ ಜನ ಅಂದ್ರೆ ಯಲ್ಲಾನು ಸಯಿಸಿಗತ್ತರೆ ಅಂತ ತಿಳಕಂಡವುರೆ ಈಡಿಯಟ್ಟುಗಳು. ಇವುರಿಗೇನು ಮಾಡನ?"

"ಅವುರಿಗೇನೂ ಮಾಡಕ್ಕಾಗದಿಲ್ಲ ಕಣೊ. ನಾವೀಗೇನು ಮಾಡಬವುದಪ್ಪ ಅಂದ್ರೆ ಸಾವುರದೊಂಬೈನೂರ ಯಪ್ಪತ್ತರನೆ ಇಸವಿ ಜೀವನ ರೂಢಿಸಿಕೊಬೇಕು ಅಷ್ಟೆ."

"ಅದ್ಯಂತ ಜೀವನ ಅಂತ?"

"ಅದೆ ಕರಂಟಿಲ್ಲದ ಜೀವನ. ಯಲ್ಲಾರು ಮನೆ ಪಾಸಾಲೆ ಕಂಬದಲ್ಲಿ ಕ್ಯೆಯಣ್ಣೆ ದೀಪ. ನಡುಮನೇಲಿ ಲ್ಯಾಂಪು, ಲಾಟೀನು, ಓದೊ ಉಡುಗರ ಮುಂದೆ ಸೀಮೆಯಣ್ಣೆ ಬುಡ್ಡಿ. ಬೆಳಗಿನ ಜಾವಕೆ ಎದ್ದು ಮನೆ ಸೊಸೆರು ರಾಗಿಬೀಸೋರು, ಅಂತು ಕತ್ತಲೆಯಲ್ಲೂ ಯಲ್ಲಾ ಕ್ಯಲಸಗಳು ನ್ಯಡಿಯವು. ಹಗಲೊತ್ತು ಹಗಲಗ್ಯಲಸ ನ್ಯಡಿಯವು. ಈಗಿನಂಗೆ ಹಗಲು, ರಾತ್ರಿ ಮಿಕ್ಸಾಗಿರಲಿಲ್ಲ. ಒಂಥರಾ ಜೀವನ ಚೆನ್ನಾಗಿತ್ತು ಕಣೊ."

"ಮಿಸ್ಟರ್ ಉಗ್ರಿ, ನಾಗರಿಕತೆಲಿ ಮನುಷ ಹಿಂದುಕೋಗಕ್ಕಾಗದಿಲ್ಲ, ಮುಂದಕೇ ಹೋಗಬೇಕು. ಮದ್ಲು ಕತ್ತಲೆಲೂ ಮಾತಾಡೋರು. ಈಗ ಕರಂಟು ಹೋದೇಟಿಗೆ ಸೈಲೆಂಟಾಯ್ತರೆ. ಆದ್ರಿಂದ ಏನಾದ್ರು ಪರಿಯಾಯ ಹುಡುಕಲೇಬೇಕು. ಹುಡುಕ್ತರೆ ಸುಮ್ಮನಿರು."

"ಇವುರು ಹುಡುಕಿದ್ದ ನಾನು ನೋಡಿಲ್ಲವೇನೊ. ನೀನ್ಯಾಕೆ ಇವುರ ಬಗ್ಗೆ ಸಾಫ್ಟಾಗಿ ಮಾತಾಡ್ತೀ?"


"ನಾನೆಲ್ಲಿ ಸಾಫ್ಟಾಗಿದ್ದೀನೊ? ಸಾಬರ ಕಂಡ್ರೆ ಚಿದಾನಂದಮೂರ್ತಿಗೆ ಯಂಗೆ ಸಿಟ್ಟು ಬತ್ತದೊ ಅಂಗೆ ನನಗೆ ಈ ಸರ್ಕಾರದೋರು ಕಂಡ್ರೆ ಮೈಯಲ್ಲ ಕಾವಾಯ್ತವೆ."

"ಸಾಬ್ರು ಅಂದೇಟಿಗೆ ಗ್ಯಾಪುಕ್ಕೆ ಬತ್ತು ಕಂಡ್ಯ. ಕಮಲ ಹಾಸನ್ನು ಮಾಡಿರೊ ಸಿನುಮ ತೋರಬ್ಯಾಡಿ ಅಂತ ಸಾಬರ್ಯಾಕ್ಲ ಗಲಾಟೆ ಮಾಡ್ತರೆ?" ಎಂದಳು ಜುಮ್ಮಿ.


"ಕಮಲಹಾಸನ್ ಮಾಡಿರೊ ಸಿನುಮದಲ್ಲಿ ಸಾಬರ ಟೀಕೆ ಮಾಡಿದ್ದನಂತೆ. ಇಲ್ಲ ಅಂತ ಅವುನಂತನೆ. ಗಲಾಟೆಯಾದ್ರೆ ನಿಭಾಯಿಸಕ್ಕಾಗಲ್ಲ ಅಂತ ರಿಲೀಜ್ ಮಾಡಕ್ಕೆ ಬುಡ್ತಿಲ್ಲ ಅಂತ ಜಯಲಲಿತ ಹೇಳ್ತಳೆ. ಆದ್ರೆ ಸಾಬರು ಮಾತ್ರ ಸಿನುಮನ ನೋಡದೆ ಹೇಳಕೆ ಮಾತ ಕಟಗಂಡು ಥಿಯೇಟರಿಗೆ ನುಗ್ಗಿ ದಾನ್ಲಿ ಮಾಡ್ಯವೆ. ಧ್ವಂಸ ಮಾಡ್ಯವೆ. ಮತಾಂಧತೆ, ಮೂರ್ಖತನ ಮತ್ತು ಅನಕ್ಷರತೆ ಟೋಟ್ಲು ಮಾಡಿದ್ರೆ ಇಂತ ಧ್ವಂಸದ ಕಾರ್ಯ ನ್ಯಡಿತವೆ. ಅಂತೂ ಇಂಡಿಯಾದಲ್ಲಿ ಬಿಜೆಪಿ ಉಳಿಸಿ ಬೊಳೆಸೊ ಶಕ್ತಿ ಇರದು ಇಂತ ಸಾಬರಿಗೆ ಮಾತ್ರ ಕಣಕ್ಕ." ■

ಸಂಕೀರ್ಣ ಒಳತೋಟಿ

...ಮೊನ್ನೆ ಓದಿದ ಒಂದು ಜೀವನ ಚರಿತ್ರೆಯಲ್ಲಿ... ಕುತೂಹಲ ಹುಟ್ಟಿಸುವ ...ರಡು ವಿಷಯ ಇದ್ದವು. 'ಜೀವನ ಚರಿತ್ರೆ' ಎನ್ನುವುದು 'ಆತ್ಮಚರಿತ್ರೆ'ಯಲ್ಲ, ... ಇನ್ನೊಬ್ಬರ ಬದುಕನ್ನು ಕುರಿತು ಬರೆದರೆ ಅದು 'ಆತ್ಮಚರಿತ್ರೆ'. ...ಂ.ಫಾರ್‌ಸ್ಟರ್ ಎಂಬ ನನ್ನ ಮೆಚ್ಚಿನ ಲೇಖಕನನ್ನು ಕುರಿತು ...ನ್ ಫರ್‌ಬ್ಯಾಂಕ್ ಎಂಬ ಒಬ್ಬನು ಜೀವನಚರಿತ್ರೆ ಬರೆದ. ಫಾರ್‌ಸ್ಟರ್ ...9 ರಲ್ಲಿ ಹುಟ್ಟಿ 1970ರಲ್ಲಿ ತೀರಿಕೊಂಡ. ತೊಂಭತ್ತೊಂದು ವರ್ಷ ...ಿಕಿದ ಈತ ದೇವರನ್ನು ನಂಬದೇ ತೀರಿಕೊಂಡ. ಆತ ...ಯುಸಿರೆಳೆಯುತ್ತಿದ್ದಾಗ ಒಬ್ಬ, 'ನಿನಗೆ ದೇವರ ಅಗತ್ಯ ಕಂಡಿಲ್ಲವೇ'? ... 'ಇಲ್ಲ' ಎಂದಷ್ಟೇ ಫಾರ್‌ಸ್ಟರ್ ಹೇಳಿದ.



...ರು ರೀತಿಯಲ್ಲಿ ಕೊನೆಯವರೆಗೆ ...ದಿಯಿಂದ ಬದುಕಿದ ಫಾರ್‌ಸ್ಟರ್ ತನ್ನ ...ಭತ್ತೊಂದನೇ ಕೊನೇ ವರ್ಷದವರೆಗೆ ...ಹಣ, ಸ್ನೇಹಿತರು, ಖ್ಯಾತಿ ಯಾವುದು ...ರ್ಥ ಕರಗಿಹೋಗದಿರುವುದನ್ನು ಕಂಡು ...ನಾಗಿದ್ದ, ಆದರೆ ಬಹಳ ವರ್ಷ ...ೇಡದಿರುವ ಗೆಳೆಯರು ...ಕೊಂಡಿರಬೇಕೆಂದು ತಿಳಿದು ...ಸಿರುತ್ತಿದ್ದ; ಅನೇಕ ಸಲ ಗೆಳೆಯರು ...ರಿಗೆ ಬಂದರೂ ಅವನಿಗೆ ಅವರ ...ತು ಸಿಗುತ್ತಿರಲಿಲ್ಲ, ಒಂದು ದಿನ ಆತ ... ರೂಮಿಗೆ ಹೋಗಲು ಮೆಟ್ಟಲು ...ತ್ತಿದ್ದಾಗ ಎದುರಿಗೆ ಕ್ರಿಸ್ಟಾಫರ್ ಇಶರ್ ... ಎಂಬ ಗೆಳೆಯ ಬರುತ್ತಿರುವುದನ್ನು ಗಮನಿಸಿದಂತಾಗಿ ನಿಂತ. ಇಶರ್ ವುಡ್ ಕವಿ, ನಾಟಕಕಾರ; ಒಮ್ಮೆ ಫಾರ್‌ಸ್ಟರ್‌ಗೆ ಚೆನ್ನಾಗಿ ಗೊತ್ತಿದ್ದವನು. ಅವನನ್ನು ನೋಡಿ 'ಎಷ್ಟು ಅದ್ಭುತ!' ಎಂದು ನಿಂತ ಫಾರ್‌ಸ್ಟರ್‌ನನ್ನು ಕಂಡು ಇಶರ್ ವುಡ್ ಸೋಜಿಗಗೊಂಡು, 'ಏಕೆ ಫಾರ್‌ಸ್ಟರ್' ನಾನು ಅಷ್ಟು ಬದಲಾಗಿದ್ದೇನೆಯೇ? ಎಂದು ಕೇಳಿದ. ತನ್ನ ಪ್ರತಿಕ್ರಿಯೆಯಿಂದ ತನಗೇ ನಾಚಿಕೆಯಾಗಿ ಫಾರ್‌ಸ್ಟರ್, 'ಹೌದು... ದಪ್ಪ ಆಗಿದ್ದೀ' ಎಂದು ಗೊಣಗಿದ. ಆತ ನಿಜಕ್ಕೂ ತಿಳಿದದ್ದು ಅವನ ಎದುರಿಗೆ ಬರುತ್ತಿದ್ದುದು ಇಶರ್ ವುಡ್‌ನ ದೆವ್ವವಿರಬೇಕು ಅಂತ; ತೀರಿಕೊಂಡಿರುವುದಾಗಿ ತಿಳಿದಿದ್ದ. ಆಮೇಲೆ ಇಶರ್ ವುಡ್‌ನನ್ನು ಸೂಕ್ಷ್ಮವಾಗಿ ಪರೀಕ್ಷಿಸಿ ತನ್ನ ತಪ್ಪು ಗ್ರಹಿಕೆಯನ್ನು ಪೂರ್ತಿಯಾಗಿ ಬಚ್ಚಿಟ್ಟುಕೊಂಡ.



ನಮ್ಮಲ್ಲಿ ನಮ್ಮ ಬಗ್ಗೆಯಾಗಲಿ, ಅನ್ಯವ್ಯಕ್ತಿಯ ಬಗ್ಗೆಯಾಗಲಿ ತೀರಾ ಅವಾಸ್ತವವಾಗಿ ಬರೆಯುತ್ತೇವೆ; ಏಕೆಂದರೆ ಭಾರತೀಯನೊಬ್ಬ ಫಾರ್‌ಸ್ಟರ್‌ನ ಜೀವನದ ಬಗ್ಗೆ ಬರೆದಿದ್ದರೆ ಆತನ ಯಾವ ದೋಷಗಳೂ ಅವನಿಗೆ ಕಾಣಿಸುತ್ತಿರಲಿಲ್ಲ, ಮನುಷ್ಯ ಬರೀ ಒಳ್ಳೆಯ ಅಥವಾ ಕೆಟ್ಟ ಗುಣಗಳ ಗುಂಪಲ್ಲ; ನೀತಿ, ಅನೀತಿಯ, ಮಾನವೀಯತೆ, ಅಮಾನವೀಯತೆಯ ಪ್ರತೀಕವಲ್ಲ, ಮನುಷ್ಯ ಜೀವಂತ ಪ್ರಾಣಿ, ಹಾಗೆಯೇ ಎಲ್ಲ ಪ್ರಾಣಿಗಳಿಗಿಂತ ಜಟಿಲವೂ ಕುತೂಹಲಕರವೂ ಆದವನು. ಒಬ್ಬನಲ್ಲಿ ಕೆಟ್ಟ ಗುಣಗಳು, ದ್ರೋಹದ ಭಾವನೆಗಳು ಹೆಚ್ಚಾಗಿ ಇರಬಹುದು; ಆತ ನೀಚ ಅನ್ನಿಸಬಹುದು. ಆದರೆ ಆತ ಕೂಡ ತನ್ನಲ್ಲಿನ ಅನಿರೀಕ್ಷಿತ ಭಾವನೆಗಳಿಂದ ನಮ್ಮನ್ನು ಬೆಚ್ಚಿಸುತ್ತಾನೆ. ಇದು ಗೊತ್ತಿಲ್ಲದಿರುವುದರಿಂದಲೇ ನಮ್ಮಲ್ಲಿ ಜೀವನ ಚರಿತ್ರೆಗಳು, ಆತ್ಮಚರಿತ್ರೆಗಳು ಆರಾಧನೆಯ, ತಲೆಚಿಟ್ಟು ಹಿಡಿಸುವ ಏಕಸೂತ್ರದ ಕೃತಿಗಳಾಗಿರುತ್ತವೆ; ವಾಸ್ತವವನ್ನು ಬಿಂಬಿಸಲಾಗದೆ ನಿರ್ಜೀವವಾಗಿರುತ್ತವೆ.

ಫಾರ್‌ಸ್ಟರ್ ಸಲಿಂಗರತಿಯವನು; ಒಂದು ರೀತಿಯ ಮೇಲುವರ್ಗದ ಡ್ಯಾಂಡಿ, ಮಹಾವ್ಯಂಗ್ಯದ ಮನುಷ್ಯ. ಹಾಗೆಯೇ ಆತ ಸಂಕೋಚದವನು, ಹುಂಬ ಗ್ರಹಿಕೆಗಳ ವ್ಯಕ್ತಿ, ತನ್ನ ಜೀವನಕ್ರಮದ ಹೊರಗಿರುವುದನ್ನು ಅನುಮಾನಿಸಿ ನೋಡುವವನು. ಇದೆಲ್ಲದರ ಜೊತೆಗೆ ಅನೇಕ ಸೂಕ್ಷ್ಮಾತಿಸೂಕ್ಷ್ಮ ಎಳೆಗಳಿಂದ ನೇಯಲ್ಪಟ್ಟ ವ್ಯಕ್ತಿತ್ವ ಆತನದು. ಅವೆಲ್ಲ ಬಂದಾಗಲೇ ಅವನ ಚಿತ್ರ ಸಂಪೂರ್ಣ.


ನಮ್ಮಲ್ಲಿ ಕತೆ, ಕಾದಂಬರಿಗಳು ಕೂಡ ಸ್ವಲ್ಪ ದುರ್ಬಲವಾಗಿರಲು ನನಗೆ ಹೊಳೆಯುವ ಕಾರಣ ಇಲ್ಲಿದೆ. ನಮಗೆ ಇನ್ನೊಬ್ಬರನ್ನು ಪ್ರೀತಿ, ವ್ಯಂಗ್ಯ, ಏಕಾಗ್ರತೆ, ಒಪ್ಪಿಗೆ, ಮೆಚ್ಚುಗೆ ಆಕ್ಷೇಪಣೆಯಿಂದ ನೋಡುತ್ತಲೇ ಇರುವಾಗ ಕಾಣುವ ಹೊಸ ವಿಷಯಗಳು ಸಹಜ ಅನ್ನಿಸಿ ನಮ್ಮ ಚಿತ್ರದಲ್ಲಿ ಸೇರಿಕೊಳ್ಳುವುದಿಲ್ಲ. ಒಬ್ಬ ಜಗದ್ಗುರು ಪತಿತನಾಗಿದ್ದು ನಮಗೆ ಕಾಣುತ್ತದೆಯೇ ಹೊರತು ಆತನ ಒಳತೋಟಿಯ ವಿಚಿತ್ರ ಮರ್ಮಗಳು ಕಾಣುವುದಿಲ್ಲ. ಪ್ರೀತಿ ಹೆಚ್ಚಾದಾಗ ಯಾಕೆ ಚಡಪಡಿಕೆ ಶುರುವಾಗುತ್ತದೆ? ಭಟ್ಟಂಗಿತನ ಏಕೆ ಅಸಹ್ಯವನ್ನು ಕೂಡ ಹುಟ್ಟಿಸುತ್ತದೆ? ಇನ್ನೊಬ್ಬರ ಮೆಚ್ಚುಗೆ, ಪ್ರೀತಿ ಇಲ್ಲದೆ ಇರಲು ನಮಗೆಲ್ಲ ಏಕೆ ಸಾಧ್ಯವಾಗುವುದೇ ಇಲ್ಲ? ಹಾಗೆ ಸಾಧ್ಯವಾದಾಗ ಇರುವ ಹಠ ಹೇಗೆ ಜೀವನವನ್ನು ಮುಕ್ತ ಮಾಡುತ್ತದೆ?

ಇಂಥ ಪ್ರಶ್ನೆಗಳು ಹೊಳೆಯುವುದೇ ಇಲ್ಲ!

• ಜೂನ್ 10, 1998

ಸಂಪಾದಕರಿಗೆ ಪತ್ರ

ಕಮಲ ಹಾಸನ್ ಚಿತ್ರ 'ವಿಶ್ವರೂಪಂ' ಕುರಿತು ಕಳೆದ ವಾರದ ಸಂಚಿಕೆಯಲ್ಲಿ ನೀವು ಬರೆದಿದ್ದಿರಿ; ನಾನು ಸಹ ಬರೆದಿದ್ದೆ. ಆದರೆ ಆ ಚಿತ್ರದಲ್ಲಿ ನಮ್ಮ ಗಮನಕ್ಕೆ ಬಾರದ ಒಂದು ಮಹತ್ವದ ಸಂಗತಿಯ ಬಗ್ಗೆ ಕಾರ್ತಿಕ್ ರಾಮನಾಥನ್ ಎಂಬವರು ಬರೆದಿದ್ದಾರೆ.(http://www. countercurrents.org/karthik 010213.htm) ಅವರು ಹೇಳುವಂತೆ ಜಾಗತಿಕ ಭಯೋತ್ಪಾದನೆಯ ವಿರುದ್ಧದ ಯುದ್ಧದಲ್ಲಿ ಈಗ ಅಮೆರಿಕದ ಜೊತೆ ಭಾರತವೂ ಪಾಲುಗಾರ ಎಂದು 'ವಿಶ್ವರೂಪಂ' ಚಿತ್ರಿಸುತ್ತದೆ. ಅಂದರೆ



ಚಿತ್ರದ ಪ್ರಕಾರ 'ಭಯೋತ್ಪಾದನೆ' ಎಂದರೆ ಏನು ಎಂಬುದರ ಕುರಿತು ಅಮೆರಿಕದ ನಿರೂಪಣೆಗಳನ್ನು ಭಾರತ ಒಪ್ಪಿಕೊಂಡಿದೆ. ಇದು ಭಾರತ ಸರಕಾರದ ಅಧಿಕೃತ ನಿಲುವು ಅಲ್ಲವಾದರೂ, ಕಮಲ ಹಾಸನ್ ಗೊತ್ತಿದ್ದೊ ಗೊತ್ತಿಲ್ಲದೆಯೋ, ವಾಸ್ತವವನ್ನೇ ಚಿತ್ರಿಸಿದ್ದಾರೆ.

ಕಳೆದ ಹಲವು ವರ್ಷಗಳಿಂದ ಭಾರತ ಅಮೆರಿಕದ ಒಂದು ಗುಲಾಮ ದೇಶದಂತೆ ವರ್ತಿಸುತ್ತಿದೆ. ಜಾಗತೀಕರಣದ ಹೆಸರಿನಲ್ಲಿ ಈಗ ದೇಶದ ಅರ್ಥವ್ಯವಸ್ಥೆಯನ್ನು ಅಮೆರಿಕದ ಹಿತಾಸಕ್ತಿಗಳಿಗೆ ಒತ್ತೆ ಇರಿಸಲಾಗುತ್ತಿದೆ. ಭಾರತದ ವಿದೇಶಾಂಗ ನೀತಿ ಈಗ ಅಮೆರಿಕದ ಸಾಮ್ರಾಜ್ಯಶಾಹಿಗೆ ವಿಧೇಯವಾಗಿದೆ. ಆದರೆ ಭಾರತದ ಈ ಪರಾಧೀನತೆ ಸರಕಾರದ ಸ್ವಘೋಷಿತ ಧೋರಣೆ ಅಲ್ಲ, ಕಮಲ ಹಾಸನ್ ತಮ್ಮ ಚಿತ್ರದಲ್ಲಿ ಅಮೆರಿಕ ಮತ್ತು ಭಾರತಗಳ ಈ ಬಗೆಯ ಸಂಬಂಧದ ವಾಸ್ತವವನ್ನು ನಿರೂಪಿಸುತ್ತಾರೆ. ಆದರೆ ಈ ವಾಸ್ತವ ಅಸಹನೀಯ ಮತ್ತು ಬದಲಾಗಲೇಬೇಕಾದದ್ದು ಎಂಬ ಸತ್ಯ ಅವರಿಗೆ ಹೊಳೆಯದೆ ಹೋಗಿದೆ.

ಉದಾಹರಣೆಗೆ 'ವಿಶ್ವರೂಪಂ'ನ ಒಂದು ದೃಶ್ಯದಲ್ಲಿ ಅಫಘಾನಿಸ್ತಾನದ 'ಭಯೋತ್ಪಾದಕ' ನೆಲೆಯೊಂದರ ಮೇಲೆ ಅಮೆರಿಕದ ವಿಮಾನಗಳು ದಾಳಿ ನಡೆಸುತ್ತವೆ. ಅವುಗಳನ್ನು ಗುಂಡು ಹಾಕಿ ಉರುಳಿಸಲು ಯತ್ನಿಸಿದ ಅಫಘಾನ್ 'ಭಯೋತ್ಪಾದಕ' ಒಬ್ಬನನ್ನು 'ಸಜ್ಜನ ಭಾರತೀಯ ಮುಸ್ಲಿಮ' ವಾಸಿಮ್ (ಕಮಲ ಹಾಸನ್) ಕೊಂದು ಹಾಕಿ ತನ್ನ ಸಜ್ಜನಿಕೆಯನ್ನು ಮೆರೆಯುತ್ತಾನೆ. ತನ್ನ ದೇಶ, ತನ್ನ ಊರು, ತನ್ನ ಕೇರಿಯಲ್ಲಿ ನಿಂತು ಅಮೆರಿಕದ ವಿಮಾನದ ಮೇಲೆ ಗುರಿ ಇರಿಸಿದ ಅಫಘಾನ್ ಪ್ರಜೆ 'ಭಯೋತ್ಪಾದಕ'! ಸಾವಿರಾರು ಮೈಲಿ ದೂರದಿಂದ ಯುದ್ಧ ವಿಮಾನದಲ್ಲಿ ಹಾರಿಬಂದ ಅಮೆರಿಕದ ಸೈನಿಕರು ಸ್ವಾತಂತ್ರ್ಯದ ರಕ್ಷಕರು! ಅಮೆರಿಕದ ಈ ನಿರೂಪಣೆಯಲ್ಲಿ ಹೊಸತೇನೂ ಇಲ್ಲ. 19ನೆಯ ಶತಮಾನದ ಯುರೋಪ್‌ನ ವಸಾಹತುಶಾಹಿ ಮತ್ತು 20ನೆಯ ಶತಮಾನದಲ್ಲಿ ಅದರದ್ದೇ ಮುಂದುವರಿಕೆಯಾದ ಅಮೆರಿಕಾದ ಸಾಮ್ರಾಜ್ಯಶಾಹಿ ಲಾಗಾಯ್ತಿನಿಂದಲೂ, ಏಷ್ಯ ಆಫ್ರಿಕ ಮತ್ತು ದಕ್ಷಿಣ ಅಮೆರಿಕ ಖಂಡದ ವಿವಿಧ ದೇಶಗಳ ಸ್ವಾತಂತ್ರ್ಯ ಹೋರಾಟಗಾರರಿಗೆ 'ಭಯೋತ್ಪಾದಕರು' ಎಂಬ ಹಣೆಪಟ್ಟಿ ಹಚ್ಚುತ್ತಲೇ ಬಂದಿದೆ.

ಅಮೆರಿಕದ ಭಯೋತ್ಪಾದಕರ ಪಟ್ಟಿಯಲ್ಲಿ ಒಸಾಮಾ ಬಿನ್ ಲಾಡೆನ್‌ಗಿಂತ ಮೊದಲು ಕ್ಯೂಬದ ಫಿಡೆಲ್ ಕ್ಯಾಸ್ಟ್ರೊ, ಬೊಲಿವಿಯಾದ ಚೆ ಗವಾರ, ವಿಯೆಟ್ನಾಂನ ಹೊ.ಚಿ.ಮಿನ್ಹ್, ಕಾಂಗೊದ ಪ್ಯಾಟ್ರಿಕ್ ಲುಮುಂಬ ಮುಂತಾದ ಅಪ್ರತಿಮ ಸ್ವಾತಂತ್ರ್ಯ ಹೋರಾಟಗಾರರಿದ್ದಾರೆ. ಈ 'ಭಯೋತ್ಪಾದಕರು' ಒಮ್ಮೊಮ್ಮೆ ತಮ್ಮ ತಮ್ಮ ದೇಶಗಳ ಚುನಾವಣೆಗಳಲ್ಲಿ ಬಹುಮತ ಪಡೆದು ಸರಕಾರ ರಚಿಸಿದ್ದೂ ಇದೆ. ಆಗ ಅಂತಹ ಸರಕಾರಗಳನ್ನು ಒಳಸಂಚು ನಡೆಸಿ ಉರುಳಿಸಲು ಅಮೆರಿಕ ಯಾವತ್ತೂ ಹಿಂದೆಮುಂದೆ ನೋಡಿಲ್ಲ.

ಉದಾಹರಣೆಗೆ ಇರಾನ್‌ನಲ್ಲಿ 1951ರ ಚುನಾವಣೆಗಳಲ್ಲಿ ಗೆದ್ದಿದ್ದ ಮೊಹಮ್ಮದ್ ಮೊಸ್ಸಾಗ್ದೇಹ್ ನೇತೃತ್ವದ ಕಮ್ಯುನಿಸ್ಟ್-ಸಮಾಜವಾದಿ ಒಕ್ಕೂಟದ ಸರಕಾರವನ್ನು ಬ್ರಿಟನ್ ಮತ್ತು ಅಮೆರಿಕ ಒಟ್ಟಾಗಿ ಉರುಳಿಸಿದವು. ಅವು ಕೊಳ್ಳೆ ಹೊಡೆಯುತ್ತಿದ್ದ ಇರಾನ್‌ನ ತೈಲಬಾವಿಗಳನ್ನು ರಾಷ್ಟ್ರೀಕರಿಸಿದ್ದೇ ಮೊಸ್ಸಾಗ್ದೇಹ್ ಮಾಡಿದ ಪಾಪಕೃತ್ಯವಾಗಿತ್ತು. 1973ರಲ್ಲಿ ಅಮೆರಿಕ ಚಿಲಿಯಲ್ಲಿ ಸಾಲ್ವೆಡೋರ್ ಅಲೆಂಡೆ ನೇತೃತ್ವದ ಸಮಾಜವಾದಿ ಸರಕಾರವನ್ನು ಸಿ.ಐ.ಎ ಒಳಸಂಚಿನ ಮೂಲಕ ಉರುಳಿಸಿದ್ದೇ ಅಲ್ಲದೆ ಅಲೆಂಡೆ ಅವರನ್ನು ಕೊಂದುಹಾಕಿತು. ಆ ಸಂದರ್ಭದಲ್ಲಿ ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಹೆನ್ರಿ ಕಿಸ್ಸಿಂಜರ್ ಹೀಗೆ ಹೇಳಿದ- "ಚಿಲಿ ದೇಶದ ಜನ ಕಮ್ಯುನಿಸ್ಟರಿಗೆ ಬಹುಮತ ನೀಡಿದರೆ ನಾವು ಆ ಬೇಜವಾಬ್ದಾರಿತನವನ್ನು ಸಹಿಸಿಕೊಂಡು ಸುಮ್ಮನೆ ಕೂರುವಂತಿಲ್ಲ, ಇವೆಲ್ಲ ತುಂಬ ಗಂಭೀರವಾದ ವಿಷಯಗಳು; ಜನರ ಆಯ್ಕೆಗೆ ಇವನ್ನು ಬಿಡುವ ಹಾಗಿಲ್ಲ." ಇದು ಅಮೆರಿಕದ ಪ್ರಜಾಪ್ರಭುತ್ವದ ವೈಖರಿ ಮತ್ತು ಭಯೋತ್ಪಾದನೆ ಯನ್ನು ಎದುರಿಸುವ ವಿಧಾನ. ಕಮಲ ಹಾಸನ್ ಅವರ 'ವಿಶ್ವರೂಪಂ' ಎತ್ತಿಹಿಡಿಯುತ್ತಿರುವುದೂ ಇದನ್ನೆ.

● ಜಿ.ರಾಜಶೇಖರ


ಕೇಸರೀಶನ (ಅಧಿಕ) ಪ್ರಸಂಗಗಳು



ಜನುಮದಲ್ಲೆಂದೂ ವನಮಹೋತ್ಸವವನ್ನು
ಆಚರಿಸದ ಕೇಸರೀಶ, ಈ ಬಾರಿಯ
ಹಿಂದೂ ಸಮಾಜೋತ್ಸವದ ಸಲುವಾಗಿ
ಹೊಸದಾಗಿ ಖರೀದಿಸಿದ ಕೇಸರಿ ಧ್ವಜವನ್ನು
ಒಣಕೋಲಿಗೆ ಬಿಗಿದು ಕಚೇರಿಯೆದುರು ನೆಟ್ಟ.
ಅಚಾನಕ್ಕಾಗಿ ಸುರಿದ ಮಳೆಗೆ ಬಣ್ಣ ಕರಗಿತು
ಧರ್ಮದ ಚೌಕಟ್ಟನೊಳಗೆ ತನ್ನನ್ನು ಬಂಧಿಸಿದ್ದಕ್ಕೆ
ಆ ಧ್ವಜದಲ್ಲಿನ ಕೇಸರಿ ಬಣ್ಣವೇ
ಕಣ್ಣೀರು ಸುರಿಸುವಂತಿತ್ತು!
****
ಆ ಊರಿಗಿದೀ ಶಾಪವಾಗಿ ಪರಿಣಮಿಸಿದ
ಪ್ರವಾಹದ ಬಣ್ಣ ಕೂಡಾ ಕೇಸರಿಯೆ!
ಆ ಪ್ರವಾಹದಲ್ಲಿ ನದಿತೀರದ
ಜಾತ್ಯತೀತರ ಮನೆಗಳು ಮುಳುಗುತಿರಲು
ಸೇತುವೆಯ ಮೇಲೆ ನಿಂತ ಕೇಸರೀಶ
ಆನಂದಭಾಷ್ಪ ಸುರಿಸಿದ!
****
ತಿನ್ನಲೆಂದು ಕಿತ್ತಳೆ ಹಣ್ಣನ್ನು ಸುಲಿಯುತ್ತಾ
ಕೇಸರೀಶನ ಮಗು ಸಿಪ್ಪೆಯನ್ನು ಹೊರಗೆಸೆಯಿತು.
ಇದ ನೋಡಿ ದಿಗ್ಭ್ರಾಂತಗೊಂಡ ಕೇಸರೀಶ
ಸಿಪ್ಪೆಯನ್ನೆಲ್ಲಾ ಹೆಕ್ಕಿ ತಂದು
ಕೇಸರಿ ಬಣ್ಣದಲ್ಲಿನ ಪೌಷ್ಟಿಕಾಂಶದ ಕುರಿತು
ಮಗುವಿನ ತಲೆ ತಿನ್ನತೊಡಗಿದ!
****
ಮುಂದಿನ ಕೋಮುದಳ್ಳುರಿಗೆ ಸಂಚು ರೂಪಿಸಲು
ಕೇಸರೀಶನ ಮನೆಯಲ್ಲಿ
ಮಾತುಕತೆ ನಡೆಯುತ್ತಿತ್ತು,
ಊರಿಗೆ ಬೆಂಕಿ ಹಚ್ಚೋ ವಿಷಯ ಪ್ರಸ್ತಾಪವಾದಾಗ
ಚಹಾ ಬಂತು, ಜೊತೆಗೆ ಬಿಸಿಬಿಸಿ ತಿಂಡಿ-
'ಕೇಸರೀಬಾತ್'!
****
ತಪ್ಪಾಗಿ ಓದಿದರೆ ಆಗಿನ ಕಾಲದಲ್ಲಿ
ಅಧ್ಯಾಪಕರು ಬುದ್ಧಿ ಹೇಳುತ್ತಿದ್ದರು-
"ಸರಿಯಾಗಿ ಓದು"
ಕೇಸರೀಶನ ಬ(ಣ್ಣ)ಣದವನು
ಶಿಕ್ಷಣಮಂತ್ರಿಯಾದ ನಂತರ
ಕೆಲ ಅಧ್ಯಾಪಕರೇ ತಪ್ಪಾಗಿ ಹೇಳುತ್ತಿದ್ದಾರೆ-
"ಕೇಸರಿಯಾಗಿ ಓದು"!
****
ಪಠ್ಯಪುಸ್ತಕ ಕೇಸರೀಕರಣಗೊಂಡ ನಂತರ
ಕಪ್ಪು ಶಾಯಿಯಲ್ಲಿ ಮುದ್ರಿತವಾದ
ಬಡಪಾಯಿ ಅಕ್ಷರಗಳೆಲ್ಲಾ
ಹೇಗೆ ಕಾಣುತ್ತಿವೆ ಗೊತ್ತಾ...
ತಲೆಗೆ ಕೇಸರಿ ಟೋಪಿ ಹಾಕಿಸಿಕೊಂಡು
ಊರಿನ ಕೋಮು ಸೌಹಾರ್ದತೆಗೆ
ಬೆಂಕಿ ಹಚ್ಚಲು ಓಡಾಡುತ್ತಿರುವ
ಅವಿದ್ಯಾವಂತ ಯುವಕರಂತೆ!
****
ಬೆಳಗಿನ ಸೂರ್ಯ
ಕಿರಣಗಳ ಮಳೆಗರೆದಾಗ
ಕೇಸರೀಶನ ಕೆರೆಯ ಕಮಲದ ಮೊಗ್ಗು
ಅರಳಲೇ ಇಲ್ಲ,
ಒಂದು ಸಾರಿ ಊರಿಗೆಲ್ಲಾ
ಕೋಮುಸಂಘರ್ಷದ ಬೆಂಕಿ ಬಿದ್ದಾಗ
ಅದು ನಡುರಾತ್ರಿಯೆ ಅರಳಿತಲ್ಲ!
****
ಕೋಮುವಾದವೆಂಬ ಕ್ಯಾನ್ಸರನ್ನು
ಮೈಗೆಲ್ಲಾ ಸೋಂಕಿಸಿಕೊಂಡ
ಪತ್ರದ ಮುಖಪುಟದಲ್ಲಿ ಕಾವಿಧಾರಿಯೊಬ್ಬ
ಆಸ್ಪತ್ರೆಯನ್ನು ಉದ್ಘಾಟಿಸುವ ಚಿತ್ರ.
ಪಕ್ಕದಲ್ಲಿ ನಿಂತಿದ್ದ ಕೇಸರೀಶನ ಅಳಿಯನಾದ
ವೈದ್ಯನ ಕಿವಿಯಲ್ಲಿ
ಸ್ಟೆತೋಸ್ಕೋಪಿನ ಬದಲು
ಮಂತ್ರಿಸಿದ ಹೂವು!
******

● ವಿಲ್ಸನ್, ಕಟೀಲ್

ಪುರಾಣ 'ಪುರುಷ'ರು ಹಾಗು ಹೆಣ್ಣು ಸಂತಾನ



'ದೇವರಿಗೇಕೆ ಹೆಣ್ಣುಮಕ್ಕಳಿಲ್ಲ?' ಎಂದು ಪ್ರವೀಣ್ ಶೆಟ್ಟಿಯವರು ವಿವರಿಸಿದ್ದಾರೆ. ಶಕ್ತಿ, ಮಾತೆ, ದೇವಿ ಎಂದೆಲ್ಲಾ ದೇವರನ್ನು ಪೂಜಿಸುವ ನಾವೇ ದೇವರ ಎರಡನೇ ಪೀಳಿಗೆಯನ್ನು ಸೃಷ್ಟಿಸುವಾಗ ಬೇಕೆಂತಲೇ ದೇವರಿಗೆ ಹೆಣ್ಣು ಮಕ್ಕಳ ಭಾಗ್ಯವನ್ನು ನೀಡಿಲ್ಲ, ಶಕ್ತಿ ದೇವತೆಯ ಪ್ರತಿರೂಪಿಣಿ ಪಾರ್ವತಿ ತನ್ನ ಮೈಯಿಂದ ಗಣಪತಿಯೆಂಬ ಗಂಡನ್ನೇ ಸೃಷ್ಟಿಸಿರುವಾಗ ಉಳಿದವರ ಕತೆ ಅಷ್ಟೊಂದು ಪ್ರಮುಖವೆನಿಸದು. (ಅಂದಹಾಗೆ ಪಾರ್ವತಿಯು ಗಂಡುಮಗನ ಬದಲಿಗೆ ಹೆಣ್ಣು ಮಗಳನ್ನು ಸೃಷ್ಟಿಸಿದ್ದರೆ ಆ ಮಗಳು ಶಿವನೊಂದಿಗೆ ನೇರಾನೇರ ಯುದ್ಧಕ್ಕೆ ನಿಂತು ತಲೆ ಹಾರಿಸಿಕೊಳ್ಳುವಂತಹ ಅನಾಹುತ ಮಾಡಿಕೊಳ್ಳುತ್ತಿರಲಿಲ್ಲ!)

ಸತ್ಯವಾನನ ಜೀವಕ್ಕಾಗಿ ಯಮನ ಬೆನ್ನು ಹತ್ತುವ ಸಾವಿತ್ರಿಯಿಂದ ತಪ್ಪಿಸಿಕೊಳ್ಳಲು ಯಮ "ಸತ್ಯವಾನನ



ಜೀವವೊಂದನ್ನು ಬಿಟ್ಟು ಬೇರೇನಾದರೂ ವರ ಕೇಳು" ಎನ್ನುತ್ತಾನೆ. ಆಗ ಸಾವಿತ್ರಿ ತನ್ನ ಹಿರಿಯರಿಗಾಗಿ ನೂರು ಪುತ್ರರನ್ನ ಕೇಳುತ್ತಾಳೆಯೇ ಹೊರತು ತಪ್ಪಿಯೂ ಒಂದೇ ಒಂದು ಹೆಣ್ಣು ಸಂತಾನದ ಬಗ್ಗೆ ಆಸಕ್ತಿಯನ್ನೇ ತೋರುವುದಿಲ್ಲ, ಆದರೆ ಆಕೆಗಿಂತ ಗಾಂಧಾರಿ ಸ್ವಲ್ಪ ಬೆಟರ್. ನೂರು ಗಂಡುಗಳ ಜೊತೆ ಒಂದೇ ಒಂದು ಹೆಣ್ಣ(ದುಶ್ಶಲೆ)ನ್ನಾದರೂ ವ್ಯಾಸರಲ್ಲಿ ಆಕೆ ಕೇಳುತ್ತಾಳೆ.

ಇನ್ನು ರಾಮಾಯಣದ ದಶರಥನಿಗೆ ರಾಮನಿಗಿಂತ ದೊಡ್ಡವಳಾದ ಶಾಂತಾ ಎನ್ನುವ ಮಗಳಿದ್ದರೂ ರಾಮಾಯಣದ ಯಾವ ಪ್ರಮುಖ ಸಂದರ್ಭಗಳಲ್ಲೂ ಆಕೆ ಕಾಣಿಸಿಕೊಳ್ಳುವುದಿಲ್ಲ, ದಶರಥ ಯಾಗ ಮಾಡಿ ಮೂರು ಹೆಂಡಂದಿರಿಗೆ ಪಾಯಸವನ್ನು ಹಂಚಿದನಾದರೂ ಆತನ ಹೆಂಡತಿಯರಿಗೆ ಒಂದಾದರೂ ಹೆಣ್ಣು ಹುಟ್ಟುವುದಿಲ್ಲ, ಅದು ಹೇಳಿಕೇಳಿ 'ಪುತ್ರ ಕಾಮೇಷ್ಠಿ ಯಾಗ' ತಾನೆ? ಹಿರಿಯಳಾದ ಮಗಳೆಂಬ ಸಂತಾನವಿದ್ದರೂ "ಅಪುತ್ರಸ್ಯ ಗತಿಂ ನಾಸ್ತಿ" (ಗಂಡು ಸಂತಾನವಿಲ್ಲದವರಿಗೆ ಮುಕ್ತಿಯಿಲ್ಲ) ಎಂಬ ಭಯಕ್ಕೆ ಬಿದ್ದ ದಶರಥ ಗಂಡು ಸಂತಾನಕ್ಕಾಗಿ ಈ ಯಾಗ ನಡೆಸುತ್ತಾನೆ.

- ಶಶಿ ಪುತ್ತೂರು, ದಕ

ವಿಚಾರಪೂರ್ಣ ಲೇಖನ

ಪ್ರವೀಣ್ ಎಸ್. ಶೆಟ್ಟಿಯವರು ಬರೆದ 'ದೇವರಿಗೇಕೆ ಹೆಣ್ಣು ಮಕ್ಕಳಿಲ್ಲ?' (ಫೆಬ್ರವರಿ 13, 2013ರ ಸಂಚಿಕೆ) ಎಂಬ ಲೇಖನ ತುಂಬಾ ಹೊಸ ವಿಷಯಗಳೊಂದಿಗೆ ಕೂಡಿತ್ತಲ್ಲದೆ ಅದು ವಿಚಾರಪೂರ್ಣವೂ ಆಗಿತ್ತು.

ಈ ಬಗ್ಗೆ ನಾನು ಈವರೆಗೆ ಯೋಚಿಸಿಯೇ ಇರಲಿಲ್ಲ! ವೈದಿಕ ದೇವರುಗಳು ಬಹಳ ರಸಿಕರು ಎಂಬುದು ನಿಜ. ಎಲ್ಲ ಹಿಂದೂ ಪುರಾಣಗಳನ್ನು ಪುರುಷರೆ ಬರೆದಿರುವುದರಿಂದಾಗಿ ಈ ವಿಕೃತಿ ಪುರಾಣಗಳಲ್ಲಿ ಸೇರಿದೆ.

- ರವಿ ಭಾಸ್ಕರ್ ಶೇನವ, ಮುಂಬೈ

ಸಂಚಿಕೆ ತುಂಬಾ ಇಷ್ಟವಾಯಿತು

ಪತ್ರಿಕೆಯ ಫೆಬ್ರವರಿ 13, 2013 ಸಂಚಿಕೆ ತುಂಬಾ ಇಷ್ಟವಾಯಿತು. ಗೌರಿ ಲಂಕೇಶ್, ಪ್ರವೀಣ್ ಎಸ್. ಶೆಟ್ಟಿ, ಡಿ.ಎಂ.ನದಾಫ್, ಹೆಚ್.ಎಲ್.ಕೇಶವಮೂರ್ತಿ, ಜಿ.ರಾಜಶೇಖರ ಅವರ ಬರಹಗಳಲ್ಲದೆ ಥೂತ್ತೇರಿ ಮತ್ತು ಕಟ್ಟೆಪುರಾಣ ಅಂಕಣಗಳೂ ಚೆನ್ನಾಗಿವೆ. ಶಾರುಖ್ ಖಾನನ ಲೇಖನದ ಅನುವಾದವನ್ನು ಪ್ರಕಟಿಸಿದ್ದು ಸೂಕ್ತವೆನಿಸಿತು. ಹಾಗೆಯೇ 'ಮರೆಯುವ ಮುನ್ನ'ದಲ್ಲಿ ಪಿ.ಲಂಕೇಶರು ಹದಿನೈದು ವರ್ಷಗಳ ಹಿಂದೆ ಬರೆದ 'ಇಂದ್ರಿಯಗಳ ಸಹಕಾರಿ' ಎಂಬ ಟಿಪ್ಪಣಿಯು ನಮ್ಮೆಲ್ಲ ಪೂರ್ವಾಗ್ರಹಗಳನ್ನು ಚಿಂದಿ ಮಾಡಿತು. ಆ ಬರಹ ಈಗಲೂ ಹೊಸತನದಿಂದ ಕೂಡಿದೆ.

ಈ ಸಂಚಿಕೆಯು ಪಿ.ಲಂಕೇಶರು ಇದ್ದಾಗಿನ ಕಾಲವನ್ನು ನೆನಪಿಸಿತು.

- ಪಟ್ಟಾಭಿರಾಮ ಸೋಮಯಾಜಿ, ಮಂಗಳೂರು

'ನಾನೊಬ್ಬ ಖಾನ್' ಮನಮುಟ್ಟಿತು

'ನಾನೊಬ್ಬ ಖಾನ್' (ಫೆಬ್ರವರಿ 13, 2013ರ ಸಂಚಿಕೆ) ಎಂಬ ಶಾರುಖ್ ಖಾನ್ ಅವರ ಲೇಖನ ಮತ್ತು ಅದರ ಅನುವಾದ ಅದ್ಭುತವಾಗಿತ್ತು.

- ಅನಿಲ್, ಶಿವಮೊಗ್ಗ



ನಟ ಶಾರುಖ್ ಖಾನನ ಮಾತುಗಳನ್ನು ಗೌರಿ ಅವರು ಕನ್ನಡಕ್ಕೆ ಮಾರ್ಪಡಿಸಿರುವುದು ತುಂಬಾ ಚೆನ್ನಾಗಿತ್ತು, ಅಲ್ಪಸಂಖ್ಯಾತರ ತಳಮಳಗಳು ತುಂಬಾ ಕಾಡಿದವು.

- ಕೆ.ವೆಂಕಟೇಶ್, ಎಸ್‌ಎಂಎಸ್ ಮೂಲಕ

ನಗೆಯ ಹಿಂದಿನ ನೋವು

ಕಪ್ಪು-ಬಿಳುಪು ಚಿತ್ರಗಳ ಜಮಾನಾದ ತಮಿಳು ಹಾಸ್ಯ ನಟ ಚಂದ್ರಬಾಬು ಅವರನ್ನು ಕುರಿತು ಪಾರ್ವತೀಶ ಅವರು ಬರೆದ ಟಿಪ್ಪಣಿ (ಫೆಬ್ರವರಿ 6, 2013ರ ಸಂಚಿಕೆ) ನೋವು ತಂದಿತು. ಅವರು ಹಾಡಿದ ಹಾಡುಗಳ ಪೈಕಿ 'ವೆಟ್ರಿ ಉಳ್ಳಾ ಮನಿದರೆಲ್ಲಮ್...' ಎಂಬ ಹಾಡು ಆ ಕಾಲದಲ್ಲಿ ಸೂಪರ್ ಹಿಟ್ ಆಗಿತ್ತು, ಆ ಹಾಡಿನ ಅರ್ಥ ಸುಮಾರಾಗಿ ಹೀಗಿರಬಹುದು:


"ಜಯ ಗಳಿಸಿದ ಮನುಜರೆಲ್ಲ ಬುದ್ಧಿವಂತರಲ್ಲ,
ಬುದ್ಧಿ ಇರುವ ಮನುಜರೆಲ್ಲ ಜಯ ಕಾಣುವುದಿಲ್ಲ..."

...ನಪಿನ 'ಅಂಗಳದಲ್ಲಿ' ಹುಡುಗಾಟ

...ಂಬಾರಿ' ಚಿತ್ರದ ನಾಯಕಿ ಸುಪ್ರಿಯ ಅಲ್ಲೊಮ್ಮೆ, ಇಲ್ಲೊಮ್ಮೆ ಮಾತ್ರ ಕಾಣಿಸಿಕೊಂಡರೂ ಅದು ... ಆಕೆ ಸುದ್ದಿಯಲ್ಲಿರುತ್ತಾಳೆ. ಈಕೆ ಚಿತ್ರರಂಗಕ್ಕೆ ಕಾಲಿಟ್ಟ ಆರಂಭದ ದಿನಗಳಲ್ಲಿ ಕೆಲವು ಛಾಯಾಗ್ರಾಹಕರು ...ಪತ್ರಕರ್ತರ ಜೊತೆ ಸಣ್ಣಪುಟ್ಟ ಜಗಳ ಮಾಡಿಕೊಂಡು ಮಾಧ್ಯಮದವರ ಅವಕೃಪೆಗೆ ಒಳಗಾಗಿದ್ದಳು. ...ಈಕೆ ನಟಿಸಿರುವ 'ನೆನಪಿನಂಗಳ' ಎಂಬ ಚಿತ್ರದ ನಿರ್ದೇಶಕ ಧನುಚಂದ್ರ ಆಕೆಯ ವಿರುದ್ಧ ಆರೋಪಗಳ ...ಳೆಯನ್ನು ಸುರಿಸುವ ಮೂಲಕ ಸುಪ್ರಿಯ ಮತ್ತೆ ಸುದ್ದಿಯಲ್ಲಿದ್ದಾಳೆ.

...ತ್ತೀಚೆಗೆ 'ನೆನಪಿನಂಗಳ' ಚಿತ್ರದ ಪತ್ರಿಕಾಗೋಷ್ಠಿಯಲ್ಲಿ ಉಡುಪಿಯಲ್ಲಿದ್ದ ಸುಪ್ರಿಯ ಮಾತನಾಡಿದ ಚಿಕ್ಕ ...ನ್ನು ಮಾಧ್ಯಮದವರಿಗೆ ತೋರಿಸಲಾಯಿತು. ಅದರಲ್ಲಿ ಸುಪ್ರಿಯ "ಈ ಸಿನಿಮಾ ನನ್ನ ವೃತ್ತಿಜೀವನದಲ್ಲಿ ...ಮುಖ್ಯ ಸಿನಿಮಾ. ಇದು ತುಂಬಾ ಚೆನ್ನಾಗಿ ಮೂಡಿಬಂದಿದೆ. ಇದರ ಪ್ರಚಾರಕ್ಕಾಗಿ ನಾನು ಎಲ್ಲ ರೀತಿಯ ... ನೀಡುತ್ತೇನೆ. ಪತ್ರಕರ್ತರಾದ ನಿಮ್ಮ ಸಹಕಾರವೂ ನನಗೆ ಬೇಕು" ಎಂದು ಮನವಿ ಮಾಡಿದಳು.

...ಾದನಂತರ ಮಾತನಾಡಿದ ನಿರ್ದೇಶಕ ಧನುಚಂದ್ರ "ನಮ್ಮ






... ನಾಯಕಿ ಸುಪ್ರಿಯ ನಮಗೆ ಸರಿಯಾದ ...ಗಳನ್ನು ಕೊಡುತ್ತಿಲ್ಲ ಮತ್ತು ಪ್ರಚಾರದ ...ದಲ್ಲಿ ಸಹಕರಿಸುತ್ತಿಲ್ಲ" ಎಂದು ಆರೋಪಿಸಿದರು. ... ಕೇಳಿ ದಂಗಾದ ಪತ್ರಕರ್ತರು "ಅಲ್ರಿ! ಈ ...ವನ್ನು ಸಂಪೂರ್ಣಗೊಳಿಸಲು ನೀವು ಬರೋಬ್ಬರಿ ...ು ವರ್ಷ ತೆಗೆದುಕೊಂಡಿದ್ದೀರಿ. ಆದರೂ ಈ ...ು ವರ್ಷದಲ್ಲಿ ನೀವು ಕೇಳಿದಾಗಲೆಲ್ಲ ಸುಪ್ರಿಯ ... ನಟಿಸಿ ಚಿತ್ರವನ್ನು ಸಂಪೂರ್ಣ ಮಾಡಿಕೊಟ್ಟಿದ್ದಾಳೆ. ...ಪ್ರಚಾರಕ್ಕೂ ಬರುತ್ತೇನೆ ಎಂದಿದ್ದಾರೆ. ಆದರೂ ನೀವು ... ಮೇಲೆ ಗೂಬೆ ಕೂರಿಸುವುದು ಸರಿಯೇ?" ... ಹೇಳಿದಾಗ ಅವರು ಮೌನವಾಗಿಬಿಟ್ಟರು.

...ಮೂರು ವರ್ಷಗಳಿಂದ ನಿರ್ಮಾಣಗೊಂಡಿರುವ ...ಸಿನಿಮಾದ ಬಗ್ಗೆ ಅದರ ನಿರ್ಮಾಪಕ ರಾಮಕೃಷ್ಣ ...ಗೆ ಎಲ್ಲಿಲ್ಲದ ಆತ್ಮವಿಶ್ವಾಸವಿದೆ. ಇದಕ್ಕೆ ಕಾರಣ ಈ ... ನಾಯಕನಟನಾಗಿ ಅವರ ಮಗ ಹೇಮಂತ್ ...ರುವುದು. ಈ ಚಿತ್ರ ಮುಗಿದನಂತರ ತಮ್ಮ ...ಗಾಗಿ ಇನ್ನೊಂದು ಚಿತ್ರವನ್ನು ಮಾಡುವ ...ಸ್ಸಿನಲ್ಲಿದ್ದಾರೆ ರಾಮಕೃಷ್ಣ.

ಶಂಕರ್‌ಗೆ ವರದನಾಯಕನ ವರ

'ವರದನಾಯಕ' ಚಿತ್ರದ ನಿರ್ಮಾಪಕ ಶಂಕ್ರೇಗೌಡರು ಡಬಲ್ ಜಾಕ್‌ಪಾಟ್ ಹೊಡೆದಿದ್ದಾರೆ. ಮೊದಲನೆಯದಾಗಿ 'ವರದನಾಯಕ' ಚಿತ್ರ ಸುಮಾರಾಗಿದ್ದರೂ ಅದರ ಗಳಿಕೆ ಮಾತ್ರ ಎಲ್ಲ ಕಡೆ ನಿರೀಕ್ಷಿಸಿದ್ದಕ್ಕಿಂತಲೂ ಚೆನ್ನಾಗಿದೆ. ಇದರರ್ಥ ಈ ಚಿತ್ರದಿಂದ ಶಂಕ್ರೇಗೌಡರಿಗೆ ಸಿಕ್ಕಾಪಟ್ಟೆ ಲಾಭ ಬರುವುದು ಗ್ಯಾರಂಟಿಯಾಗಿದೆ. ಇದು ಶಂಕ್ರೇಗೌಡರು ಹೊಡೆದ ಮೊದಲನೆ ಜಾಕ್‌ಪಾಟ್ ಎನ್ನಬಹುದು.



ಇದಕ್ಕಿಂತ ದೊಡ್ಡ ಜಾಕ್‌ಪಾಟ್‌ಅನ್ನು ಶಂಕ್ರೇಗೌಡರು ಹೊಡೆದಿದ್ದಾರೆ. ಅದೇನೆಂದರೆ ಬರುವ ಫೆಬ್ರವರಿ 15 ರಂದು ಶಂಕ್ರೇಗೌಡರ ನಿರ್ಮಾಣದಲ್ಲಿ ಸುದೀಪ್ ನಾಯಕನಾಗಿ ನಟಿಸಲಿರುವ ಹೊಸ ಚಿತ್ರವೊಂದು ಆರಂಭವಾಗಲಿದೆ. ಸದ್ಯ ಗೆಲ್ಲುವ ಕುದುರೆಯೆನಿಸಿರುವ ಸುದೀಪ್ ಕಾಲ್‌ಶೀಟ್‌ಗಾಗಿ ಅನೇಕ ನಿರ್ಮಾಪಕರು ಕ್ಯೂನಲ್ಲಿ ನಿಂತಿದ್ದರು. ಅದರಲ್ಲೂ ಚಂದ್ರಶೇಖರ್, ಕೆ.ಸಿ.ಎನ್. ಕುಮಾರ್, ಸೂರಪ್ಪ ಬಾಬು ಮತ್ತು ನಿರ್ದೇಶಕ ಕಂ ನಟ ಪ್ರೇಮ್ ಸುದೀಪ್‌ಗೆ ಅಡ್ವಾನ್ಸ್ ನೀಡಿ ಅವರ ಕಾಲ್‌ಶೀಟ್‌ಗಾಗಿ ಅಲೆಯುತ್ತಿದ್ದರು. ಸಹಜವಾಗಿಯೇ ಈ ನಾಲ್ವರಲ್ಲಿ ಒಬ್ಬರಿಗೆ ಸುದೀಪ್ ಕಾಲ್‌ಶೀಟ್ ಸಿಗಬಹುದು ಎಂದು ಎಲ್ಲರೂ ನಿರೀಕ್ಷಿಸುತ್ತಿದ್ದರು.

ಆದರೆ ಇತ್ತೀಚೆಗೆ ಸುದೀಪ್ ಜೊತೆ 'ಬಚನ್' ಚಿತ್ರದ ಹಾಡಿನ ಚಿತ್ರೀಕರಣಕ್ಕಾಗಿ ಮಸ್ಕತ್‌ಗೆ ಹೋಗಿದ್ದ ಶಂಕ್ರೇಗೌಡರು ಇಲ್ಲಿಂದ ವಾಪಸ್ ಮರಳುವ ಸಂದರ್ಭದಲ್ಲಿ ಸುದೀಪ್ ಕಾಲ್‌ಶೀಟನ್ನು ಕೈಯಲ್ಲಿ ಹಿಡಿದುಕೊಂಡು ಬಂದಿದ್ದಾರೆ. ಇದನ್ನು ನೋಡಿ ಬೇರೆ ನಿರ್ಮಾಪಕರು ದಂಗಾಗಿಬಿಟ್ಟಿದ್ದಾರೆ.

ಮಗುವಿಗೆ ಜನ್ಮ ನೀಡಿದ್ದೂ ಬ್ರೇಕಿಂಗ್ ನ್ಯೂಸ್!



ಕಳೆದ ವಾರ ನಟಿ ತಾರಾ ತಾಯಿಯಾದದ್ದು ಈಗ ಇಡೀ ಕರ್ನಾಟಕಕ್ಕೆ ಗೊತ್ತಿರುವ ವಿಷಯ. ವಿಶೇಷವೆಂದರೆ ಮೆಡಿಕಲ್ ತಂತ್ರಜ್ಞಾನದ ಸಹಾಯದಿಂದ ತಾರಾ ತಮ್ಮ 48ರ ಹರೆಯದಲ್ಲಿ ಒಂದು ಮಗುವಿಗೆ ಜನ್ಮ ನೀಡಿ ತಾಯ್ತನದ ಸುಖವನ್ನು ಅನುಭವಿಸುತ್ತಿದ್ದಾರೆ.

ತಾರಾ ಮಗುವಿಗೆ ಜನ್ಮ ನೀಡಿದ್ದೇ ತಡ ಸುದ್ದಿ ಮಾಧ್ಯಮಗಳು ಆಕೆ ಇದ್ದ ಆಸ್ಪತ್ರೆಗೇ ದಾಳಿಯಿಟ್ಟವು. ಆಕೆ ಮಲಗಿದ್ದ ಬೆಡ್‌ನಿಂದಲೇ ನೇರ ಪ್ರಸಾರವನ್ನೂ ಮಾಡಿದವು. ಒಂದೇ ಒಂದು ಸಮಾಧಾನದ ವಿಷಯವೆಂದರೆ ಆ ಟಿವಿ ಚಾನೆಲ್‌ನವರ್‍ಯಾರೂ ತಾರರ ಮಗುವನ್ನು ಮಾತನಾಡಿಸಲು ಹೋಗದಿರುವುದು...!

ತಾರಾ ಮಗುವಿಗೆ ಜನ್ಮ ನೀಡಿದ ಮರುದಿನ ಟಿವಿ ಚಾನೆಲ್‌ಗಳಲ್ಲಿ ಈ ಕುರಿತು ಚರ್ಚೆಯೂ ನಡೆದುಹೋಯಿತು. ಮೆಡಿಕಲ್ ತಂತ್ರಜ್ಞಾನದ ಸಹಾಯದಿಂದ ತಾಯಿಯಾಗುವ ಇಂತಹ ಪ್ರಕರಣಗಳ ಬಗ್ಗೆ ಅಂದು ತಜ್ಞರು ಬೆಳಕು ಚೆಲ್ಲಿದರು. ಅಂತೂಇಂತೂ ತಾರಾ ಮಗುವಿಗೆ ಜನ್ಮ ನೀಡಿದ್ದೂ 'ಬ್ರೇಕಿಂಗ್ ನ್ಯೂಸ್' ಆಯಿತು.

ಟಿಆರ್‌ಪಿ ಪೈಪೋಟಿಗೆ ಬಿದ್ದಿರುವ ಟಿವಿ ಚಾನೆಲ್‌ನವರು ಮುಂಬರುವ ದಿನಗಳಲ್ಲಿ ಯಾವ್ಯಾವ ರೀತಿಯ ಸುದ್ದಿಗಳನ್ನು ವರದಿ ಮಾಡುತ್ತಾರೆ ಎಂದು ಊಹಿಸಿಯೇ ಕನ್ನಡದ ನಾಯಕ-ನಾಯಕಿಯರು ಈಗಲೇ ಬೆದರಿದ್ದಾರೆ.

● ಶೆಣೈ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು ...ankesh70@rediffmail.com ಗೆ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ...ನಿಮ್ಮ ಪ್ರತಿಕ್ರಿಯೆಗಳನ್ನು 9980331427 ... ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ ಕಳುಹಿಸಬಹುದು.

...ಚಂದ್ರಬಾಬು ಅವರ ನಿಜಜೀವನಕ್ಕೂ ಈ ಹಾಡು ...ಯಿಸಬಹುದೇ? ...ಮದುವೆಯ ಮೊದಲ ದಿನವೇ ಹೆಂಡತಿಯ ...ಕ್ಷೆಯಂತೆ ಆಕೆಗೆ ಬಿಡುಗಡೆ ನೀಡಿದ ಆತನ ...ಮುವಂತಿಕೆಗೆ ನೂರು ವಣಕ್ಕುಮ್. ...ನೋವು ನುಂಗಿ ನಗಿಸುತ್ತಲೇ ಹೋಗುವ ಇಂತಹ ...ವರ ಬದುಕು ದುರಂತದಲ್ಲಿ ಅಂತ್ಯವಾಗುವುದು ...ಕನ ಕ್ರೂರ ವ್ಯಂಗ್ಯ. ಆತನ ನೆನಪಿಗೆ ಒಂದು ಹನಿ ...ನಿ.

- ಎನ್.ಕೆ.ವರದರಾಜ್, ಕೋಲಾರ

...ಇಬ್ಬರು ನಟರ ನಡುವಿನ ವ್ಯತ್ಯಾಸ' (ಫೆಬ್ರವರಿ 13, ...3ರ ಸಂಚಿಕೆ) ಎಂಬ ಕಂಡಹಾಗೆ ಅಂಕಣ ಅರ್ಥ ...ರ್ಣವಾಗಿತ್ತು. ಎಂತೆಂಥ ಬುದ್ಧಿವಂತರಿಗೂ ಒಮ್ಮೊಮ್ಮೆ ... ಕೈ ಕೊಟ್ಟು ಬುದ್ಧಿ ಕಲಿಸುತ್ತದಲ್ಲಾ! ...ಇತ್ತೀಚೆಗೆ ನನಗೊಂದು ಹೊಸ ಅನುಭವವಾಯಿತು. ... ನಾಸ್ತಿಕರಷ್ಟೇ ಗೊತ್ತಿದ್ದರು, ಇತ್ತೀಚೆಗೆ ಪರಿಚಯವಾದ ... ನಾಸ್ತಿಕ ವ್ಯಕ್ತಿ ಚರ್ಚೆ ಮಾಡುತ್ತಾ ಮಾಡುತ್ತಾ ತಾವೊಬ್ಬ ...ದೂ ನಾಸ್ತಿಕ' ಎಂಬುದನ್ನು ಅನುಭವಕ್ಕೆ ತಂದರು. ...ಕನಾದ ಕಮಲ್ ಹಾಸನ್ ಇಂತಹ ವ್ಯಕ್ತಿ ಅಲ್ಲ ...ದುಕೊಳ್ಳುತ್ತೇನೆ.

- ರಂಗಸ್ವಾಮಿ, ಮೈಸೂರು

'ಹಿಂದೂ-ಮುಸ್ಲಿಂರ ಜುಗಲ್‌ಬಂದಿಯಾಗಲಿ

...ಕಳೆದೆರಡು ವಾರದಿಂದ ಮಲೆನಾಡಿನ ಹಸಿರಲ್ಲಿ ...ಮರೆಸಿದ್ದ ನನಗೆ ಪತ್ರಿಕೆಯತ್ತ ಕಣ್ಣು ಹಾಯಿಸಲು ಸಾಧ್ಯವಾಗಿರಲಿಲ್ಲ. 'ವಿಶ್ವರೂಪ'ದ ಬಗ್ಗೆ ಬರೆದ ಕಂಡಹಾಗೆ ಓದಿದೆ. ನೀವು ಬೇಕಿದ್ದರೆ ಆರೆಸ್ಸೆಸ್ಸನ್ನು ಅನ್ನು ದ್ವೇಷಿಸಿ ಆದರೆ ಹಿಂದೂ ಧರ್ಮವನ್ನಲ್ಲ, ನಮ್ಮಂತಹ ಅರೆ-ಆಸ್ತಿಕರಿಗೆ ನೋವಾಗುತ್ತದೆ. ನಾಗತಿಹಳ್ಳಿಯವರು ಭಾಷಣವೊಂದರಲ್ಲಿ "ಲಂಕೇಶರು ತಮ್ಮ ಕೊನೆಯ ದಿನಗಳಲ್ಲಿ 'ದೇವರು ಇರಬಹುದೇನೋ' ಎನ್ನುತ್ತಿದ್ದರು" ಎಂದು ಹೇಳಿದ್ದರು. ಅಂದರೆ ದೇವರು ಇಲ್ಲವೆ ಇಲ್ಲ ಅಥವಾ ಇದ್ದೆ ಇದ್ದಾನೆ ಎಂದು ಹೇಳಲಾಗುವುದಿಲ್ಲ ಎಂದು ಅರ್ಥ.

ಬಹುಶಃ ಸಮಾಜಕ್ಕೆ ಲಂಕೇಶರು ಹತ್ತಿರವಾಗಿದ್ದಷ್ಟು ನೀವಿನ್ನೂ ಆಗಿಲ್ಲ, ಕಾರಣಗಳು ನೀವು ಯಾವುದೋ ಒಂದು ಗುಂಪನ್ನು ಒಲೈಸುತ್ತ ಬಹು ದೊಡ್ಡ ಗುಂಪನ್ನು, ನಿಮ್ಮ ಜಾಣತನಕ್ಕೆ - ನಿಮ್ಮ ವಿಶಾಲ ಜ್ಞಾನಕ್ಕೆ ಬೆಲೆ-ಗೌರವಕೊಡುವ ಲಂಕೇಶರ ಪ್ರೀತಿಯ ಗುಂಪನ್ನು ಕಳೆದುಕೊಳ್ಳುತ್ತಿದ್ದೀರಿ ಎನಿಸುತ್ತದೆ. ಹಿಂದುಗಳೊ-ಮುಸ್ಲಿಂರೊ ಅವರವರು ಪರಸ್ಪರ ಗೌರವ ಇಟ್ಟುಕೊಂಡರೆ ಅದೇ ಜಾತ್ಯತೀತ ಮನೋಭಾವವಲ್ಲವೇ.

ಭೀಮಸೇನ್ ಜೋಷಿಯವರು ಒಮ್ಮೆ ಚಂಬಲ್ ಕಣಿವೆಯಲ್ಲಿ ಪ್ರಯಾಣಿಸುತ್ತಿದ್ದಾಗ ಆಗ ಡಕಾಯಿತೆ ಆಗಿದ್ದ ಪೂಲನ್‌ದೇವಿ ಅವರನ್ನು ಅಪಹರಿಸಿದ್ದಳಂತೆ. ಆದರೆ ತಾನು ಅಪಹರಿಸಿರುವುದು ಭೀಮಸೇನ್ ಜೋಷಿ ಎಂದು ತಿಳಿದಾಗ ಆಕೆ ಅವರಿಗೆ ಮರ್ಯಾದೆ ಕೊಟ್ಟು ಅಲ್ಲೆ ಸಂಗೀತ ಕಛೇರಿ ನಡೆಸಿ ಎಂದಳಂತೆ. ಆಗ ಪೂಲನ್ ದೇವಿ ತಬಲಾ ವಾದಕನತ್ತಲೆ ನೋಡುತಿದ್ದಳಂತೆ. ಇದನ್ನು ಗಮನಿಸಿದ ಜೋಷಿ ಅವರು "ಅವನನ್ನ್ಯಾಕೆ ಹಾಗೆ ನೋಡುತಿದ್ದಿ?" ಎಂದು ಆಕೆಯನ್ನು ಪ್ರಶ್ನಿಸಿದರಂತೆ. ಆಗ ಆಕೆ "ನೀವು ಒಬ್ಬ ನಿಜವಾದ ಭಾರತ ರತ್ನ, ಏಕೆಂದರೆ ಒಬ್ಬ ಮುಸ್ಲಿಂ ಕೂಡ ನಿಮ್ಮ ಹಿಂದೂ ಗೀತೆಗೆ ಶ್ರುತಿಸೇರಿಸಿ ಸಂಗೀತವನ್ನು ಶ್ರೀಮಂತಗೊಳಿಸಿದ್ದಾನೆ" ಎಂದಳಂತೆ.


ನಮ್ಮ ಅಚ್ಚುಮೆಚ್ಚಿನ ಗೌರಿಯು ಲಂಕೇಶ್ 'ಹಿಂದೂ-ಮುಸ್ಲಿಂರ ಜುಗಲ್‌ಬಂದಿ'ಯಾಗಲಿ. ಸುಸ್ವರಕ್ಕೋಸ್ಕರ ಹಪಹಪಿಸುತ್ತಿರುವ ಓದುಗರಿಗೆ ನಿರಾಶೆಯಾಗದಿರಲಿ. ಕ್ರಿಯಾತ್ಮಕವಾಗಿ ಟೀಕಿಸಿದ್ದೇನೆ, ನೋವಾಗಿದ್ದರೆ ಕ್ಷಮಿಸಿ.

29 ಕ್ಕೆ ಕೊಡಬೇಕಿದ್ದ ಬರ್ತ್ ಡೇ ಪಾರ್ಟಿ ಕ್ಯಾನ್ಸಲ್ ಮಾಡಬಿಟ್ಟಿರಾ? ಅಕ್ಕ ನಿಮ್ಮ ನಗು ನಮ್ಮ ಸ್ಫೂರ್ತಿ.

- ಅಭಿನಂದನ್ ಬಳ್ಳಾರಿ, ಈ ಮೇಲ್ ಮೂಲಕ

ಬಜೆಟ್ಟಿನ ಬಂಡವಾಳ ಬಯಲು!

ವಾರ ಕಾಲದ ಡ್ರಾಮಾಕ್ಕೆ ಅಂತೂ ತಾತ್ಕಾಲಿಕ ತೆರೆಬಿದ್ದಿದೆ. ಜಗದೀಶ ಶೆಟ್ಟರರ 'ಜೀವ-ಮಾನ'ದ ಕನಸು ಬಜೆಟ್ ಮಂಡನೆ ಜರುಗಲಿದೆ. ಎಲ್ಲ ರಾಜಕೀಯ ದಿಗಿಲುಗಳ ನಡುವೆಯೂ ಬರಲಿರುವ ಬಜೆಟ್ ಹೇಗಿರಲಿದೆ ಎಂಬ ಸುಳಿವನ್ನು ಅವರು ನೀಡುತ್ತಲೇ ಇದ್ದಾರೆ.



ವಿವಿಧ ಜಿಲ್ಲೆಗಳಿಂದ ರಾಜಧಾನಿಗೆ ಧಾವಿಸಿ ಬಂದ 50ಕ್ಕೂ ಹೆಚ್ಚು ಮಠಾಧೀಶರು ಆತಂಕದಲ್ಲಿದ್ದ ಲಿಂಗಾಯತ ಸಿ.ಎಂ. ಸಾಹೇಬರಿಗೆ ಅಭಯಹಸ್ತ ನೀಡಿದ್ದಾರೆ. ಶೆಟ್ಟರ್ ಅವರು ಸ್ವಾಮೀಜಿಗಳ ಪಾದಗಳಿಗೆ ಬಿದ್ದು ಬಜೆಟ್ಟಿನ 'ಭರವಸೆ' ನೀಡಿದ್ದಾರೆ. ಅಂದರೆ ಈ ಸಲದ ಬಜೆಟ್ಟಿನಲ್ಲೂ ಮಠಗಳಿಗೆ ಬಂಪರ್ ಬೆಳೆ ಕಾದಿದೆ. ದುಡಿಲಿಲ್ಲ, ದುಃಖ ಪಡಲಿಲ್ಲ; ಇದು ಇಬ್ಬರಿಗೂ ಅನ್ವಯಿಸುವ ಮಾತೇ ಆಗಿದೆ.

ಇನ್ನೊಂದು ಸಮಾರಂಭದಲ್ಲಿ ಮಾತಾಡುತ್ತ 'ರಾಜ್ಯದ 24 ಸಾವಿರ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗಳಿಗೆ ಕಂಪ್ಯೂಟರ್‌ಗಳನ್ನು ಒದಗಿಸಲು ಬಜೆಟ್ಟಿನಲ್ಲಿ ಹಣ ಒದಗಿಸಲಾಗುವುದು' ಎಂದು ಸಿ.ಎಂ. ಹೇಳಿದ್ದಾರೆ. ವಿಚಿತ್ರ ನೋಡಿ: ಹಿಂದಿದ್ದ 'ಮಾಹಿತಿ ಸಿಂಧು' ಯೋಜನೆಯನ್ನು ಕೈಬಿಟ್ಟಿದ್ದು ಇದೇ ಬಿಜೆಪಿ ಸರಕಾರ. ಸಾವಿರಕ್ಕೂ ಹೆಚ್ಚು ಸರಕಾರಿ ಪ್ರೌಢಶಾಲೆಗಳಲ್ಲಿ ಕಂಪ್ಯೂಟರ್‌ಗಳು ಧೂಳು ತಿನ್ನುತ್ತಾ ಬಿದ್ದಿವೆ. ಸುಮಾರು ಮೂರೂವರೆ ಸಾವಿರಕ್ಕೂ ಹೆಚ್ಚು 'ಮಾಹಿತಿ ಸಿಂಧು' ಶಿಕ್ಷಕರು ಅತಂತ್ರರಾಗಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಮತ್ತೆ 24 ಸಾವಿರ ಹಿರಿಯ ಪ್ರಾಥಮಿಕ ಶಾಲೆಗಳಿಗೆ ಕಂಪ್ಯೂಟರ್‌ಗಳನ್ನು ಒದಗಿಸಲು ಶೆಟ್ಟರ್ ಹೊರಟಿದ್ದಾರೆ!

ಇದು ಬರಲಿರುವ ಬಜೆಟ್ ಹೇಗಿರಲಿದೆ ಎಂಬುದಕ್ಕೆ ಕನ್ನಡಿ.

-ಪಿ.ಕೆ.ಮಲ್ಲನಗೌಡರ್ ಮತ್ತು ದೇವರಾಜ್ ನಾಯ್ಕ್

ನೀವು ಯಾಕೆ ಅಶೀಶ್ ನಂದಿ ಹೇಳಿಕೆಯನ್ನು ಮುಟ್ಟಿಲ್ಲ? ಎಲ್ಲದಕ್ಕೂ ತಕ್ಷಣ ಸ್ಪಂದಿಸುವ 'ಲಂಕೇಶ್' ಈ ಕುರಿತು ಸುಮ್ಮನಿದೆಯಲ್ಲಾ?

-ಸಂತೋಷ್ ಗುದಿಯಂಗಡಿ, ಎಸ್‌ಎಂಎಸ್ ಮೂಲಕ

ಕಮಲ್ ಹಾಸನ್ ಯಾಕೆ ಹೀಗೆ ಮಾಡಿದರು? ಒಂದು ಸಮಸ್ಯೆಯನ್ನು ಒಂದೇ ಮುಖದಿಂದ ಸಮಗ್ರವಾಗಿ ಗ್ರಹಿಸಲು ಸಾಧ್ಯವೇ? ಒಂದು ವೇಳೆ ಈತ 'ಕಮಲ್ ಹಾಸನ್' ಆಗಿದ್ದರೆ 'ವಿಶ್ವರೂಪಂ' ತರಹದ ಸಿನಿಮಾವನ್ನು ನಿರ್ಮಿಸುತ್ತಿದ್ದರೆ?

'ಗೌರಿ ಲಂಕೇಶ್ ಪತ್ರಿಕೆ' ಆಪ್ತವಾಗುವುದು ಅದು ಒಂದು ವಿಚಾರವನ್ನು ಹಲವು ನಿಟ್ಟಿನಿಂದ ನೋಡಿ ಮಾನವೀಯತೆಯ ಭರವಸೆ ತರುವ ಕಾರಣಕ್ಕಾಗಿ.

-ರವಿಕುಮಾರ್, ಹಾಸನ

ಕಂಡಹಾಗೆ ಅಂಕಣದ ತಲೆಬರಹ 'ಆರೆಸ್ಸೆಸ್ ಭಯೋತ್ಪಾದಕ ಗುಂಪು ಎನ್ನಲು ಭಯವೇಕೆ?' ಸೂಪರ್ ಆಗಿದೆ.

ಶಿವಮೊಗ್ಗೆಯಲ್ಲಿ ಮಾರ್ಚ್ 10ರಂದು ನಡೆಯಲಿರುವ 'ಲಂಕೇಶ್ 78' ಕಾರ್ಯಕ್ರಮಕ್ಕೆ ಕಾಯುತ್ತಿರುವೆ.

- ಮಂಜುಳಾ ರಾಜು, ಶಿವಮೊಗ್ಗ

ಸೈನೈಡ್ ರಮೇಶ್‌ರ ಅಟ್ಟಹಾಸ



ಎ.ಎಮ್.ಆರ್.ರಮೇಶ್ ನಿರ್ದೇಶನದ 'ಅಟ್ಟಹಾಸ' ಚಿತ್ರ ಬರುವ ಫೆಬ್ರವರಿ 14 ರಂದು ಬಿಡುಗಡೆಯಾಗಲಿದೆ. ಪ್ರೇಮಿಗಳ ದಿನಾಚರಣೆಯಂದು ಒಬ್ಬ ಮನುಷ್ಯದ್ವೇಷಿ ಅಥವಾ ಕ್ರೂರಿಯ ಜೀವನಕಥೆ ಬಿಡುಗಡೆಯಾಗುತ್ತಿರುವುದು ವಿಪರ್ಯಾಸ.

ಈ 'ಅಟ್ಟಹಾಸ' ಚಿತ್ರ ಕಾಡುಗಳ್ಳ ಮತ್ತು ಕೊಲೆಗಡುಕ ವೀರಪ್ಪನ್‌ನ ಜೀವನಕಥೆಗೆ ಸಂಬಂಧಪಟ್ಟದ್ದು. ಇದನ್ನು ರಮೇಶ್ ಕನ್ನಡ, ತಮಿಳು ಮತ್ತು ತೆಲುಗಿನಲ್ಲಿ ನಿರ್ಮಿಸಿ, ನಿರ್ದೇಶಿಸಿದ್ದಾರೆ. ತಮಿಳಿನಲ್ಲಿ ಈ ಚಿತ್ರಕ್ಕೆ 'ವನ ಯುದ್ಧಂ' ಎಂದೂ, ತೆಲುಗಿನಲ್ಲಿ 'ವೀರಪ್ಪನ್' ಎಂದೂ ಹೆಸರಿಟ್ಟಿದ್ದಾರೆ.

ಈ ಚಿತ್ರದಲ್ಲಿ ಕನ್ನಡದ ಮೇರು ನಟ ರಾಜ್‌ಕುಮಾರ್ ಅವರ ಅಪಹರಣ, ಪ್ರತ್ಯೇಕ ತಮಿಳು ರಾಜ್ಯದ ಬೇಡಿಕೆ ಹಾಗೂ ವೀರಪ್ಪನ್‌ನ ಅಟ್ಟಹಾಸ ಇವೆಲ್ಲವೂ ಸೇರಿಕೊಂಡಿದೆ. ಹೀಗಾಗಿ ಇದೊಂದು ತುಂಬಾ ಸೆನ್ಸಿಟಿವ್ ಚಿತ್ರ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ. "ರಾಜ್‌ಕುಮಾರ್ ಅಪಹರಣ ಕನ್ನಡದ ಪ್ರೇಕ್ಷಕರಿಗೆ ಅತ್ಯಂತ ಭಾವುಕವಾದದ್ದು. ಇದನ್ನು ತಮಿಳು ಮತ್ತು ತೆಲುಗಿನ ಪ್ರೇಕ್ಷಕರಿಗೆ ಅದೇ ರೀತಿ ತೋರಿಸುತ್ತೀರಾ? ಅಥವಾ ಬದಲಾವಣೆ ಮಾಡಿದ್ದೀರಾ?" ಎಂಬ ಪತ್ರಕರ್ತರ ಪ್ರಶ್ನೆಗೆ ನಿರ್ದೇಶಕ ರಮೇಶ್ ಉತ್ತರ ನೀಡದೇ ನುಣುಚಿಕೊಂಡರು. ಹಾಗೆಯೇ ಪ್ರತ್ಯೇಕ ತಮಿಳು ರಾಜ್ಯದ ಬೇಡಿಕೆ, ನಕ್ಕೀರನ್ ಗೋಪಾಲ್ ಪಾತ್ರ ಮತ್ತು ಕರ್ನಾಟಕ ಪೊಲೀಸರ ಪಾತ್ರಗಳ ಬಗ್ಗೆ ಕೇಳಿದ ಪ್ರಶ್ನೆಗಳಿಗೆಲ್ಲ ರಮೇಶ್ ಕೆಲವೊಮ್ಮೆ ನಕ್ಕರು, ಕೆಲವೊಮ್ಮೆ ಸುಮ್‌ಸುಮ್ಮನೆ ಸಿಟ್ಟಿಗೆದ್ದರು. ಬಹುತೇಕ ಪ್ರಶ್ನೆಗಳಿಗೆ ಅವರು "ನಾಡಿದ್ದು ಸಿನಿಮಾ ನೋಡಿ" ಎಂಬ ಹಾರಿಕೆಯ ಉತ್ತರ ಕೊಟ್ಟರು.



ಆರು ವರ್ಷಗಳ ಹಿಂದೆ ಇದೇ ರಮೇಶ್ 'ಸೈನೈಡ್' ಎಂಬ ಚಿತ್ರವನ್ನು ನಿರ್ಮಿಸಿ, ನಿರ್ದೇಶಿಸಿ ಎಲ್ಲರ ಮೆಚ್ಚುಗೆ ಜೊತೆಗೆ ಪ್ರಶಸ್ತಿಯನ್ನೂ ಪಡೆದಿದ್ದರು. ಅದಾದನಂತರ ಅವರು 'ಮಿಂಚಿನ ಓಟ' ಮತ್ತು 'ಪೊಲೀಸ್ ಕ್ವಾರ್ಟರ್ಸ್' ಎಂಬ ಸಿನಿಮಾಗಳನ್ನು ನಿರ್ದೇಶಿಸಿದ್ದರೂ ಅವೆರಡೂ ಬಾಕ್ಸ್ ಆಫೀಸಿನಲ್ಲಿ ಮಕಾಡೆ ಮಲಗಿದ್ದವು. ಈಗ 'ಅಟ್ಟಹಾಸ' ಬಿಡುಗಡೆಯಾಗುತ್ತಿದೆ. ಇದರ ಕಥಾಹಂದರವನ್ನು ನೋಡಿದರೆ ಇದು ಬಿಡುಗಡೆಯಾದ ನಂತರ ಹಲವಾರು ವಿವಾದಗಳಿಗೆ ನಾಂದಿ ಹಾಡುವ ಸಾಧ್ಯತೆ ಇದೆ.

ಅಂದಹಾಗೆ, ಈ ಸಿನಿಮಾ ವಿರುದ್ಧದ ಅನೇಕ ಕೇಸುಗಳನ್ನು ಕೋರ್ಟ್‌ನಲ್ಲಿ ಗೆದ್ದಿರುವ ರಮೇಶ್ ಈಗ ಚಿತ್ರವನ್ನು ಬಿಡುಗಡೆ ಮಾಡಲು ರೆಡಿ ಆಗಿದ್ದಾರೆ. ಒಂದು ಸೆನ್ಸಿಟಿವ್ ಕಥಾವಸ್ತುವನ್ನು ಕೈಗೆತ್ತಿಕೊಂಡು, ಎಲ್ಲಾ ರೀತಿಯ ಕಷ್ಟ-ನಷ್ಟ ದೂಷಣೆಗಳನ್ನು ಎದುರಿಸಿ, ಇಂತಹ ಚಿತ್ರ ನಿರ್ಮಿಸಿರುವುದು ಮೆಚ್ಚಬೇಕಾದದ್ದು.

ನಂದಕಿಶೋರ್‌ಗೆ ಸುದೀಪ್ ಕೊಡುಗೆ



ಸುದೀಪ್ ಬಗ್ಗೆ ಒಂದೆರಡು ಮಾತುಗಳನ್ನು ಇಲ್ಲಿ ಹೇಳಲೇಬೇಕು. ರಾಮ್‌ಗೋಪಾಲ್‌ವರ್ಮ ನಿರ್ದೇಶನದಲ್ಲಿ ಹಿಂದಿಯಲ್ಲೂ, ರಾಜ್‌ಮೌಳಿ ನಿರ್ದೇಶನದಲ್ಲಿ ತೆಲುಗಿನಲ್ಲೂ ನಟಿಸಿದ ನಂತರ ಸುದೀಪ್ ಅವರ ತಾರಾಮೌಲ್ಯ, ವರ್ಚಸ್ಸು ಮತ್ತು ಬೇಡಿಕೆ ಹೆಚ್ಚಾಗಿರುವುದು ಈಗ ಎಲ್ಲರಿಗೂ ಗೊತ್ತು.

ಸುದೀಪ್ ಈಗಿರುವ ಸಂದರ್ಭದಲ್ಲಿ ಬೇರೆ ನಟನಿದ್ದಿದ್ದರೆ ಆತ ತನ್ನ ಹೊಸ ಚಿತ್ರಕ್ಕೆ ದೊಡ್ಡ ದೊಡ್ಡ ನಿರ್ದೇಶಕರನ್ನು ಹುಡುಕುತ್ತಾನೆ. ಅಥವಾ ಖ್ಯಾತ ನಿರ್ದೇಶಕರನ್ನೇ ಹಾಕಿ ಚಿತ್ರವನ್ನು ಮಾಡಿ ಎಂದು ನಿರ್ಮಾಪಕರ ಮೇಲೆ ಒತ್ತಡವನ್ನೂ ಹೇರುತ್ತಾನೆ. ಆದರೆ ಸುದೀಪ್ ಇದಕ್ಕೆ ಅಪವಾದ.

ಶಂಕ್ರೇಗೌಡರು ನಿರ್ಮಿಸಲಿರುವ 'ಜಿಂಕಾ...ತಾ..ತಾ' ಚಿತ್ರವನ್ನು ನಿರ್ದೇಶಿಸುವ ಅವಕಾಶವನ್ನು ಸುದೀಪ್ ತನ್ನ ಯುವಮಿತ್ರ ನಂದಕಿಶೋರ್‌ಗೆ ನೀಡಿದ್ದಾರೆ. ಈ ನಂದಕಿಶೋರ್ ಬೇರೆ ಯಾರೂ ಅಲ್ಲ, ಖ್ಯಾತ ಖಳನಟ ದಿವಂಗತ ಸುಧೀರ್ ಅವರ ಮಗ. ನಂದಕಿಶೋರ್ ನಿರ್ದೇಶಿಸಿದ್ದ ಮೊದಲ ಚಿತ್ರ ಇನ್ನೂ ಬಿಡುಗಡೆಯ ಭಾಗ್ಯವನ್ನು ಕಂಡಿಲ್ಲ.

ಆದರೂ ಅವರು ಸದ್ಯಕ್ಕೆ ಶರಣ್ ನಾಯಕನಾಗಿ ನಟಿಸುತ್ತಿರುವ ಹೊಸ ಚಿತ್ರವೊಂದನ್ನು ನಿರ್ದೇಶಿಸುತ್ತಿದ್ದಾರೆ. ಅವರ ಎರಡನೆ ಪ್ರಯತ್ನ ಸಂಪೂರ್ಣಗೊಳ್ಳುವ ಮೊದಲೇ ಈಗ ಅವರಿಗೆ ಸುದೀಪ್ ಚಿತ್ರ ನಿರ್ದೇಶಿಸಲು ಅವಕಾಶ ಸಿಕ್ಕಿರುವುದು ನಿಜಕ್ಕೂ ಎಲ್ಲರಿಗೂ ಆಶ್ಚರ್ಯ ತಂದಿದೆ. ಅದೇನೇ ಇರಲಿ, ತನ್ನ ಸ್ನೇಹಿತನಿಗೆ ತನ್ನ ಚಿತ್ರವನ್ನು ನಿರ್ದೇಶಿಸುವ ಅವಕಾಶ ಮಾಡಿಕೊಡುವ ಮುಖಾಂತರ ಸುದೀಪ್ ತನ್ನ ದೊಡ್ಡತನವನ್ನು ಪ್ರದರ್ಶಿಸಿದ್ದಾರೆ.



ರಮ್ಯಾ ಔಟ್ ಅಂಡ್ ಇನ್



'ನೀರುದೋಸೆ' ಚಿತ್ರದಲ್ಲಿ ನಟಿಸಬೇಕಿದ್ದ ರಮ್ಯಾ ಈಗ ಅದರಿಂದ ಹೊರಬಂದಿದ್ದಾರೆ. ರಮ್ಯ ಹೀಗೆ ಕೊನೆಕ್ಷಣದಲ್ಲಿ "ನನಗೆ 'ದೋಸೆ' ಬೇಡ" ಎಂದು ಯಾಕೆ ಹೇಳಿದರು ಎಂದು ಈಗ ಗಾಂಧಿನಗರದವರು ಕಾಫಿ ಕುಡಿಯುವಾಗ ನಿತ್ಯ ಚರ್ಚೆ ಮಾಡುತ್ತಿದ್ದಾರೆ.

ಈ ಚಿತ್ರದ ನಿರ್ದೇಶಕ ವಿಜಯಪ್ರಸಾದ್ ಆಕೆಯ ಅಚ್ಚುಮೆಚ್ಚಿನ ನಿರ್ದೇಶಕ. "ನನ್ನ ಸ್ವಂತ ನಿರ್ಮಾಣದ ಚಿತ್ರವನ್ನು ವಿಜಯಪ್ರಸಾದ್‌ರವರೇ ಮಾಡಲಿದ್ದಾರೆ" ಎಂದ... ಆಕೆ ಈ ಹಿಂದೆ ಘೋಷಿಸಿದ್ದರು. ಅಂದರೆ ಆಕೆ ನಿರ್ದೇಶ... ಕಾರಣಕ್ಕಾಗಿ 'ದೋಸೆ ಬೇಡ' ಎಂದಿಲ್ಲ ಎಂಬು... ಸ್ಪಷ್ಟ.

ಹಾಗೆಯೇ ರಮ್ಯಾ ಮೇಡಂ ಸಂಭಾ... ವಿಷಯದಲ್ಲಿ ತುಂಬಾ ಸ್ಟ್ರಿಕ್ಟ್ ಎಂಬು... ಎಲ್ಲರಿಗೂ ಗೊತ್ತಿರುವ ವಿಷಯ. ಅನೇಕ ಬ... ನಿಗದಿಯಾದ ಸಂಭಾವನೆ ನೀಡಲು ನಿರ್ಮಾ... ಹಿಂದುಮುಂದೆ ನೋಡಿದಾಗ ಆಕೆ ಸೆಟ್‌ನಿಂದ ಹೊ... ಬಂದಿದ್ದೂ ಇದೆ. ಆದರೆ ಈ ಚಿತ್ರಕ್ಕಾಗಿ ... ದಾಖಲೆಯ 50 ಲಕ್ಷ ರೂಪಾಯಿ ಸಂಭಾವನೆಯ... ಕೇಳಿದ್ದರು. ನಿರ್ಮಾಪಕ ಸುಧೀಂದ್ರ ಅದಕ್ಕೆ ಒಪ್ಪಿದ್ದರ... ಡಿಸೆಂಬರ್ ತಿಂಗಳಲ್ಲೇ ಸುಮಾರು 18 ಲಕ್ಷ ಅಡ್ವಾ... ನೀಡಿ ಉಳಿದ ಸಂಭಾವನೆಯನ್ನು ಯಾವ್ಯಾವ ... ನೀಡುವುದು ಎಂಬುದನ್ನೂ ಖಾತ್ರಿಪಡಿಸಿದ್ದರು. ಅಂ... ಹಣದ ವಿಷಯಕ್ಕೆ ಸಂಬಂಧಿಸಿದಂತೆಯೂ ರ... 'ದೋಸೆ ಬೇಡ' ಎಂದಿಲ್ಲ ಎಂಬುದೂ ಸ್ಪಷ್ಟ.

ಈ ಹಿನ್ನೆಲೆಯಲ್ಲಿ ರಮ್ಯಾ ಮತ್ತು 'ದೋ... ಬಗ್ಗೆ ಗಾಂಧಿನಗರದಲ್ಲಿ ಚಿತ್ರವಿಚಿತ್ರವಾದ ತರ್ಕಗ... ಕೇಳಿಬರುತ್ತಿವೆ. ಆಕೆ ದೋಸೆ ಕ್ಯಾಂಪ್‌ನಿ... ಹೊರಬಂದಿದ್ದೇ ತಡ ಅದಕ್ಕೆ ರಾಜಕೀಯ ಬಣ್ಣ... ಬಂತು. "ವಿಧಾನಸಭಾ ಚುನಾವಣೆ ಹತ್ತಿರಬಂದಿ... ಇಂತಹ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ಪಕ್ಷ... ಕಾರ್ಯಕರ್ತೆಯಾದ ರಮ್ಯಾ ಬಿಜೆಪಿಯ ಸದಸ್ಯರ... ಜಗ್ಗೇಶ್ ಜೊತೆ ನಟಿಸುವುದು ಅಷ್ಟೊಂದು ಸೂಕ್ತವಲ್ಲ" ಎಂದು ಕೆಲವ... ಆಕೆಗೆ ಹೇಳಿದ್ದರಿಂದ ಆಕೆ 'ದೋಸೆ ಕ್ಯಾಂಪ್' ಕಡೆಗೆ ಹೋಗಿಲ್ಲವ... ಎಂಬುದು ಒಂದು ತರ್ಕ.



ಇನ್ನೊಂದು ತರ್ಕ ಯಾವುದೆಂದರೆ ಆ ಚಿತ್ರದಲ್ಲಿ ರಮ್ಯಾ ಬಾರ್‌ಗರ್ಲ್ ಪಾತ್ರವನ್ನು ಮಾಡಬೇಕಿತ್ತು. "ಚುನಾವಣಾ ಸಂದರ್ಭದಲ್ಲಿ ಬಾರ್‌ಗರ್ಲ್ ಅಥವಾ ವೇಶ್ಯೆ ಪಾತ್ರಗಳಲ್ಲಿ ನಟಿಸುವುದರಿಂದ ನಿಮ್ಮ ಇಮೇಜ್‌ಗೆ ತೊಂದರೆಯಾಗಬಹುದು. ಇದರಿಂದ ನೀವು ಚುನಾವಣೆಯಲ್ಲಿ ಸ್ಪರ್ಧಿಸಿದರೆ ವಿರೋಧ ಪಕ್ಷದವರು ಅದರ ಲಾಭ ಪಡೆಯಬಹುದು" ಎಂದು ಆಕೆಯ ಹಿತೈಷಿಗಳು ಸಲಹೆ ನೀಡಿದ್ದರಿಂದ ಆಕೆ ಹೊರಬಂದಿದ್ದಾರೆ ಎಂಬುದು.

ಆರಂಭದಲ್ಲಿಯೇ ನವರಸನಾಯಕ ಜಗ್ಗೇಶ್ ಜೊತೆ ರಮ್ಯಾ ನಿಜವಾಗಲ... ನಟಿಸುತ್ತಾರೆಯೇ ಎಂದು ಗಾಂಧಿನಗರದ ಜನ ಆಶ್ಚರ್ಯ ವ್ಯಕ್ತಪಡಿಸಿದ್ದರ... ವಾಸ್ತವವಾಗಿ ರಮ್ಯಾ ಅವರನ್ನು ರಾಜ್‌ಕುಮಾರ್ ಕುಟುಂಬಕ್ಕೆ ಮತ್ತು ... ಮೂಲಕ ಚಿತ್ರರಂಗಕ್ಕೆ ಪರಿಚಯಿಸಿದ್ದೇ ಜಗ್ಗೇಶ್ ಎಂಬುದು ಅನೇಕರಿಗೆ ಗೊತ್ತಿ... ಜಗ್ಗೇಶ್ ಋಣವನ್ನು ತೀರಿಸುವ ದೃಷ್ಟಿಯಿಂದ ರಮ್ಯಾ 'ನೀರುದೋಸೆ' ಚಿತ್ರದ... ನಟಿಸಲು ಒಪ್ಪಿಕೊಂಡಿದ್ದಾರೆ ಎಂಬ ಸುದ್ದಿ ಅಲ್ಲಲ್ಲಿ ಕೇಳಿಬಂದಿತ್ತು.

ಹೆಂಚಿನ ಮೇಲೆ 'ನೀರುದೋಸೆ'ಯನ್ನು ಸುರಿಯುವ ಮುನ್ನವೇ ಈ ಚಿ... ಸಾಕಷ್ಟು ಸುದ್ದಿ ಮಾಡಿದೆ. ರಮ್ಯ ಇದರಲ್ಲಿ ನಟಿಸಲು ಒಪ್ಪಿದ್ದು, ಈ... ಹೊರಬಂದಿರುವುದೂ ಮತ್ತೆ ಸುದ್ದಿಯಾಗಿದೆ. ಆದರೂ ಇಷ್ಟು ಹೊತ್ತಿಗೆ ... ಸಿನಿಮಾದ ಚಿತ್ರೀಕರಣವನ್ನು ಆರಂಭಿಸಬೇಕಿದ್ದ ನಿರ್ದೇಶಕ ವಿಜಯಪ್ರಸಾ... ಮಾತ್ರ ಈಗ ತಲೆಮೇಲೆ ಕೈಯಿಟ್ಟು ಕೂತಿದ್ದಾರೆ. ಇದೀಗ ಬಂದ ಸು... ಪ್ರಕಾರ ರಮ್ಯಾ ಮತ್ತೆ ನೀರು ದೋಸೆಯಲ್ಲಿ ನಟಿಸಲು ಒಪ್ಪಿಕೊಂಡ... ದೋಸೆ ಕ್ಯಾಂಪ್‌ಗೆ ವಾಪಸ್ಸಾಗಿದ್ದಾಳೆ.

● ಶೇಣೆ...

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com